ಕರ್ನಾಟಕ ವಿಧಾನ ಸಭೆ
ಬುಧವಾರ, 21ನೇ ಮಾರ್ಚ್ 2012ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆ 05 ನಿಮಿಷಕ್ಕೆ
ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯರವರು ಪೀಠವನ್ನು ಅಲಂಕರಿಸಿದರು.

ಅಧ್ಯಕ್ಷರು : 2012-13ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸುವುದು.

1. ಆಯವ್ಯಯ ಮಂಡನೆ :

ಶ್ರೀ ಡಿ.ವಿ. ಸದಾನಂದಗೌಡ, (ಮುಖ್ಯಮಂತ್ರಿಗಳು) :

ಮಾನ್ಯ ಸಭಾಧ್ಯಕ್ಷರೆ,

1. **'ಅನ್ನವ ಕೊಟ್ಟ ಹೊಲಕೆ ನಮಿಸಿ, ಚಿನ್ನವ ಸುರಿದ ನೆಲಕೆ ನಮಿಸಿ, ಅನ್ನದಾತ ರೈತನನ್ನು ಸ್ಮರಿಸಿ,** 2012-13ನೇ ಸಾಲಿನ ಕೃಷಿ ಆಯವ್ಯಯವನ್ನು ಮಂಡಿಸಲು ಹರ್ಷಿಸುತ್ತೇನೆ. ಇದು ಪ್ರತ್ಯೇಕವಾಗಿ ಮಂಡಿಸಲಾದ ಎರಡನೆಯ ಕೃಷಿ ಆಯವ್ಯಯ. ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿ ಮತ್ತು ಅನ್ನದಾನ ಕೃಷಿಕನ ಸಬಲೀಕರಣದ ದೃಷ್ಟಿಯಿಂದ ಕಳೆದ ವರ್ಷ (2011-12) ಮಂಡಿಸಲಾದ ಪ್ರಥಮ ಕೃಷಿ ಆಯವ್ಯಯಕ್ಕೆ ವ್ಯಾಪಕ ಬೆಂಬಲ ಮತ್ತು ಸ್ವಾಗತ ದೊರಕಿದೆ. ವಿಶೇಷವಾಗಿ ರೈತ ಬಂಧುಗಳು ಇದನ್ನು ಸ್ವಾಗತಿಸಿದ್ದು ನಮ್ಮ ಹುಮ್ಮಸ್ಸನ್ನು ಹೆಚ್ಚಿಸಿದೆ.

ಇಕೋ ನೆಲ-ಅಕೋ ಜಲ
ಅದರ ಮೇಲೆ ಮರದ ಫಲ
ಮನದೊಳಿದೆ ಪಡೆವ ಛಲ
ಬೆಳೆವಗೆ ನೆಲವೆಲ್ಲ ಹೊಲ.

ಜಲಧಿವರೆಗು ಒಂದೆ ಕುಲ
ಅನ್ನವೆ ಧರ್ಮದ ಮೂಲ
ಪ್ರೀತಿಯೆ ಮೋಕ್ಷಕ್ಕೆ ಬಲ

ಇದೇ ಶೀಲ ಸರ್ವಕಾಲ // ಇಕೋ ನೆಲ

......ಚನ್ನವೀರಕಣವಿ

ಮಳೆ ಬಿಸಿಲು ಗಾಳಿಗೆ ಮೈಯೊಡ್ಡಿ ಹಗಲು-ರಾತ್ರಿ ದುಡಿದು ನಮ್ಮೆಲ್ಲರಿಗೂ ಅನ್ನ ನೀಡುವ ಬೆಳೆವ ರೈತ ಮತ್ತು ಭೂಮಿಯನ್ನು ಕುರಿತು ಕನ್ನಡದ ಪ್ರಸಿದ್ಧ ಕವಿ ಚನ್ನವೀರ ಕಣವಿ ಅವರ ಕವನದ ಸಾಲುಗಳು ಅರ್ಥಪೂರ್ಣ.

ಭೂಮಿಯೇ ದೈವ,
ಭೂಮಿಯೇ ತಾಯಿ,
ಉಳುಮೆಯೇ ಅರ್ಚನೆ,
ಬೆಳೆಯಾರೈಕೆ ಮಂತ್ರ,
ಸುಗ್ಗಿ ಫಲವೇ ದೇವರು ಕೊಟ್ಟ ವರ.

ರೈತನ ನಂಬಿಕೆಯ ಬಗ್ಗೆ ಕವಿ ಹೇಳಿರುವ ಈ ಸಾಲುಗಳನ್ನು ನಾವೆಲ್ಲಾ ಮನನ ಮಾಡಿಕೊಂಡಾಗ ಕೃಷಿಯ ಮತ್ತು ಕೃಷಿಕನ ಮಹತ್ವ ಅರ್ಥವಾಗುತ್ತದೆ.

2. ನಮ್ಮ ರಾಷ್ಟ್ರದಲ್ಲಿ ಪ್ರಪ್ರಥಮ ಬಾರಿಗೆ, ಪ್ರತ್ಯೇಕ ಕೃಷಿ ಆಯವ್ಯಯವನ್ನು 2011-12ನೇ ಸಾಲಿನಲ್ಲಿ ಮಂಡಿಸಿದ ಕೀರ್ತಿ ನಮ್ಮ ಸರ್ಕಾರದ್ದಾಗಿದೆ. ಈ ವಿನೂತನ ಪ್ರಯತ್ನವನ್ನು ಶ್ಲಾಘಿಸಿ, ರಾಷ್ಟ್ರ ಯೋಜನಾ ಆಯೋಗದ ಸದಸ್ಯರಲ್ಲದೆ ಹಲವಾರು ರಾಜ್ಯಗಳು ಮೆಚ್ಚುಗೆ ವ್ಯಕ್ತಪಡಿಸಿವೆ. ಇತರೆ ರಾಜ್ಯಗಳ ಪ್ರತಿನಿಧಿಗಳು ನಮ್ಮ ಕೃಷಿ ಆಯವ್ಯಯದ ವಿವಿಧ ಅಂಶಗಳನ್ನು ಅರಿಯಲು ಹಾಗೂ ಅನುಷ್ಠಾನದ ಬಗ್ಗೆ ಅಧ್ಯಯನ ಮಾಡಲು ನಮ್ಮ ರಾಜ್ಯಕ್ಕೆ ವಿಶೇಷ ಭೇಟಿ ಕೊಟ್ಟು, ಚರ್ಚೆ ಮಾಡಿದ್ದಾರೆ.

3. ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ 2010-11ನೇ ಸಾಲಿನಲ್ಲಿ ಕೃಷಿ ಕ್ಷೇತ್ರದಲ್ಲಿ ಶೇ. 13.3 ರಷ್ಟು ಬೆಳವಣಿಗೆ ಸಾಧಿಸಲಾಗಿತ್ತು. 2011-12ನೇ ಸಾಲಿನಲ್ಲಿ 123 ತಾಲ್ಲೂಕುಗಳಲ್ಲಿ ಉಂಟಾದ ಬರದ ಪರಿಸ್ಥಿತಿಯಿಂದ ಕೃಷಿ

ಕ್ಷೇತ್ರದ ಬೆಳವಣಿಗೆ ಕುಂಠಿತವಾಗಿದೆ. ಈ ಬೆಳವಣಿಗೆಯನ್ನು ಸುಧಾರಿಸುವುದು ನಮ್ಮ ಎರಡನೆಯ ಕೃಷಿ ಆಯವ್ಯಯದ ಪ್ರಧಾನ ಆಶಯವಾಗಿದೆ.

4. ಮಾನವನೂ ಸೇರಿ ಎಲ್ಲಾ ಜೀವ ಸಂಕುಲದ ಉಳಿವಿಗೆ ಕೃಷಿಯೇ ಆಧಾರವಾದ್ದರಿಂದ ಕೃಷಿಯನ್ನು ಜೀವನಾಧಾರ ಕಸುಬೆಂದು ಗುರುತಿಸಲಾಗಿದೆ. ಕೈಗಾರಿಕೆಯೂ ಸೇರಿ ಎಲ್ಲಾ ಕಸುಬುಗಳು, ವಾಣಿಜ್ಯ, ವ್ಯಾಪಾರ ಮತ್ತಿತರ ವಹಿವಾಟುಗಳು ಬಹುತೇಕ ಕೃಷಿಯನ್ನೇ ಅವಲಂಬಿಸಿವೆ. ಕೃಷಿಯಿಂದ ಹೊರತಾದ ಯಾವುದೇ ಉತ್ಪಾದಕ ಚಟುವಟಿಕೆಯನ್ನು ನಿರೀಕ್ಷಿಸುವುದು ಅಸಾಧ್ಯ. ಆದ್ದರಿಂದ ಕೃಷಿ ಕ್ಷೇತ್ರದ ಸಮಗ್ರ ಸಬಲೀಕರಣ ಮತ್ತು ಕೃಷಿಯ ಪೋಷಕನಾದ ಅನ್ನದಾತ ರೈತನ ಕಲ್ಯಾಣ ನಮ್ಮ ಸರ್ಕಾರದ ಆದ್ಯತೆಗಳಾಗಿವೆ. ಕೃಷಿ ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆ, ಮಾರುಕಟ್ಟೆ ಸಹಕಾರ ಕ್ಷೇತ್ರ, ನೀರಾವರಿ ಮೊದಲಾದ ವಲಯಗಳಿಗೆ ಈ ವರ್ಷದ ಆಯವ್ಯಯದಲ್ಲಿ ಅತಿ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಕಳೆದ ವರ್ಷ– ಒಂದು ಹಿನ್ನೋಟ

5. ಕಳೆದ 2011–12ರ ಸಾಲಿನಲ್ಲಿ ನಮ್ಮ ಸರ್ಕಾರ ಪ್ರಕೃತಿ ಮತ್ತು ಪರಿಸರದ ಕೆಲವು ಇತಿ–ಮಿತಿಗಳನ್ನು ಎದುರಿಸಬೇಕಾಯಿತು. ಆದರೂ ನಮ್ಮ ಸರ್ಕಾರ ಕಳೆದ ವರ್ಷ ಕೃಷಿ ಮತ್ತು ಕೃಷಿಯೇತರ ಪ್ರಗತಿಗೆ ಹಲವಾರು ವಿನೂತನ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದೆ.

ಬರ–ವಿಪತ್ತು ನಿರ್ವಹಣೆ

6. 2011–12ನೇ ಸಾಲಿನಲ್ಲಿ ಮುಂಗಾರು ಮಳೆ ನಿಯಮಿತವಾಗಿ ಪ್ರಾರಂಭವಾದರೂ, ಉತ್ತರ ಮತ್ತು ಒಳನಾಡು ಪ್ರದೇಶದಲ್ಲಿ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಎರಡನೇ ವಾರದಲ್ಲಿ ಮಳೆಯ ತೀವ್ರ ಕೊರತೆಯುಂಟಾಯಿತು. ಮಳೆಯ ಕೊರತೆ ಶೇಕಡ 20 ರಷ್ಟು ಹಾಗೂ ಸತತವಾಗಿ 4 ವಾರ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ಮುಂದುವರಿದ ಒಣ ಹವೆಯಿದ್ದ ಕಾರಣ ರಾಜ್ಯವು ತತ್‌ಕ್ಷಣ ರೈತರ ಅನುಕೂಲದ ದೃಷ್ಟಿಯಿಂದ ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳನ್ನು ಬರ–ಪೀಡಿತ ಪ್ರದೇಶ ಎಂದು ಘೋಷಿಸಲಾಯಿತು.

7. ಕೃಷಿ ವಲಯದಲ್ಲಿ, ಒಣ ಹವೆಯಿಂದ ಮುಂಗಾರು ಋತುವಿನಲ್ಲಿ, 22.36 ಲಕ್ಷ ಹೆಕ್ಟೇರ್, ಹಿಂಗಾರು ಋತುವಿನಲ್ಲಿ 12.11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ತೋಟಗಾರಿಕೆ ವಲಯದ ಮುಂಗಾರು ಋತುವಿನಲ್ಲಿ, 0.69 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ.

8. ರಾಜ್ಯದಲ್ಲಿರುವ ಬರ-ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಸರ್ಕಾರದ ನೆರವು ಕೋರುತ್ತಾ, 2606 ಕೋಟಿ ರೂ. ಬಿನ್ನವತ್ತಳಿಕೆಯನ್ನು ಕೇಂದ್ರ ಕೃಷಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದ ಕೇಂದ್ರ ಅಧ್ಯಯನ ತಂಡವು ದಿನಾಂಕ 15 ರಿಂದ 18ರ ಡಿಸೆಂಬರ್ 2011 ರವರೆಗೆ ರಾಜ್ಯದ 13 ಜಿಲ್ಲೆಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯಿಂದಾಗಿರುವ ತೀವ್ರತೆ ಮತ್ತು ಆಗಿರುವ ನಷ್ಟದ ಬಗ್ಗೆ ವರದಿಯನ್ನು ಕೇಂದ್ರ ಕೃಷಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಸಂಪರ್ಕ ದಲ್ಲಿದ್ದು, ಅವರ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ.

9. ಬರದ ಪರಿಸ್ಥಿತಿಯನ್ನು ನಿರ್ವಹಿಸಲು, ವಿವಿಧ ಚಟುವಟಿಕೆ ಗಳಿಗಾಗಿ 301 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳಲ್ಲಿ, ಟ್ಯಾಂಕರ್ ಮತ್ತು ಬೋರ್‌ವೆಲ್ ಗಳ ಮೂಲಕ ಕುಡಿಯುವ ನೀರಿನ ಸೌಕರ್ಯ, 34 ಗೋಶಾಲೆಗಳ ಸ್ಥಾಪನೆ, ಮೇವಿನ ಬ್ಯಾಂಕುಗಳನ್ನು ಸ್ಥಾಪಿಸಿ ಮೇವನ್ನು ಖರೀದಿಸಿ ಸಂಗ್ರಹಿಸುವುದು ಮತ್ತು ಇತರೆ ಪರಿಕಾರಾತ್ಮಕ ಕ್ರಮಗಳನ್ನು ಒಳಗೊಂಡಿದೆ. ಸಚಿವ ಸಂಪುಟ ಉಪ ಸಮಿತಿಯ ಮಾರ್ಗದರ್ಶನದ ಮೇರೆಗೆ ಮತ್ತು ವೀಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಡಳಿತದ ಉಸ್ತುವಾರಿಯಿಂದ ಈ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

10. ಸಾಮಾನ್ಯ ಸ್ಥಿತಿಯಲ್ಲಾಗಿದ್ದರೆ ನಮ್ಮ ರಾಜ್ಯದ ಆಹಾರ ಧಾನ್ಯಗಳ ಉತ್ಪಾದನೆ, ಬರದ ಪರಿಣಾಮದಿಂದ ಶೇ.50 ರಷ್ಟು ಇಳಿಮುಖವಾಗಬೇಕಿತ್ತು. ಆದರೆ, ನಮ್ಮ ಸರ್ಕಾರ ರಾಜ್ಯಾದ್ಯಂತ ಅನುಷ್ಠಾನಗೊಳಿಸಿದ ವಿವಿಧ ಯೋಜನೆಗಳಿಂದ ಆಹಾರ ಧಾನ್ಯಗಳ ಒಟ್ಟು ಉತ್ಪಾದನೆಯಲ್ಲಿ ಕಳೆದ ವರ್ಷಕ್ಕಿಂತ ಕೇವಲ ಶೇ.10 ರಷ್ಟು ಮಾತ್ರ ಕಡಿಮೆ ಆಗಿದೆ. (2010-11ರಲ್ಲಿ 140 ಲಕ್ಷ ಟನ್‌ಗಳಿಂದ, 2011-12ರಲ್ಲಿ 124 ಲಕ್ಷ ಟನ್‌ಗಳು).

11. 2011–12ನೇ ಸಾಲಿನ ಕೃಷಿ ಆಯವ್ಯಯದ ಪ್ರಮುಖ ಸಾಧನೆಗಳು

ಕೃಷಿ.

- ❖ ಬರ ಪರಿಸ್ಥಿತಿಯಲ್ಲೂ ರಾಜ್ಯವು ಗುರಿಯ ಶೇ.92 ರಷ್ಟು ಆಹಾರ ಧಾನ್ಯಗಳ ಉತ್ಪಾದನೆ ಸಾಧಿಸಿದೆ; (124.24 ಲಕ್ಷ ಟನ್).
- ❖ ಸುವರ್ಣ ಭೂಮಿ ಯೋಜನೆಯಲ್ಲಿ 6.92 ಲಕ್ಷ ರೈತರಿಗೆ ನೆರವನ್ನು ಒದಗಿಸಲಾಗಿದೆ.
- ❖ ಭೂಚೇತನ ಯೋಜನೆಯನ್ನು 30 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಿದ್ದು, ಬರಗಾಲ ಇಲ್ಲದ ಪ್ರದೇಶಗಳಲ್ಲಿ ಇಳುವರಿಯಲ್ಲಿ ಸರಾಸರಿ ಪ್ರತಿಶಕ 21 ರಿಂದ 43 ರಷ್ಟು ಹೆಚ್ಚಳವನ್ನು ಸಾಧಿಸಲಾಗಿದೆ.
- ❖ ಬೇಡಿಕೆಗಿಂತ ಹೆಚ್ಚಿನ ಬಿತ್ತನೆ ಬೀಜ ವಿತರಿಸಲಾಗಿದೆ.
- ❖ ಸಕಾಲದಲ್ಲಿ ರಸಗೊಬ್ಬರ ಪೂರೈಸಲಾಗಿದೆ.
- ❖ ದೇಶದಲ್ಲೇ ಪ್ರಪ್ರಥಮವಾಗಿ "ಸಮಗ್ರ ಕೃಷಿ ವಾಣಿಜ್ಯ ಅಭಿವೃದ್ಧಿ ನೀತಿ" ಹೊರ ತಂದಿದ್ದು, ರಾಷ್ಟ್ರದಲ್ಲೇ ಪ್ರಥಮವಾದ "ಕೃಷಿ ವಾಣಿಜ್ಯ ಮತ್ತು ಆಹಾರ ಸಂಸ್ಕರಣೆ ಸಮಾವೇಶ – 2011" ನ್ನು ಡಿಸೆಂಬರ್ 1–2, 2011ರಲ್ಲಿ ಆಯೋಜಿಸಲಾಗಿತ್ತು. ಈ ಸಮಾವೇಶ ದಲ್ಲಿ ಒಟ್ಟು 60,872 ಕೋಟಿ ರೂ.ಗಳ 57 ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.
- ❖ ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಸಂಸ್ಕರಣಾ ಯೋಜನೆಯಡಿ ಈವರೆಗೆ 765 ಡೀಸೆಲ್ ಪಂಪ್‌ಸೆಟ್, 244 ಕೃಷಿ ಸಂಸ್ಕರಣಾ ಘಟಕಗಳು ಮತ್ತು 4,500 ಹೈಟೆಕ್ ಕೃಷಿ ಉಪಕರಣಗಳನ್ನು ರೈತರಿಗೆ ಒದಗಿಸಲಾಗಿದೆ.
- ❖ ಲಘು ನೀರಾವರಿ ಯೋಜನೆಯಡಿ 73 ಕೋಟಿ ರೂ. ಅನುದಾನ ಒದಗಿಸಿದ್ದು, 43,435 ಹೆಕ್ಟೇರ್ ಪ್ರದೇಶಕ್ಕೆ ತುಂತುರು ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳನ್ನು ಶೇ. 75ರ ರಿಯಾಯಿತಿ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗಿದೆ.

- 14 ಜಿಲ್ಲೆಗಳಲ್ಲಿ ಸಾವಯವ ಕೃಷಿಕರೊಂದಿಗೆ ಸಂವಾದ ನಡೆಸಿದ್ದು, ಒಟ್ಟು 1,18,677 ಹೆಕ್ಟೇರ್ ಪ್ರದೇಶಗಳಿಗೆ ಸಾವಯವ ಕೃಷಿಯನ್ನು ವಿಸ್ತರಿಸಲಾಗಿದೆ. 65 ಕ್ಕೂ ಹೆಚ್ಚು ಸಾವಯವ ಮಾರಾಟ ಮಳಿಗೆಯನ್ನು ಪ್ರಾರಂಭಿಸಿದ್ದು, ಸಾಂಸ್ಥಿಕ ವ್ಯವಸ್ಥೆ ರೂಪಿಸಲು ಕರ್ನಾಟಕ ಅಮೃತ ಭೂಮಿ ಯೋಜನೆಯ ಅನುಷ್ಠಾನ ಘಟಕವನ್ನು ರಚಿಸಲಾಗಿದೆ.

- ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಲ್ಪಾವಧಿ ಪ್ರಾಮಾಣಿಕೃತ ಮತ್ತು ಡಿಪ್ಲೋಮೋ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.

- ಕೃಷಿ ವಲಯಕ್ಕೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳಿಂದ ಒಟ್ಟು 28,242 ಕೋಟಿ ರೂ.ಗಳ ಸಾಲವನ್ನು ಒದಗಿಸಲಾಗಿದೆ.

ತೋಟಗಾರಿಕೆ

- 2011–12ನೇ ಸಾಲಿನಲ್ಲಿ 43,783 ಹೆಕ್ಟೇರ್ ಹೊಸ ಪ್ರದೇಶವನ್ನು ಸೂಕ್ಷ್ಮ ನೀರಾವರಿಯಡಿಯಲ್ಲಿ ತರಲಾಗಿದೆ.

- 19,390 ಹೆಕ್ಟೇರ್ ಪ್ರದೇಶದಲ್ಲಿ ಸಾವಯವ ತೋಟಗಾರಿಕೆ ಅಳವಡಿಕೆ ಮಾಡಲಾಗಿದೆ.

- ದಕ್ಷಿಣ ಕನ್ನಡ ಜಿಲ್ಲೆಯ ತುಂಬೆ ಕ್ಷೇತ್ರದಲ್ಲಿ DFRL ಮತ್ತು CFTRI ತಂತ್ರಜ್ಞಾನದೊಂದಿಗೆ ನೀರಾ ಸಂಸ್ಕರಣಾ ಘಟಕವನ್ನು ಪ್ರಾರಂಭಿಸಲಾಗಿದೆ.

- 3300 ಎಕರೆ ಪ್ರದೇಶವನ್ನು ಬಾಳೆ ನಿಖರ ಬೇಸಾಯದಡಿಯಲ್ಲಿ ತರಲಾಗಿದ್ದು, ಈ ಯೋಜನೆಯನ್ನು ಸಂಪೂರ್ಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಅನುಷ್ಠಾನಗೊಳಿಸಲಾಗಿದೆ.

- ತೋಟಗಾರಿಕೆ ಮಾಹಿತಿ ಮತ್ತು ಸಂಬಂಧಪಟ್ಟ ಸೇವೆಗಳನ್ನು ಒದಗಿಸಲು ಜಿಲ್ಲಾ ಮಟ್ಟದಲ್ಲಿ 28 ತೋಟಗಾರಿಕೆ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

- ಚಿಕ್ಕಬಳ್ಳಾಪುರ, ತುಮಕೂರು, ಮೈಸೂರು, ಸಿರ್ಸಿ ಮತ್ತು ಬೆಂಗಳೂರಿನ ಕನ್ನಮಂಗಲಗಳಲ್ಲಿ 5 ಹೊಸ ಸಸ್ಯ ಉದ್ಯಾನಗಳನ್ನು ಸ್ಥಾಪಿಸಲಾಗುತ್ತಿದೆ.
- ತುಮಕೂರು ಜಿಲ್ಲೆಯ ಚಿಕ್ಕನಹಳ್ಳಿ ಮತ್ತು ದಾವಣಗೆರೆಯಲ್ಲಿ 2 ಪುಷ್ಪ ಹರಾಜು ಕೇಂದ್ರಗಳನ್ನು ನಿರ್ಮಿಸಿ ಕಾರ್ಯಗತಗೊಳಿಸಲಾಗುತ್ತಿದೆ. ಕೋಲಾರ ಜಿಲ್ಲೆಯ ಹೊಗಳಗೆರೆ ಕ್ಷೇತ್ರದಲ್ಲಿ ಮಾವು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಪಶುಸಂಗೋಪನೆ

- ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 2 ರೂ. ಪ್ರೋತ್ಸಾಹ ಧನ ನೀಡಲಾಗಿದ್ದು, ಹಾಲು ಸರಬರಾಜು ಮಾಡುವವರ ಸಂಖ್ಯೆಯಲ್ಲಿ ಶೇ.11.3 ರಷ್ಟು ಮತ್ತು ಹಾಲಿನ ಪ್ರಮಾಣದಲ್ಲಿ ಶೇ.13.2 ರಷ್ಟು ಹೆಚ್ಚಳವಾಗಿದೆ.
- ಜಾನುವಾರು ತುರ್ತು ಚಿಕಿತ್ಸೆಗಾಗಿ ಪಿ.ಪಿ.ಪಿ. ಮಾದರಿಯಲ್ಲಿ ಧನ್ವಂತ್ರಿ ಯೋಜನೆಯಡಿ 26 ತಾಲ್ಲೂಕುಗಳಲ್ಲಿ ಖಾಸಗಿ ಸಹಭಾಗಿತ್ವಕ್ಕಾಗಿ ಟೆಂಡರ್ ಕರೆಯಲಾಗಿದೆ.
- 583 ಪಶುವೈದ್ಯಕೀಯ ಸಂಸ್ಥೆಗಳ ಕಟ್ಟಡಗಳು, ಆಸ್ಪತ್ರೆಗಳು ಮತ್ತು 66 ಔಷಧಾಲಯ ಕಟ್ಟಡಗಳ ನಿರ್ಮಾಣ.
- ಶಿಕಾರಿಪುರ ತಾಲ್ಲೂಕಿನಲ್ಲಿ 300 ಮೆಟ್ರಿಕ್ ಟನ್ ಪಶು ಆಹಾರ ಉತ್ಪಾದನಾ ಘಟಕದ ಕಾಮಗಾರಿ ಪ್ರಗತಿಯಲ್ಲಿವೆ.
- ತುಮಕೂರು ಜಿಲ್ಲೆ ಕೋನೇನಹಳ್ಳಿಯಲ್ಲಿ ಹೊಸ ಪಶುಸಂಗೋಪನೆ ಪಾಲಿಟೆಕ್ನಿಕ್ ಸ್ಥಾಪಿಸಲಾಗಿದೆ.
- ಅಮೃತ ಯೋಜನೆಯಡಿಯಲ್ಲಿ ವಿಧವೆ, ದೇವದಾಸಿ, ನಿರ್ಗತಿಕ ಮಹಿಳೆಯರಿಗೆ 37.85 ಕೋಟಿ ರೂ.ಗಳ ಸಹಾಯಧನವನ್ನು ನೀಡಲಾಗಿದೆ.

ಮೀನುಗಾರಿಕೆ

- ❖ ಮೀನುಮರಿಗಳ ಉತ್ಪಾದನೆಯಲ್ಲಿ ಶೇ.35 ರಷ್ಟು ಹೆಚ್ಚಳವಾಗಿದೆ.
- ❖ ಮೀನುಗಾರರಿಗೆ ನೀಡುವ ಕರ ರಹಿತ ಡೀಸೆಲ್ ಪ್ರಮಾಣವನ್ನು 1.15 ಲಕ್ಷ ಕಿಲೋ ಲೀಟರ್‌ಗೆ ಹೆಚ್ಚಿಸಲಾಗಿದೆ.
- ❖ ಮಂಜುಗಡ್ಡೆ ಮತ್ತು ಶೈತ್ಯಾಗಾರ ಬಳಸಿದ ವಿದ್ಯುತ್ ಮೇಲೆ ಯೂನಿಟ್‌ಗೆ ರೂ.1 ರಂತೆ ಸಹಾಯಧನ ನೀಡಲಾಗಿದೆ.
- ❖ ಹೆಜಮಾಡಿ ಕೋಡಿ ಮೀನು ತಂಗುದಾಣದಲ್ಲಿ ಹೂಳೆತ್ತುವ ಕಾಮಗಾರಿ ಪೂರ್ಣಗೊಳಿಸಲಾಗಿದೆ ಮತ್ತು ಬೇಲಿಕೇರಿ ಮೀನುಗಾರಿಕೆ ತಂಗುದಾಣದಲ್ಲಿ ಜಟ್ಟಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗಿದೆ.

ರೇಷ್ಮೆ

- ❖ ರೇಷ್ಮೆ ಬೆಳೆಗಾರರ ಹಿತ ಕಾಪಾಡಲು ಸರ್ಕಾರವು ಪ್ರತಿ ಕೆ.ಜಿ.ಗೆ ರೂ.160 ಕ್ಕಿಂತ ಕಡಿಮೆ ಪಡೆದಂತಹ ಗೂಡಿಗೆ ರೂ.30 ರವರೆಗೆ ಸಂಕಷ್ಟ ಉಪಶಮನ ಪರಿಹಾರ ಘೋಷಿಸಿದೆ..
- ❖ ಹಿಂದಿನ ಸಾಲಿನಲ್ಲಿ ಇದ್ದಂತಹ ಫಲಾನುಭವಿಗಳ ಎಲ್ಲಾ ಬಾಕಿ ಪ್ರಕರಣಗಳಿಗೆ ಸಂಪೂರ್ಣ ಸಹಾಯಧನವನ್ನು ಒದಗಿಸಲಾಗಿರುತ್ತದೆ.

ಸಹಕಾರ

- ❖ 2011-12ರ ಅಂತ್ಯದವರೆಗೆ ಸಾಲದ ವಿತರಣೆಯು 6,000 ಕೋಟಿ ರೂ.ಗಳನ್ನು ದಾಟುವ ಸಾಧ್ಯತೆ ಇದೆ.
- ❖ ಯಶಸ್ವಿನಿ ಕಾರ್ಯಕ್ರಮದಡಿ 81,555 ಸದಸ್ಯರು ಉಪಯೋಗ ಪಡೆಯಲಿದ್ದಾರೆ.
- ❖ ಭತ್ತ, ಈರುಳ್ಳಿ, ತೊಗರಿ ಉತ್ಪನ್ನಗಳನ್ನು ಬೆಂಬಲ ಬೆಲೆಗೆ ಖರೀದಿಸಿದ್ದು, ಇದರಿಂದ 31,944 ರೈತರು ಪ್ರಯೋಜನ ಪಡೆದಿರುತ್ತಾರೆ.

ಜಲಸಂಪನ್ಮೂಲ

- 2011-12ನೇ ಸಾಲಿನಲ್ಲಿ ಈವರೆವಿಗೆ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಂದ ಒಟ್ಟು 1,35,850 ಎಕರೆ ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಸಣ್ಣ ನೀರಾವರಿ ಯೋಜನೆಗಳಿಂದ 16,557 ಹೆಕ್ಟೇರ್ ವಿಸ್ತೀರ್ಣದಲ್ಲಿ ಹೊಸ ನೀರಾವರಿ ಮತ್ತು 11,100 ಹೆಕ್ಟೇರ್ ಪ್ರದೇಶದಲ್ಲಿ ಸ್ಥಿರೀಕರಿಸಿದ ನೀರಾವರಿ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ಸಾಲಿನಲ್ಲಿ 310 ಕೋಟಿ ರೂ. ವೆಚ್ಚದಲ್ಲಿ ತುಂಗಭದ್ರಾ ಎಡದಂಡೆ ನಾಲಾ ಹಾಗೂ ವಿತರಣಾ ನಾಲಾ ಆಧುನೀಕರಣ ಪೂರ್ಣಗೊಂಡಿದ್ದು, ಕಬಿನಿ ನಾಲಾ ಮತ್ತು ಕಾವೇರಿ ಕೊಳ್ಳದ ಕಟ್ಟೆಪುರ ಅಣೆಕಟ್ಟೆಯ ಆಧುನೀಕರಣ ಪ್ರಗತಿಯಲ್ಲಿದೆ. ಬಿಜಾಪುರ ಜಿಲ್ಲೆಯ 16 ಕೆರೆಗಳು ಹಾಗೂ ಬಾಂದಾರಗಳಿಗೆ ನೀರು ತುಂಬಿಸುವ ಯೋಜನೆ ಪ್ರಗತಿಯಲ್ಲಿವೆ.

- ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಗುತ್ತಿಬಸವಣ್ಣ ಯೋಜನೆ ಮತ್ತು ಚಿಮ್ಮಲಗಿ, ಮಲ್ಲಾಬಾದ್ ಏತ ನೀರಾವರಿ ಯೋಜನೆ ಹೆಡ್‌ವರ್ಕ್ಸ್ ಮತ್ತು ಮುಳುವಾಡ ಏತ ನೀರಾವರಿ ಯೋಜನೆ ಹಂತ-3ರ ಕಾಮಗಾರಿಗಳು ನಡೆಯುತ್ತಿವೆ. ಗೂಳೂರು-ಹೆಬ್ಬೂರು ಹಾಗೂ ಹೊನ್ನವಳ್ಳಿ ಕುಡಿಯುವ ನೀರಿನ ಯೋಜನೆಗಳು ಮುಗಿದಿದ್ದು, ಪ್ರಾಯೋಗಿಕವಾಗಿ ನೀರು ಹರಿಸಲಾಗುತ್ತಿದೆ. ಕೃಷ್ಣರಾಜ ಸಾಗರದಲ್ಲಿ ಶಿಥಿಲಗೊಂಡಿದ್ದ 16 ಗೇಟುಗಳ ಆಧುನೀಕರಣ ಪೂರ್ಣಗೊಂಡಿದ್ದು ಉಳಿದ 6 ಗೇಟುಗಳ ನವೀಕರಣ ಪ್ರಗತಿಯಲ್ಲಿದೆ.

- ಸಮಗ್ರ ಜಲಸಂಪನ್ಮೂಲ ನಿರ್ವಹಣಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಎ.ಡಿ.ಬಿ. ಸಂಸ್ಥೆಯು ತಾಂತ್ರಿಕ ವರದಿ ನೀಡಿದೆ ಹಾಗೂ ವಿಸ್ತೃತ ಯೋಜನಾ ವರದಿ ಪ್ರಗತಿಯಲ್ಲಿದೆ. ವಿಶ್ವ ಆರ್ಥಿಕ ವೇದಿಕೆಯ ಜಲಸಂಪನ್ಮೂಲ ತಂಡ-2030 ತನ್ನ ವರದಿ ಸಲ್ಲಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. ಜಲಸಂಪನ್ಮೂಲ ಅಭಿವೃದ್ಧಿಗೆ ಅತ್ಯಾಧುನಿಕ ವಿನ್ಯಾಸ ಕೇಂದ್ರ ಸ್ಥಾಪಿಸಲಾಗಿದೆ.

❖ ಜಲಾಶಯಗಳಲ್ಲಿ ನೀರಿನ ಮಟ್ಟವನ್ನು ಅಳತೆ ಮಾಡಲು ಆಧುನಿಕ ತಾಂತ್ರಿಕತೆಯ ಉಪಕರಣಗಳನ್ನು ಅಳವಡಿಸಲಾಗಿರುತ್ತದೆ. ಕರ್ನಾಟಕ ನೀರಾವರಿ ನಿಗಮದಲ್ಲಿ ನೈಪುಣ್ಯತಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

❖ ಚಾಮರಾಜನಗರ ಜಿಲ್ಲೆಯ ವಿವಿಧ ಕೆರೆಗಳನ್ನು ಅಭಿವೃದ್ಧಿಪಡಿಸಲು ಮತ್ತು ಕಬಿನಿ ನದಿಯಿಂದ ನೀರು ತುಂಬಿಸುವ 212 ಕೋಟಿ ರೂ.ಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

❖ ನಬಾರ್ಡ್ ಯೋಜನೆಯಲ್ಲಿ ಸುಮಾರು 88,800 ಹೆಕ್ಟೇರ್ ಜೌಗು ಸವಳು ಬಾಧಿತ ಪ್ರದೇಶವನ್ನು ಸುಧಾರಿಸಲು ಕ್ರಮ ಆರಂಭಿಸಲಾಗಿದೆ.

ಕೆಲವು ಸವಾಲುಗಳು

12. ಇಷ್ಟೆಲ್ಲಾ ಆದರೂ, ನಮ್ಮ ರೈತರ ಜನಜೀವನ ಇನ್ನೂ ಸುಧಾರಿಸಬೇಕಾಗಿದೆ. ಆ ದಿಕ್ಕಿನಲ್ಲಿ ನಾವು ಎದುರಿಸಬೇಕಾಗಿರುವ ಕೆಲವು ಸವಾಲುಗಳು ಇಂತಿವೆ:

ಅ) **ಒಣ ಮತ್ತು ನೀರಾವರಿ ಬೇಸಾಯದಲ್ಲಿ ಉತ್ಪಾದಕತೆಯ ಹೆಚ್ಚಳ:** ನಮ್ಮ ರಾಜ್ಯದಲ್ಲಿ (ಎಲ್ಲಾ ಋತುಗಳು ಸೇರಿದಂತೆ) 88 ಲಕ್ಷ ಹೆಕ್ಟೇರ್ ಒಣ ಬೇಸಾಯ ಮತ್ತು 41 ಲಕ್ಷ ಹೆಕ್ಟೇರ್ ನೀರಾವರಿ ಕೃಷಿ ನಡೆಯುತ್ತಿದ್ದು, ಈ ಪ್ರದೇಶಗಳಲ್ಲಿನ ಬೆಳೆಗಳ ಉತ್ಪಾದಕತೆಯ ಹೆಚ್ಚಳ, ಇದಕ್ಕಾಗಿ ಉತ್ತಮ ರೀತಿಯ ಬೀಜಗಳ ಸಾಕಷ್ಟು ಪ್ರಮಾಣದ ಲಭ್ಯತೆ, ಭೂಸಾರಕ್ಕೆ ತಕ್ಕ ಲಘು ಪೋಷಕಾಂಶಗಳ ಬಳಕೆ, ಮತ್ತು ರೈತರಿಗೆ ಈ ಬಗ್ಗೆ ತಿಳುವಳಿಕೆ ಅಗತ್ಯ. ಜೊತೆಗೆ, ಪೂರಕವಾದ ಕ್ಷೇತ್ರ ವಿಸ್ತರಣಾ ಕಾರ್ಯ ಅವಶ್ಯಕವಾಗಿದೆ. ಈ ದಿಕ್ಕಿನಲ್ಲಿ ನವೀಕರಿಸಿದ ಕೃಷಿ ಪದ್ಧತಿಗಳ ಬಗ್ಗೆ ರೈತರಿಗೆ ತರಬೇತಿ ಮತ್ತು ಅಳವಡಿಕೆ ಅಗತ್ಯವಾಗಿದೆ.

ಆ) **ಉತ್ಪನ್ನಗಳ ಮಾರಾಟಕ್ಕೆ ಆಧುನಿಕ ಮಾರುಕಟ್ಟೆ ಮತ್ತು ಸೂಕ್ತ ಬೆಲೆ:** ನಮ್ಮ ರೈತರು ಬೆವರಿಳಿಸಿ, ಕಷ್ಟಪಟ್ಟು ಬೆಳೆಸಿದ ಬೆಳೆಗಳಿಗೆ ಸೂಕ್ತ ಬೆಲೆ ಸಿಗದ ಪರಿಸ್ಥಿತಿಯಿಂದ ಅವರ ಜೀವನ ದುರ್ಬಲವಾಗಿದೆ. ಈ ದಿಕ್ಕಿನಲ್ಲಿ ಪಾರದರ್ಶಕ ವ್ಯವಸ್ಥೆ ಇರುವ ಮಾರುಕಟ್ಟೆಗಳು, ನೇರ ಖರೀದಿ ಕೇಂದ್ರಗಳು, ರೈತ–ಗ್ರಾಹಕ ಮಾರುಕಟ್ಟೆ ವ್ಯವಸ್ಥೆ, ಜೊತೆಗೆ ಇ–ವ್ಯಾಪಾರದ ಅವಶ್ಯಕತೆ ಇದೆ.

ಜೊತೆಗೆ, ಉತ್ಪನ್ನಗಳ ವರ್ಗೀಕರಣ ಮತ್ತು ಗುಣ ಪ್ರಮಾಣವನ್ನು ಮಾಡುವ ಸೇವೆಗಳನ್ನು ಸುಲಭವಾಗಿ ಒದಗಿಸುವ ವ್ಯವಸ್ಥೆ ಮಾಡಬೇಕಾಗಿದೆ.

ಇ) **ವೈಜ್ಞಾನಿಕ ಸಹಾಯ ಮತ್ತು ಪೂರಕ ಬಂಡವಾಳ:** ನಮ್ಮ ರಾಜ್ಯ ಹಾಗೂ ರಾಷ್ಟ್ರದ ರೈತರ ಜೀವನ ಸುಧಾರಿಸಲು ಅವರಿರುವ ಚಕ್ರವ್ಯೂಹದಿಂದ ಹೊರಗಡೆ ಬರಬೇಕಾಗಿದೆ. ಅದಕ್ಕಾಗಿ ಎಲ್ಲಾ ಹಂತಗಳಲ್ಲಿ ವೈಜ್ಞಾನಿಕ ಪರೀಕ್ಷೆ (ಉದಾ: ಮಣ್ಣು, ಉತ್ಪನ್ನಗಳ ಗುಣಮಟ್ಟ, ವರ್ಗೀಕರಣ, ಇತರೆ) ಅವುಗಳ ತಿಳುವಳಿಕೆ, ಎಲ್ಲರಿಗೂ ಸುಲಭ ರೀತಿಯಲ್ಲಿ ಲಭ್ಯತೆ ಅಗತ್ಯವಿದೆ. ಅದೇ ರೀತಿ, ಪ್ರತಿ ಹಂತದಲ್ಲೂ ಹೆಚ್ಚಿನ ಬಂಡವಾಳ, ಅದಕ್ಕೆ ತಕ್ಕ ಕಾರ್ಯಕ್ಷಮತೆಯ ಯಂತ್ರೋಪಕರಣಗಳು, ಸೂಕ್ತ ತಾಂತ್ರಿಕ ತಜ್ಞರು, ಪರಿಣಿತ ಖಾಸಗಿ ಕ್ಷೇತ್ರಗಳ ಸಹಯೋಗ ಅವಶ್ಯಕತೆ ಇದೆ.

ಮಾನ್ಯ ಸಭಾಧ್ಯಕ್ಷರೇ,

13. ಈ ಮೇಲಿನ ಸವಾಲುಗಳನ್ನು ಎದುರಿಸಲು ಬೇಕಾದ ಸೂಕ್ತ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಹಲವಾರು ಪ್ರಯತ್ನಗಳನ್ನು ಮಾಡಿದ್ದೇನೆ. ಈ ಹಾದಿಯಲ್ಲಿ, ನಮ್ಮ ಅಧಿಕಾರಿಗಳ ಪರಿಶ್ರಮದ ಜೊತೆ ಪರಿಣಿತರ ಸಲಹೆಗಳು, ಕೃಷಿ ಮತ್ತು ಕೃಷಿಯೇತರ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ಅಭಿಪ್ರಾಯಗಳು, ರೈತ ಮುಖಂಡರ ಸಲಹೆಗಳು, ವಿವಿಧ ಕಾರ್ಯಪಡೆಗಳು, ಜನಸಂಘಟನೆಗಳು ಮತ್ತು ಸಂಸ್ಥೆಗಳು ನೀಡಿದ ವರದಿಗಳು ಮತ್ತು ಪ್ರಸ್ತಾವನೆಗಳ ಜೊತೆಗೆ ವಿವಿಧ ಮಾಧ್ಯಮಗಳಲ್ಲಿ ಬಿತ್ತರಿಸಿದ ವರದಿಗಳನ್ನು ಪರಿಗಣಿಸಲಾಗಿದೆ.

14. ಈ 2012-13ನೇ ವರ್ಷದ ಕೃಷಿ ಆಯವ್ಯಯವು, ನೆಲ ಮತ್ತು ಜಲ ಕೇಂದ್ರೀಕೃತ ಯೋಜನೆಗಳ ಜೊತೆಗೆ ಅವುಗಳ ಉಪ ವಲಯದ ಹಂಚಿಕೆಯನ್ನು ಒಳಗೊಂಡಿದೆ. ನಮ್ಮ ರಾಜ್ಯದ ರೈತರ ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ, ಒಂದು ಉತ್ತಮ ಚರ್ಚೆ ನಡೆಸಿ, ಸೂಕ್ತ ಪರಿಹಾರಗಳನ್ನು ರೂಪಿಸಲು, ಈ ಕೃಷಿ ಆಯವ್ಯಯ ಪ್ರೇರಕವಾಗುವುದೆಂದು ನಾನು ಭಾವಿಸಿದ್ದೇನೆ.

ನೂತನ ಕಾರ್ಯತಂತ್ರಗಳು

15. ಕಳೆದ ವರ್ಷ ನಮ್ಮ ಪ್ರಯತ್ನ ಪ್ರಮುಖವಾಗಿ ಕೃಷಿ ಕ್ಷೇತ್ರದಲ್ಲಿರುವ ಮುಖ್ಯ ಸಮಸ್ಯೆಗಳನ್ನು ಎದುರಿಸುವುದು ಆಗಿತ್ತು. ಅದರಲ್ಲೂ, ಸಣ್ಣ ಮತ್ತು ಅತಿ ಸಣ್ಣ ಹಿಡುವಳಿದಾರರ ಸಮಸ್ಯೆ, ಸಮಯಕ್ಕೆ ಸರಿಯಾಗಿ ಗುಣಮಟ್ಟದ ಬೀಜ ದೊರಕದಿರುವುದು, ಸಮಯಕ್ಕೆ ಸರಿಯಾಗಿ ಸಾಕಷ್ಟು ರಸಗೊಬ್ಬರಗಳ ಪೂರೈಕೆ ಆಗದಿರುವುದು, ಕೃಷಿ ಉತ್ಪಾದನೆಯಲ್ಲಿನ ಖರ್ಚಿನ ಹೆಚ್ಚಳ, ಉತ್ಪನ್ನಗಳಿಗೆ ಸಾಕಷ್ಟು ಬೆಲೆ ದೊರಕದಿರುವುದು, ಮಾರುಕಟ್ಟೆಗಳ ಕೊರತೆ, ಇವುಗಳೆಲ್ಲದರ ಜೊತೆಗೆ ಸಮಯಕ್ಕೆ ಸರಿಯಾಗಿ ಸಾಕಷ್ಟು ಮಳೆಯ ಕೊರತೆ, ಇವುಗಳಲ್ಲಿ ಬಹಳಷ್ಟು ಕೃಷಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ್ದಾಗಿದ್ದರೂ ಇತರೆ ಪ್ರಮುಖ ಕಾರಣಗಳು ಎಂದರೆ ಉತ್ತಮ ತಾಂತ್ರಿಕತೆ ಸಾಕಷ್ಟು ಅಳವಡಿಕೆಯಾಗದಿರುವುದು. ಜೊತೆಗೆ, ಈ ಅಂಶಗಳು ಯಾವುದೇ ಒಂದು ಇಲಾಖೆ ಅಥವಾ ಸಂಸ್ಥೆಗೆ ಸೀಮಿತವಾಗದೆ ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಇಲಾಖೆಗಳು, ಹಣಕಾಸಿಗೆ ಸಂಬಂಧಪಟ್ಟಂತೆ ನಬಾರ್ಡ್ ಮತ್ತು ವಾಣಿಜ್ಯ ಬ್ಯಾಂಕ್‌ಗಳು ಮತ್ತು ರಸಗೊಬ್ಬರ ಮತ್ತು ಬೀಜ ಪೂರೈಕೆಗೆ ಸಂಬಂಧಿಸಿದ ಸಮಸ್ಯೆಗಳು ಕೂಡ ಸೇರಿವೆ.

16. ಕಳೆದ ಸಾಲಿನ ಕೃಷಿ ಆಯವ್ಯಯದಲ್ಲಿ ಮೇಲಿನ ಅಂಶಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕೆ ಪೂರಕವಾಗಿ ಹಲವಾರು ಯೋಜನೆಗಳನ್ನು ವಿನ್ಯಾಸಗೊಳಿಸಿ, ಕೃಷಿ ಕ್ಷೇತ್ರದಲ್ಲಿ ಮೌಲ್ಯವರ್ಧನೆಗೆ ಹೆಚ್ಚಿನ ಗಮನ ನೀಡಿದ್ದೆವು. ಈ ಎಲ್ಲಾ ಯೋಜನೆಗಳು ಮತ್ತು ಕಾರ್ಯಕ್ರಮಗಳ ಅನುಷ್ಠಾನ ವನ್ನು ಕೃಷಿ ಕ್ಷೇತ್ರದ ಎಲ್ಲಾ ಭಾಗೀದಾರರು ತುಂಬು ಹೃದಯದಿಂದ ಸ್ವಾಗತಿಸಿದ್ದರು. ಹಾಗಾಗಿಯೇ 2011–12ನೇ ಸಾಲಿನಲ್ಲಿ 123 ತಾಲ್ಲೂಕುಗಳಲ್ಲಿ ಬರದ ಛಾಯೆ ಆವರಿಸಿದ್ದರೂ ಸಹ ನಮ್ಮ ರಾಜ್ಯದ ಆಹಾರೋತ್ಪಾದನೆ ಪ್ರಮಾಣ 124 ಲಕ್ಷ ಮೆಟ್ರಿಕ್ ಟನ್ ತಲುಪಲು ನಿರೀಕ್ಷಿಸಲಾಗಿದೆ.

17. ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳ ಆಳ–ಅಗಲ ಮತ್ತು ವಿಸ್ತಾರವನ್ನು ಅರಿಯುವುದು ಸುಲಭ ಸಾಧ್ಯವಲ್ಲ. ಈ ಕ್ಷೇತ್ರಗಳ ಅಭಿವೃದ್ಧಿಗೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸುವುದಲ್ಲದೇ ಸಮರ್ಥವಾಗಿ ಅನುಷ್ಠಾನ ಗೊಳಿಸಲು ಅಪಾರ ಸಾಮರ್ಥ್ಯ ಮತ್ತು ಸಂಪನ್ಮೂಲಗಳ ಅಗತ್ಯವಿದೆ. ಈ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಎಲ್ಲರಿಗೂ ಇದರ ಅರಿವಿದೆ. ಆದ್ದರಿಂದ ಈ ದಿಕ್ಕಿನಲ್ಲಿ ದೊರೆತಿರುವ ಅನುಭವದ ಆಧಾರದ ಮೇಲೆ ಮತ್ತು ಈಗಾಗಲೇ

ರೈತರಿಗೆ ಬಹಳಷ್ಟು ಉಪಯುಕ್ತವಾಗಿರುವ ಹಲವಾರು ಯೋಜನೆಗಳನ್ನು ಈ ವರ್ಷವೂ ಸಹ ಮುಂದುವರಿಸಲು ನಿರ್ಧರಿಸಿದ್ದೇನೆ. ಉದಾಹರಣೆಗೆ, ಸುವರ್ಣ ಭೂಮಿ ಯೋಜನೆ, ಭೂಚೇತನ, ಸಾವಯವ ಕೃಷಿ ಮತ್ತು ಜೈವಿಕ ಇಂಧನದ ಅಭಿವೃದ್ಧಿ. ಇತ್ತೀಚಿನ ವರ್ಷಗಳಲ್ಲಿ ಆಗಿರುವ ಮತ್ತು ರೈತರು ಹಾಗೂ ತಜ್ಞರು ತಿಳಿಸಿದ ಅನುಭವಗಳ ಆಧಾರದಲ್ಲಿ ಕೆಲವೊಂದು ಯೋಜನೆಗಳ ಹೆಚ್ಚಿನ ಪರಿಣಾಮಕಾರಿ ಅನುಷ್ಠಾನಕ್ಕೆ ಅವುಗಳನ್ನು ಪರಿಷ್ಕರಿಸಿ ಮರುವಿನ್ಯಾಸ ಮಾಡಲಿದ್ದೇವೆ ಜೊತೆಗೆ ಇನ್ನು ಕೆಲವು ಯೋಜನೆಗಳ ವ್ಯಾಪ್ತಿಯನ್ನು ಮತ್ತಷ್ಟು ಹೆಚ್ಚಿಸಲಿದ್ದೇವೆ. ನಮ್ಮ ರೈತರಿಗೆ ಉತ್ತಮ ಸವಲತ್ತುಗಳು ಸಕಾಲದಲ್ಲಿ ದೊರಕಬೇಕು ಎಂಬುದು ಈ ಪ್ರಯತ್ನಗಳ ಆಶಯವಾಗಿದೆ. ಈ ಹಿನ್ನಲೆಯಲ್ಲಿ, 2012–13ನೇ ಕೃಷಿ ಆಯವ್ಯಯದಲ್ಲಿ ಈ ಕೆಳಗಿನ ಅಂಶಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

(1) ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ.

(2) ಗುಚ್ಛ ಗ್ರಾಮ / ಪ್ರದೇಶ ಆಧಾರಿತ ಯೋಜನೆಗಳು;

(3) ಒಣ ಬೇಸಾಯದಲ್ಲಿ ಉತ್ಪಾದನೆ ಹೆಚ್ಚಳಕ್ಕೆ ಯೋಜನೆಗಳು;

(4) ನೀರಾವರಿ ಪ್ರದೇಶಗಳಲ್ಲಿ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿ ಪೋಷಕಾಂಶಗಳ ಪೂರೈಕೆ ಮತ್ತು ಉತ್ಪಾದಕತೆಯಲ್ಲಿ ಹೆಚ್ಚಳ,

(5) ರಸಗೊಬ್ಬರ ಕಾಪು ದಾಸ್ತಾನನ್ನು 4 ಲಕ್ಷದಿಂದ 8 ಲಕ್ಷ ಮೆಟ್ರಿಕ್‌ಟನ್‌ಗಳಿಗೆ ಹೆಚ್ಚಳ;

(6) ಮಾರುಕಟ್ಟೆ ವ್ಯವಸ್ಥೆಗಳಲ್ಲಿ ಸುಧಾರಣೆ, NCDEX ಸಹಯೋಗದೊಂದಿಗೆ;

(7) ತೋಟಗಾರಿಕೆ ಮತ್ತು ಪಶುಸಂಗೋಪನೆ ಕ್ಷೇತ್ರಗಳಲ್ಲಿ ಮೌಲ್ಯವರ್ಧನೆ;

(8) ಉತ್ತಮ ತಾಂತ್ರಿಕತೆ ಮತ್ತು ಯಂತ್ರೋಪಕರಣಗಳ ಬಳಕೆ;

(9) ಜಾಗತಿಕ ಕೃಷಿ ಮತ್ತು ಸಂಸ್ಕರಣ ಸಮಾವೇಶದಲ್ಲಿ ಬಂದ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಅಗತ್ಯ ಕ್ರಮಗಳ ಜಾರಿ;

(10) ನೀರಾವರಿ ಕೃಷಿಯಲ್ಲಿ ನೀರಿನ ಬಳಕೆ ಸಾಮರ್ಥ್ಯದಲ್ಲಿ ಹೆಚ್ಚಿನ ಕಾರ್ಯಕ್ಷಮತೆ.

(11) ಸೂಕ್ಷ್ಮ ನೀರಾವರಿ ಮತ್ತು ಹನಿ ನೀರಾವರಿ ಅಳವಡಿಕೆ ಜೊತೆಗೆ ಕೆರೆಗಳ ಅಭಿವೃದ್ಧಿ;

(12) ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಯೋಜನೆಗಳ ಅನುಷ್ಠಾನ ಮತ್ತು ಸಂಬಂಧಪಟ್ಟ ಪುನರ್ ವಸತಿ ಕೆಲಸಗಳು.

18. ಮುಂಬರುವ ವರ್ಷಗಳಲ್ಲಿ ನಮ್ಮ ರಾಜ್ಯದ ರೈತರು ಆಗಾಗ ಎದುರಾಗುವ ಬರದ ಪರಿಸ್ಥಿತಿಯಿಂದ ಬಳಲದೆ ಇರಲು ಅಂತರರಾಷ್ಟ್ರೀಯ ಮಟ್ಟದ ವೈಜ್ಞಾನಿಕ ಸಂಸ್ಥೆಗಳಾದ ICRISAT, IRRI, CIMMYT, ILRI. IFPRI ಗಳ ಜೊತೆ ವಿಶೇಷ ಕಾರ್ಯ ಯೋಜನೆ ರೂಪಿಸಲು ಸಿದ್ಧತೆ ನಡೆಸುತ್ತಿದ್ದೇವೆ. ಈ ಸಂಸ್ಥೆಗಳ ಸಹಯೋಗದಲ್ಲಿ ನೂತನ ಕಾರ್ಯತಂತ್ರ ಗಳನ್ನು ವಿನ್ಯಾಸಗೊಳಿಸಿ, ಪ್ರಾಯೋಗಿಕವಾಗಿ ಕೆಲವು ತಾಲ್ಲೂಕು/ ಜಿಲ್ಲೆಗಳಲ್ಲಿ ಪ್ರಾರಂಭಿಸಿ, ನಂತರ ಇತರೆ ಪ್ರದೇಶಗಳಿಗೆ ವಿಸ್ತರಿಸಲಾಗುವುದು. ನಮ್ಮ ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಇಂತಹ ವಿನೂತನ ಪ್ರಯತ್ನ ನಮ್ಮ ರಾಜ್ಯದಲ್ಲಿ ನಡೆಯಲಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ.

19. ಈ ಮೇಲಿನ ಯೋಜನೆಗಳಿಂದ ನಮ್ಮ ರೈತರ ಜೀವನ ಮಟ್ಟ ಸುಧಾರಿಸಿ, ಕೃಷಿ ಮತ್ತು ಕೃಷಿಯೇತರ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಗತಿ ಕಾಣಲು ಸಾಧ್ಯವಾಗಲಿದೆ ಎಂದು ನನಗೆ ದೃಢ ವಿಶ್ವಾಸವಿದೆ.

20. ಈ ಮೇಲಿನ ಯೋಜನೆಗಳ ವಿವರ ಮತ್ತು ಪೂರಕವಾದ ಕಾರ್ಯತಂತ್ರಗಳ ಬಗ್ಗೆ ಮುಂದಿನ ಭಾಗಗಳಲ್ಲಿ ವಿಸ್ತಾರವಾಗಿ ಚರ್ಚಿ ಸಲಿದ್ದೇನೆ.

ಕೃಷಿ

21. ಕೃಷಿ ಇಲಾಖೆಗೆ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 2921 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

22. ಸುವರ್ಣ ಭೂಮಿ ಯೋಜನೆಯ ವಿಸ್ತರಣೆ: ಸುವರ್ಣ ಭೂಮಿ ಯೋಜನೆಯು ಹೆಚ್ಚಿನ ಸಂಖ್ಯೆಯಲ್ಲಿ ರೈತರಿಗೆ ನೆರವನ್ನು ಒದಗಿಸುತ್ತಿದೆ.

2011–12ನೇ ಸಾಲಿನಲ್ಲಿ ಉಂಟಾದ ಬರ ಪರಿಸ್ಥಿತಿಯ ಮತ್ತು ಇತರೆ ವಿವಿಧ ಕಾರಣಗಳಿಂದಾಗಿ, ಇದರ ಫಲಿತಾಂಶವು ಫಲಕಾರಿಯಾಗಿರುವುದಿಲ್ಲ. ರೈತರನ್ನು ಹೆಚ್ಚು ಇಳುವರಿ ತರುವ ಬೆಳೆಯತ್ತ ಮತ್ತು ಇನ್ನಿತರೆ ಚಟುವಟಿಕೆಗಳತ್ತ ಸ್ಥಳಾಂತರಿಸಿ ಅವರ ಜೀವನ ಶೈಲಿಯನ್ನು ಉತ್ತಮ ಪಡಿಸಲು ರಾಜ್ಯ ಸರ್ಕಾರವು ಈ ಯೋಜನೆಯನ್ನು ಪ್ರಸಕ್ತ ಸಾಲಿನಲ್ಲೂ ಸಹ ಮುಂದುವರಿಸಲು ಬದ್ಧವಾಗಿದೆ. 2011–12ರ ಅನುಷ್ಠಾನದ ಅವಧಿಯಲ್ಲಿನ ಅನುಭವ ಮತ್ತು ಯೋಜನೆಯ ಬಾಹ್ಯ ಮೌಲ್ಯಮಾಪನದ ಆಧಾರದ ಮೇಲೆ ಈ ಯೋಜನೆಯನ್ನು ಮರುವಿನ್ಯಾಸಗೊಳಿಸಿ 2012–13ರಲ್ಲಿ ಕಾರ್ಯಾಚರಣೆ ಗೊಳಿಸಲಾಗುವುದು.

23. **ರಾಜ್ಯಾದ್ಯಂತ ಭೂಚೇತನ:** ಕರ್ನಾಟಕ ರಾಜ್ಯ ಸರ್ಕಾರ ಖುಷ್ಕಿ ಪ್ರದೇಶದ ಬೆಳೆ ಇಳುವರಿ (ಕನಿಷ್ಠ ಶೇ.20 ರಷ್ಟು) ಹೆಚ್ಚಿಸುವುದರೊಂದಿಗೆ ರೈತರ ಜೀವನ ಮಟ್ಟ ಹಾಗೂ ರೈತರ ಆರ್ಥಿಕ ಮಟ್ಟವನ್ನು ಉತ್ತಮ ಗೊಳಿಸಲು **"ಭೂಚೇತನ"** ಎಂಬ ವಿಶಿಷ್ಟ ಯೋಜನೆಯನ್ನು 2009–10 ರಿಂದ 2012–13ನೇ ಸಾಲಿನವರೆಗೆ ಹಮ್ಮಿಕೊಂಡಿದೆ. ICRISAT (International Centre for Research in Semi Arid Tropics), ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಕೃಷಿ ಇಲಾಖೆಯು ಈ ಯೋಜನೆಯನ್ನು ಅನುಷ್ಠಾನ ಗೊಳಿಸುತ್ತಿದೆ. ಈ ಯೋಜನೆಯಡಿ ಖುಷ್ಕಿ ತಾಂತ್ರಿಕತೆಗಳಿಗೆ ಪೂರಕವಾಗಿ ಕೃಷಿ ಪರಿಕರಗಳನ್ನು ರೈತರಿಗೆ ಶೇ.50ರ ರಿಯಾಯಿತಿ ದರದಲ್ಲಿ ಗುಚ್ಛ ಗ್ರಾಮ ಮಟ್ಟದಲ್ಲಿ ವಿತರಿಸಲಾಗುತ್ತಿದೆ.

24. 2012–13ನೇ ಸಾಲಿಗೆ ಭೂಚೇತನ ಕಾರ್ಯಕ್ರಮವನ್ನು ಈಗಿನ 30 ಲಕ್ಷ ಹೆಕ್ಟೇರ್ ಪ್ರದೇಶದಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಒಟ್ಟು 50 ಲಕ್ಷ ಹೆಕ್ಟೇರ್ (5 ಲಕ್ಷ ಹೆಕ್ಟೇರ್ ನೀರಾವರಿ ಸೇರಿದಂತೆ) ಪ್ರದೇಶಕ್ಕೆ ವಿಸ್ತರಿಸಲಾ ಗುವುದು. ಇದನ್ನು 10,000 ರೈತ ಅನುವುಗಾರರು ಮತ್ತು 50,000 ಮುಂದಾಳು ರೈತರುಗಳ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುವುದು. ಈ ಸಾಲಿನಲ್ಲಿ ಸುಮಾರು 45 ಲಕ್ಷ ರೈತ ಫಲಾನುಭವಿಗಳನ್ನು ಒಳಗೊಂಡ ಈ ಯೋಜನೆಗೆ 110 ಕೋಟಿ ರೂ.ಗಳನ್ನು ನೀಡಲಾಗುವುದು.

25. ನೀರಿನ ಬಳಕೆ ಸಾಮರ್ಥ್ಯ ಮತ್ತು ಬೆಳೆಗಳ ಇಳುವರಿ ಹೆಚ್ಚಳ: ನಮ್ಮ ರಾಜ್ಯದಲ್ಲಿ ಬತ್ತ ಮತ್ತು ಕಬ್ಬಿನ ತಳಿಗಳ ಉತ್ಪಾದಕತೆ ಸಾಮರ್ಥ್ಯಕ್ಕಿಂತ ಬಹಳ ಕಡಿಮೆಯಿದ್ದು, ಇವುಗಳ ಇಳುವರಿಯನ್ನು ಶೇ.30ರಷ್ಟು ಹೆಚ್ಚಿಸುವ ದೃಷ್ಟಿಯಿಂದ ಪ್ರಸ್ತುತ ಖುಷ್ಕಿ ಪ್ರದೇಶದಲ್ಲಿ ಅನುಷ್ಠಾನಗೊಳಿಸುತ್ತಿರುವ ಭೂಚೇತನ ಕಾರ್ಯಕ್ರಮದ ಮಾದರಿಯಲ್ಲಿಯೇ ನೀರಾವರಿ ಪ್ರದೇಶಗಳಲ್ಲಿ ಇಳುವರಿಯನ್ನು ಹೆಚ್ಚಿಸಲು, 5 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು.

26. ಖುಷ್ಕಿ ಮತ್ತು ನೀರಾವರಿ ಪ್ರದೇಶಗಳು ಒಳಗೊಂಡಂತೆ, ಇಳುವರಿಯನ್ನು ಹೆಚ್ಚಿಸಲು ಒಟ್ಟು 110 ಕೋಟಿ ರೂ.ಗಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. 2012–12ನೇ ಸಾಲಿನ ಪ್ರಸ್ತಾಪಿತ ಉತ್ಪಾದನಾ ಗುರಿ ಒಟ್ಟು ಆಹಾರ ಧಾನ್ಯಗಳು 136.55 ಲಕ್ಷ ಟನ್‌ಗಳಾಗಿದ್ದು; ಎಣ್ಣೆಕಾಳುಗಳ ಉತ್ಪಾದನೆ 15.20 ಲಕ್ಷ ಟನ್‌ಗಳ ಗುರಿಯನ್ನು ಹೊಂದಲಾಗಿದೆ.

27. ಸಾವಯವ ಕೃಷಿಯ ವಿಸ್ತರಣೆ : ರೈತರಿಗೆ ಹೆಚ್ಚುತ್ತಿರುವ ಬೇಡಿಕೆ ಆಧಾರದ ಮೇಲೆ, ಸಾವಯವ ಕೃಷಿಯನ್ನು ಹೆಚ್ಚಿನ ಗ್ರಾಮಗಳಿಗೆ ವಿಸ್ತರಿಸಿ, ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಮರುವಿನ್ಯಾಸಗೊಳಿಸಿದ ಅಮೃತ ಭೂಮಿ ಘಟಕದ ಮೂಲಕ ಅನುಷ್ಠಾನಗೊಳಿಸಲು 2012–13ನೇ ಸಾಲಿನಲ್ಲಿ 200 ಕೋಟಿ ರೂ.ಗಳನ್ನು ನೀಡಲಾಗುವುದು.

28. ಸಬ್ಸಿಡಿ ದರದಲ್ಲಿ ಬೀಜ ವಿತರಣೆ : ರೈತರು ಉತ್ತಮ ಗುಣಮಟ್ಟದ ಬೀಜವನ್ನು ಉಪಯೋಗಿಸಿ, ಬೆಳೆಗಳ ಉತ್ಪಾದನೆಯನ್ನು ಪ್ರತಿಶತ 25 ರಷ್ಟು ಹೆಚ್ಚಿಸಲು, 2012–13ನೇ ಸಾಲಿನಲ್ಲಿ 100 ಕೋಟಿ ರೂ.ಗಳ ಅನುದಾನ ನೀಡುವುದರಿಂದ ಸುಮಾರು 30 ಲಕ್ಷ ರೈತರು ಪ್ರಯೋಜನ ಪಡೆಯಲಿದ್ದಾರೆ.

29. ಸ್ವಬೀಜಾಭಿವೃದ್ಧಿ ಯೋಜನೆ : ರೈತರು ಸ್ವತಃ ಬೆಳೆಯುವ ಬೀಜಗಳನ್ನು ಸಂಸ್ಕರಿಸಲು ಹಾಗೂ ಪ್ರಮಾಣೀಕರಿಸಲು ವಿವಿಧ ಏಜೆನ್ಸಿಗಳಿಂದ ವ್ಯವಸ್ಥೆ ಮಾಡಲಾಗುವುದು. ಈ ಹೊಸ ಯೋಜನೆಗೆ ಅಗತ್ಯವಿರುವ ಮೂಲಭೂತ ಸೌಕರ್ಯ ಹಾಗೂ ಅನುದಾನವನ್ನು ಒದಗಿಸಲಾಗುವುದು.

30. ರೈತ ಸ್ನೇಹಿ ರಸಗೊಬ್ಬರ ಪೂರೈಕೆ ಯೋಜನೆ : ರಾಜ್ಯದ ರೈತರಿಗೆ ಸಕಾಲದಲ್ಲಿ ಸಮರ್ಪಕವಾಗಿ ರಸಗೊಬ್ಬರಗಳನ್ನು ಪೂರೈಸಲು ಕೃಷಿ

ಇಲಾಖೆಯು ರಸಗೊಬ್ಬರಗಳ ಕಾಪು ದಾಸ್ತಾನು ಯೋಜನೆಯನ್ನು ಮುಂಗಾರು–2008 ರಿಂದ ಅನುಷ್ಠಾನಗೊಳಿಸುತ್ತಿದೆ. 2011–12ರ ಮುಂಗಾರು ಹಂಗಾಮಿನಲ್ಲಿ ಒಟ್ಟು 4.10 ಲಕ್ಷ ಮೆಟ್ರಿಕ್ ಟನ್‌ಗಳ ಕಾಪು ದಾಸ್ತಾನು ಮಾಡಿದ್ದು, ಈ 2012–13ನೇ ಸಾಲಿನಲ್ಲಿ 8 ಲಕ್ಷ ಮೆಟ್ರಿಕ್ ಟನ್‌ಗಳಷ್ಟು ವಿವಿಧ ಶ್ರೇಣಿಯ ರಸಗೊಬ್ಬರಗಳನ್ನು ಕಾಪು ದಾಸ್ತಾನು ಮಾಡಲಾಗುವುದು. ಈ ಉದ್ದೇಶಕ್ಕಾಗಿ ಸುಮಾರು 1,000 ಕೋಟಿ ರೂ.ಗಳ ಬ್ಯಾಂಕ್ ಸಾಲವನ್ನು ಪಡೆಯಲು ಮಹಾಮಂಡಳಿಯವರಿಗೆ ಸರ್ಕಾರದ ಖಾತರಿಯನ್ನು ಒದಗಿಸ ಲಾಗುವುದು. ಕಾಪು ದಾಸ್ತಾನಿನ ಮೇಲೆ ಆಗಿರುವ ಬಡ್ಡಿ, ಶೇಖರಣೆ ಮತ್ತು ಸಾಗಾಣಿಕೆ ವೆಚ್ಚವನ್ನು ಸರ್ಕಾರದ ವತಿಯಿಂದ ನೀಡಲು 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

31. ಕೆ–ಕಿಸಾನ್:

(ಅ) ಇಲಾಖೆ ಕಚೇರಿಗಳ ಗಣಕೀಕರಣ ಹಾಗೂ ಸಮನ್ವಯ: ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಆಧುನೀಕರಣಗೊಳಿಸುವ ಮೂಲಕ ರೈತರಿಗೆ ಕೃಷಿ ಉತ್ಪಾದನೆ, ಮಾರುಕಟ್ಟೆ, ತಂತ್ರಜ್ಞಾನ ಮತ್ತು ಇತರೆ ಸೇವೆಗಳ ಮಾಹಿತಿಯನ್ನು ಸಕಾಲದಲ್ಲಿ ಒದಗಿಸುವುದರ ಅವಶ್ಯಕತೆಯಿದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅಳವಡಿಕೆ ಮೂಲಕ ರೈತರಿಗೆ 24x7 ಮಾಹಿತಿ ಮತ್ತು ಸೇವೆ ನೀಡಿ ಅವರನ್ನು ಸಬಲೀಕರಣಗೊಳಿಸ ಬಹುದು. ಈ ನಿಟ್ಟಿನಲ್ಲಿ, ಕೃಷಿ ಇಲಾಖೆಯು ಹೋಬಳಿ ಮಟ್ಟದ ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಂದ ಕೃಷಿ ಸಚಿವಾಲಯದವರೆಗೆ ಸಾರ್ವಜನಿಕ–ಖಾಸಗಿ ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಇ–ಆಡಳಿತ ಇಲಾಖೆಯ ಸಮನ್ವಯ ದೊಂದಿಗೆ ಗಣಕೀಕೃತಗೊಳಿಸಲು ಉದ್ದೇಶಿಸಲಾಗಿದೆ.

(ಆ) ರೈತರ ಮಾಹಿತಿ ಕೋಶದ ಸೃಜನೆ : ರಾಜ್ಯದಲ್ಲಿ ಈಗಾಗಲೇ ಚಾಲ್ತಿಯಲ್ಲಿರುವ UID (ಆಧಾರ್) ಪ್ರಾಯೋಜನೆಯನ್ನು "ಭೂಮಿ" ಪ್ರಾಯೋಜನೆಯೊಂದಿಗೆ ಒಗ್ಗೂಡಿಸಿ ರೈತರ ಸಮಗ್ರ ಮಾಹಿತಿಗಳನ್ನೊಳ ಗೊಂಡ (ಭೂಹಿಡುವಳಿ, ವರ್ಗ, ವಿಳಾಸ ಇತ್ಯಾದಿ) ಮಾಹಿತಿ ಕೋಶವನ್ನು ಸೃಷ್ಟಿಸಬಹುದು. ಈ ಮಾಹಿತಿಯ ಆಧಾರದ ಮೇಲೆ ಯಾವ ವರ್ಗದ ರೈತರಿಗೆ (ಸಣ್ಣ, ಅತಿ ಸಣ್ಣ ಹಾಗೂ ದೊಡ್ಡ ರೈತರು) ಎಂತಹ ಸವಲತ್ತು ಗಳನ್ನು ಒದಗಿಸಲಾಗಿದೆ ಹಾಗೂ ಯಾವ ವಲಯ (ಪ್ರದೇಶ) ಕ್ಕೆ ಹೆಚ್ಚು

ಸವಲತ್ತುಗಳನ್ನು ನೀಡಲಾಗಿದೆ ಎಂಬುದನ್ನು ವಿಶ್ಲೇಷಿಸಬಹುದು. ಕೃಷಿ ಸಂಬಂಧಿತ ನೀತಿ ರೂಪಿಸುವಲ್ಲಿ ಈ ಮಾಹಿತಿಯು ಪೂರಕವಾಗಿರುತ್ತದೆ. ಈ ಕಾರ್ಯವನ್ನು ಪ್ರಾಯೋಗಿಕವಾಗಿ UID (ಆಧಾರ್) ಪ್ರಾಯೋಜನೆಯು ಪೂರ್ಣಗೊಂಡ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಇ–ಆಡಳಿತ ಇಲಾಖೆಯ ಸಮನ್ವಯದೊಂದಿಗೆ ಅನುಷ್ಠಾನಗೊಳಿಸಲು 2012–13ನೇ ಸಾಲಿಗೆ 10 ಕೋಟಿ ರೂ.ಗಳನ್ನು ನಿಯೋಜಿಸಲಾಗಿದೆ. ಇದರಿಂದ ಅಂದಾಜು 60 ಲಕ್ಷ ರೈತರು ಪ್ರಯೋಜನ ಪಡೆಯಬಹುದು.

32. ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆ : 2000–2001ನೇ ಸಾಲಿನಲ್ಲಿ ಕೃಷಿ ಇಲಾಖೆಯು ರಾಜ್ಯದ ಪ್ರತಿ ಹೋಬಳಿಗೆ ಒಂದರಂತೆ ಒಟ್ಟು 747 ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದ್ದು, ರೈತಾಪಿ ವರ್ಗದವರಿಗೆ ರೈತ ಸಂಪರ್ಕ ಕೇಂದ್ರಗಳ ಉದ್ದೇಶಗಳನ್ನು ತಲುಪಿಸಲು, ತಾಂತ್ರಿಕ ಅಂಶಗಳ ಮಾಹಿತಿಯನ್ನು ಹಾಗೂ ಇಲಾಖೆಯ ಯೋಜನೆಗಳನ್ನು ಸಮರ್ಪಕವಾಗಿ ಪಡೆಯಲು ವಿಸ್ತರಣಾ ಕಾರ್ಯಕರ್ತರ ಸೇವೆ ಅವಶ್ಯವಿರುತ್ತದೆ. ಕೃಷಿ ಇಲಾಖೆಯ ವಿವಿಧ ಕೃಷಿ ಚಟುವಟಿಕೆಗಳನ್ನು ಒಂದೇ ಸೂರಿನಡಿ ಸಂಯೋಜಿಸಲು ರೈತ ಸಂಪರ್ಕ ಕೇಂದ್ರಗಳ ಬಲವರ್ಧನೆಗೆ 2012–13ನೇ ಸಾಲಿನಲ್ಲಿ ಒಟ್ಟು 50 ಕೋಟಿ ರೂ.ಗಳನ್ನು ನೀಡಿದ್ದು, ಕೆಳಕಂಡ ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ.

- **ಕೃಷಿ ವಿದ್ಯಾರ್ಥಿಗಳ ನಿಯೋಜನೆ:** ಕೃಷಿ, ತೋಟಗಾರಿಕೆ ಮತ್ತು ಪಶುಸಂಗೋಪನೆ ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ ಬಳಿಕ, ವಿದ್ಯಾರ್ಥಿಗಳ ಕನಿಷ್ಠ ಪ್ರಾಯೋಗಿಕ ಕೌಶಲ್ಯ, ಕ್ಷೇತ್ರ ಅನುಭವ ಮತ್ತು ಜ್ಞಾನಕ್ಕಾಗಿ ಇವರುಗಳನ್ನು ರೈತ ಸಂಪರ್ಕ ಕೇಂದ್ರಗಳಿಂದ ಕನಿಷ್ಠ 3 ತಿಂಗಳ ಅವಧಿಗೆ ನಿಯೋಜಿಸಿ, ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ 1,500 ರೂ.ಗಳಂತೆ ಗೌರವಧನ ನೀಡಲಾಗುವುದು.

- **ಕೃಷಿ ಸೇವೆಗಳನ್ನು ಒದಗಿಸಲು ಏಕಗವಾಕ್ಷಿ ಸೌಲಭ್ಯ** : ಕೃಷಿ ಹಾಗೂ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ವಿಜ್ಞಾನಿಗಳು ಹಾಗೂ ರೈತರ ಮಧ್ಯೆ ಉತ್ತಮ ಸಹಭಾಗಿತ್ವವನ್ನು ಏರ್ಪಡಿಸುವ ಅಗತ್ಯವಿದೆ. ಇವರುಗಳನ್ನು ಒಂದೇ ಸೂರಿನಡಿ

ತಂದು ರೈತರಿಗೆ ಬೇಕಾಗುವ ಸೇವೆ ಹಾಗೂ ಪರಿಕರಗಳನ್ನು ಹೋಬಳಿ ಮಟ್ಟದಲ್ಲಿ ಒದಗಿಸಬೇಕಾಗಿದೆ. ಈ ಕಾರ್ಯಕ್ರಮವನ್ನು ಸರ್ಕಾರಿ ಹಾಗೂ ಪರಿಣಿತ ಖಾಸಗಿ ಸಂಸ್ಥೆಗಳ ಸಹಭಾಗಿತ್ವದ ಮಾದರಿಯಲ್ಲಿ ಪ್ರಾಯೋಗಿಕವಾಗಿ ನಾಲ್ಕು ಕಂದಾಯ ವಿಭಾಗಗಳ (ಪ್ರತಿ ವಿಭಾಗದಲ್ಲಿ 2 ತಾಲ್ಲೂಕು) ಒಟ್ಟು 8 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲು ಯೋಜಿಸಲಾಗಿದ್ದು, 2012-13ನೇ ಸಾಲಿನಲ್ಲಿ 8 ಕೋಟಿ ರೂ.ಗಳನ್ನು ಪ್ರಸ್ತಾಪಿಸಲಾಗಿದೆ. ಇದರ ಅನುಭವದ ಆಧಾರದ ಮೇಲೆ, ಹಂತ ಹಂತವಾಗಿ ರಾಜ್ಯಾದ್ಯಂತ ವಿಸ್ತರಿಸಲಾಗುವುದು.

33. **ಯಂತ್ರೋಪಕರಣಗಳ-ಬಾಡಿಗೆ ಆಧಾರಿತ ಸೇವಾ ಕೇಂದ್ರ:** ರಾಜ್ಯದಲ್ಲಿ ಶೇ. 75 ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರಿದ್ದು, ದುಬಾರಿ ಕೃಷಿ ಯಂತ್ರೋಪಕರಣಗಳನ್ನು ಖರೀದಿಸಲು ಕಷ್ಟ ಹಾಗೂ ಕೃಷಿ ಕಾರ್ಮಿಕರ ಕೊರತೆಯಿಂದ ಸಕಾಲದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ತೊಂದರೆ ಇದೆ. ಈ ಕೊರತೆಯನ್ನು ನೀಗಿಸಲು ಇಲಾಖೆಯು ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ಸ್ಥಾಪನೆಯ ಮೂಲಕ ಟ್ರ್ಯಾಕ್ಟರ್ ಹಾಗೂ ಹೈಟೆಕ್ ಯಂತ್ರೋಪಕರಣಗಳನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಉಪಯೋಗಿಸಲು ಅವಕಾಶ ಕಲ್ಪಿಸಲು ಪ್ರಸ್ತಾಪಿಸಿದೆ.

34. ಕಳೆದ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ, ಹತ್ತು ಗುಚ್ಛ ಗ್ರಾಮಗಳಿಗೆ ಒಂದು ಸೇವಾ ಕೇಂದ್ರದಂತೆ ಒಟ್ಟು 660 ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳನ್ನು ನೋಂದಾಯಿತ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ (ಸಂಸ್ಥೆ) ಮುಖಾಂತರ ಸ್ಥಾಪಿಸಲಾಗಿದೆ. ಈ ಯೋಜನೆಯ ಯಶಸ್ಸನ್ನು ಪರಿಗಣಿಸಿ, 2012-13ನೇ ಸಾಲಿಗೆ ಪ್ರತಿ ಬಾಡಿಗೆ ಆಧಾರಿತ ಸೇವಾ ಕೇಂದ್ರ ಸ್ಥಾಪನೆಗೆ 10 ಲಕ್ಷ ರೂ.ಗಳಂತೆ ಒಟ್ಟು 500 ಸೇವಾ ಕೇಂದ್ರಗಳ ಸ್ಥಾಪನೆಗೆ 50 ಕೋಟಿ ರೂ.ಗಳನ್ನು ಪ್ರಸ್ತಾಪಿಸಲಾಗಿದ್ದು, ಆಯ್ದ ನೋಂದಾಯಿತ ಸಹಕಾರ ಸಂಘಗಳ ಮುಖಾಂತರ ಸ್ಥಾಪಿಸಲು ಆಯೋಜಿಸಲಾಗಿದೆ.

35. **ವಿಶ್ವವಿದ್ಯಾನಿಲಯಗಳ ಬಲವರ್ಧನೆ :** ಕರ್ನಾಟಕ ರಾಜ್ಯದಲ್ಲಿ ಈಗಾಗಲೇ ನಾಲ್ಕು ಕೃಷಿ ವಿಶ್ವವಿದ್ಯಾಲಯಗಳು ಮತ್ತು ತೋಟಗಾರಿಕೆ ಮತ್ತು ಪಶುಸಂಗೋಪನೆಗೆ ತಲಾ ಒಂದರಂತೆ ಪ್ರತ್ಯೇಕ ವಿಶ್ವವಿದ್ಯಾಲಯಗಳಿವೆ.

2012–13ನೇ ಸಾಲಿನಲ್ಲಿ ಈ ವಿಶ್ವವಿದ್ಯಾಲಯಗಳಿಗಾಗಿ ಒಟ್ಟು 524 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಇವಕ್ಕೆ ಪೂರಕವಾಗಿ ಇತ್ತೀಚಿನ ವರ್ಷಗಳಲ್ಲಿ ಹಲವಾರು ಕಾಲೇಜುಗಳನ್ನು (ಪ್ರತ್ಯೇಕವಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ) ತೆರೆಯಲಾಗಿದೆ. ಆದರೂ ಸಹ ಇಂತಹ ಕಾಲೇಜುಗಳಿಗೆ ಹಲವು ಜಿಲ್ಲೆ/ ತಾಲ್ಲೂಕುಗಳಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ. ಇದಕ್ಕೆ ಪೂರಕವಾಗಿ ಹಣಕಾಸು ಅಗತ್ಯವಿತುವ ಮೂಲಭೂತ ಸೌಕರ್ಯಗಳು ಮತ್ತು ಪರಿಣಿತ ಉಪನ್ಯಾಸಕರ ಕೊರತೆ ಜೊತೆಗೆ, ಇವೆಲ್ಲಾ ವಿಶ್ವವಿದ್ಯಾಲಯಗಳ ನಡುವೆ ಸಮನ್ವಯದ ಕೊರತೆ ತೀವ್ರವಾಗಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಅವುಗಳ ಮುಂದಿನ ಅಭಿವೃದ್ಧಿಯ ಹಾದಿ ಮತ್ತು ಕಾರ್ಯ ಸೂಚಿಯನ್ನು ರೂಪಿಸಲು ತಜ್ಞರ ಸಮಿತಿಯೊಂದನ್ನು ರಚಿಸಿ, ಆರು ತಿಂಗಳೊಳಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿದೆ.

36. ಜೈವಿಕ ಇಂಧನ ಅಭಿವೃದ್ಧಿ : ಈಗಾಗಲೇ ಅನುಷ್ಠಾನದಲ್ಲಿರುವ ಜೈವಿಕ ಇಂಧನ ಯೋಜನೆಯನ್ನು ಬಲಪಡಿಸಿ, ಈ ಸಾಲಿನಲ್ಲಿ ಸುಮಾರು 50,000 ರೈತರಿಗೆ ಉಪಯುಕ್ತವಾಗಲು, 50 ಕೋಟಿ ರೂ.ಗಳನ್ನು ಪ್ರಸ್ತಾಪಿಸಲಾಗಿದೆ.

ಸಕ್ಕರೆ

37. ಮಂಡ್ಯದ ಮೈ ಶುಗರ್ ಸಂಸ್ಥೆಯನ್ನು ಪುನರುಜ್ಜೀವನ ಗೊಳಿಸಲು 30 ಕೋಟಿ ರೂ.ಗಳ ನೆರವು ನೀಡಲಾಗುವುದು.

ತೋಟಗಾರಿಕೆ

38. ತೋಟಗಾರಿಕೆ ಇಲಾಖೆಯ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 867 ಕೋಟಿ ರೂ. ಗಳ ಅನುದಾನವನ್ನು ಒದಗಿಸಲಾಗಿದೆ.

39. 2012–13ನೇ ಸಾಲಿನಲ್ಲಿ "ಕರ್ನಾಟಕ ರಾಜ್ಯ ಸಮಗ್ರ ತೋಟಗಾರಿಕೆ ಅಭಿವೃದ್ಧಿ" ಯೋಜನೆಯನ್ನು ಆಯ್ದ ಭೌಗೋಳಿಕ ಸಮೂಹಗಳಲ್ಲಿ ಸಮಗ್ರ ಅಭಿವೃದ್ಧಿ ವಿಧಾನಗಳ ತತ್ವದಲ್ಲಿ ಅಳವಡಿಸಲು ಪ್ರಸ್ತಾಪಿಸಲಾಗಿದೆ. ಇದರಿಂದಾಗಿ 28,000 ಹೆಕ್ಟೇರ್ ಪ್ರದೇಶವನ್ನು ಮೌಲ್ಯವರ್ಧಿತ ತೋಟಗಾರಿಕೆ ಬೆಳೆಗಳಡಿಯಲ್ಲಿ ತರಲಾಗುವುದು, ಹಾಗೂ 50,000 ರೈತ ಕುಟುಂಬಗಳಿಗೆ ಈ ಯೋಜನೆಯಲ್ಲಿ ನೇರ ಸವಲತ್ತುಗಳನ್ನು

ನೀಡಲು ನಿಗದಿಗೊಳಿಸಲಾಗಿದೆ. ಈ ಯೋಜನೆಯ ಅನುಷ್ಠಾನದಿಂದ ಪ್ರತಿವರ್ಷ 450 ಕೋಟಿ ರೂ. ಮೌಲ್ಯದ ತೋಟಗಾರಿಕೆ ಉತ್ಪನ್ನ ಅಧಿಕವಾಗಲಿದ್ದು, ಉತ್ಪಾದನೆಯಲ್ಲಿ ಶೇ.5 ಹಾಗೂ ಉತ್ಪಾದಕತೆಯಲ್ಲಿ ಶೇ.7 ರವರೆಗೆ ಹೆಚ್ಚವಾಗಲಿದೆ. ಸದರಿ ಯೋಜನೆಯನ್ನು 305 ಕೋಟಿ ರೂ.ಗಳ ಅನುದಾನದಲ್ಲಿ ಅನುಷ್ಠಾನಗೊಳಿಸಲು ಪ್ರಸ್ತಾಪಿಸಲಾಗಿದೆ.

40. ಇಸ್ರೇಲ್ ತಂತ್ರಜ್ಞಾನದ ಸಹಯೋಗದೊಂದಿಗೆ ಬೆಳಗಾಂ ಜಿಲ್ಲೆಯಲ್ಲಿ ತರಕಾರಿ ಬೆಳೆಗಳ ಅಭಿವೃದ್ಧಿಗಾಗಿ, ಬಾಗಲಕೋಟೆಯಲ್ಲಿ ದಾಳಿಂಬೆ ಹಾಗೂ ಕೋಲಾರ ಜಿಲ್ಲೆಯಲ್ಲಿ ಮಾವು ಅಭಿವೃದ್ಧಿ ಉನ್ನತ ತಂತ್ರಜ್ಞಾನ ಪರಿಣಿತ ಕೇಂದ್ರಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

41. ಹನಿ ನೀರಾವರಿ ಯೋಜನೆಯಡಿಯಲ್ಲಿ ಇದುವರೆವಿಗೂ ಶೇ.75 ರಷ್ಟು ಸಹಾಯಧನ ನೀಡಲಾಗಿದ್ದು, ಪ್ರಸಕ್ತ ಸಾಲಿನಿಂದ ಶೇ. 80 ರಷ್ಟಕ್ಕೆ ಹೆಚ್ಚಳ ಮಾಡಲು ಪ್ರಸ್ತಾಪಿಸಲಾಗಿದೆ.

42. ತೋಟಗಾರಿಕೆ ಬೆಳೆಗಳ ಗಣತಿ ಸಮೀಕ್ಷೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಕೈಗೊಂಡ ತೋಟಗಾರಿಕೆ ಬೆಳೆಗಳ ನಿಖರ ವಿಸ್ತೀರ್ಣ ಮತ್ತು ಉತ್ಪಾದನೆಯನ್ನು ನಿಗದಿಪಡಿಸಲು ಪ್ರಸ್ತಾಪಿಸಲಾಗಿದೆ. ಈ ಯೋಜನೆಗಾಗಿ 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

43. ಕರ್ನಾಟಕ ರಾಜ್ಯದಲ್ಲಿ ಒಟ್ಟು 2.13 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದೆ. ಅಡಿಕೆ ಬೆಳೆಯು ಬಹಳ ವರ್ಷ ಗಳಿಂದ ಸುಮಾರು 10,400 ಹೆಕ್ಟೇರ್ ಪ್ರದೇಶದಲ್ಲಿ ಹಳದಿ ಎಲೆ ರೋಗಕ್ಕೆ ತುತ್ತಾಗಿ ರೈತರು ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ. 2011-12ನೇ ಸಾಲಿನಲ್ಲಿ ಅಡಿಕೆ ಪುನಃಶ್ಚೇತನ ಯೋಜನೆಯಡಿ ಒಟ್ಟು 5.7 ಕೋಟಿ ರೂ.ಗಳನ್ನು ರೈತರಿಗೆ ಸಹಾಯಧನವಾಗಿ ನೀಡಲಾಗಿದೆ. ಮತ್ತು ಪ್ರಸ್ತುತ ವರ್ಷವೂ ಅಗತ್ಯಕ್ಕೆ ಅನುಗುಣವಾಗಿ ಸಹಾಯಧನ ನೀಡಲಾಗುವುದು.

44. ಕರ್ನಾಟಕ ಸರ್ಕಾರವು ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಹೆಚ್ಚಿಸುವಲ್ಲಿ ಅಗತ್ಯ ನೆರವನ್ನು ನೀಡುವುದಲ್ಲದೇ, ರೈತರು ಬೆಳೆದ ತೋಟಗಾರಿಕೆ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರಕಿಸಿಕೊಡಲು ಅಗತ್ಯ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲು ಬದ್ಧವಾಗಿದೆ. ಇದಕ್ಕಾಗಿ ರಾಜ್ಯದಲ್ಲಿ ರೈತರ ಗುಂಪುಗಳು ಸಂಘಗಳನ್ನು ರಚಿಸಲು ಉದ್ದೇಶಿಸಿದ್ದು, ರೈತರು ಉತ್ಪಾದಿಸಿದ ತೋಟಗಾರಿಕೆ ಉತ್ಪನ್ನಗಳಿಗೆ ಸೂಕ್ತ ಶೇಖರಣೆ ಹಾಗೂ

ಸಾಗಾಣಿಕೆ ವ್ಯವಸ್ಥೆ ಮಾಡುವುದಷ್ಟೇ ಅಲ್ಲದೇ, ಅರ್ಹ ಮಾರುಕಟ್ಟೆ ಸಂಘಟಕರೊಂದಿಗೆ ಸಂಪರ್ಕ ಕಲ್ಪಿಸಲು ಅಗತ್ಯ ನೆರವನ್ನು ನೀಡಲು ಸಹ ಉದ್ದೇಶಿಸಿದೆ. ಈ ಯೋಜನೆಯನ್ನು ಪರೀಕ್ಷಾರ್ಥವಾಗಿ (Pilot) ನಾಲ್ಕು ಜಿಲ್ಲೆಗಳಲ್ಲಿ ಹಮ್ಮಿಕೊಳ್ಳಲಾಗುವುದು.

45. ಈ ವ್ಯವಸ್ಥೆಯಿಂದ ರೈತರಿಗೆ ಬೆಳೆ ಬೆಳೆಯುವುದರಿಂದ ಹಿಡಿದು ಸಂಗ್ರಹ ಮತ್ತು ಮಾರಾಟದವರೆಗೆ ಅನುಕೂಲವಾಗುವುದಲ್ಲದೇ ಮಾರುಕಟ್ಟೆ ಭದ್ರತೆಯನ್ನು ಸಹ ಒದಗಿಸಿದಂತಾಗುತ್ತದೆ. ಅಲ್ಲದೆ ಗ್ರಾಹಕರಿಗೂ ಸಹ ಉತ್ತಮ ಗುಣಮಟ್ಟದ ಉತ್ಪನ್ನಗಳು ನ್ಯಾಯಯುತ ಬೆಲೆಗೆ ದೊರೆಯುತ್ತವೆ.

46. ಹಾಪ್‌ಕಾಮ್ಸ್ ಮತ್ತು ಕರ್ನಾಟಕ ತೋಟಗಾರಿಕೆ ಮಹಾ ಮಂಡಳಿಯನ್ನು ಪುನರ್ ರಚಿಸಿ, ಅವುಗಳನ್ನು ಹಂತಹಂತವಾಗಿ ಬಲಪಡಿಸುವುದು.

ಪಶುಸಂಗೋಪನೆ

47. ಪಶುಸಂಗೋಪನೆ ಇಲಾಖೆಯ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 989 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

48. 22 ಲಕ್ಷ ರೈತರಿಗೆ ಅನುಕೂಲವಾಗುವಂತೆ 300 ಕೋಟಿ ರೂ. ಅಂದಾಜು ಮೊತ್ತದ ಹಾಲು ಸಹಾಯಧನ ಯೋಜನೆಯನ್ನು ಮುಂದುವರಿಸಲಾಗುವುದು.

49. ಗಣಕೀಕರಣ ವ್ಯವಸ್ಥೆ: ರಾಜ್ಯದಲ್ಲಿರುವ 4,110 ಪಶುವೈದ್ಯಕೀಯ ಸಂಸ್ಥೆಗಳು ಮತ್ತು ರಾಜ್ಯ ಮಟ್ಟದ ಕಚೇರಿಗಳ ನಡುವೆ ನೇರ ಸಂಪರ್ಕ ಜಾಲ ವ್ಯವಸ್ಥೆಯ ಅನುಷ್ಠಾನಕ್ಕಾಗಿ 20 ಕೋಟಿ ರೂ. ಅನುದಾನ ಕೊಡಲಾಗುವುದು.

50. ಡಿಪ್ಲೊಮೋ ಕೋರ್ಸ್ : 2012–13ರ ವರ್ಷದಲ್ಲಿ ಇಲಾಖೆಯು ಪಾಲಿಟೆಕ್ನಿಕ್ ಕಾಲೇಜನ್ನು ತುಮಕೂರು ಜಿಲ್ಲೆಯ ಕೋನೇಹಳ್ಳಿಯಲ್ಲಿ 10ನೇ ತರಗತಿ ಪಾಸಾದ ಯುವಕರಿಗೆ ಎರಡು ವರ್ಷದ ಡಿಪ್ಲೊಮೋ ಕೋರ್ಸ್‌ನ್ನು ಪ್ರಾರಂಭಿಸಲು ಕ್ರಮಕೈಗೊಂಡಿದ್ದು, ಇದರ ಮೂಲಕ ಗ್ರಾಮೀಣ ಯುವಕರಿಗೆ ಉದ್ಯೋಗಾವಕಾಶವನ್ನು ಒದಗಿಸಲಾಗುವುದು.

51. ಗೋ ಸಂರಕ್ಷಣೆ : ಕರ್ನಾಟಕ ಗೋ ಸಂರಕ್ಷಣೆ ಯೋಜನೆ ಅಡಿಯಲ್ಲಿ ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನವನ್ನು ನೀಡಲಾಗುವುದು.

ಇದರ ಮುಖ್ಯ ಉದ್ದೇಶ ಸ್ಥಳೀಯ ಗೋವುಗಳ ರಕ್ಷಣೆ ಹಾಗೂ ಸಂರಕ್ಷಣೆ. ಸರ್ಕಾರೇತರ ಸಂಸ್ಥೆಯವರ ಬಳಿ 10 ಎಕರೆ ಭೂಮಿ ಹಾಗೂ 50 ಸ್ಥಳೀಯ ಗೋವುಗಳನ್ನು ಸಾಕಾಣಿಕೆ ಮಾಡುತ್ತಿದ್ದಲ್ಲಿ ಅಂತಹ ಸಂಸ್ಥೆಗೆ ಸಹಾಯ ಧನವನ್ನು ನೀಡಲಾಗುವುದು.

52. ಈಗಾಗಲೇ ಇತರೆ ರಾಜ್ಯಗಳಲ್ಲಿ ಇರುವಂತೆ ನಮ್ಮ ಪಶು ಸಂಪತ್ತನ್ನು ರಕ್ಷಿಸಿ ಪ್ರೋತ್ಸಾಹಿಸಲು ಗೋ ಸೇವಾ ಆಯೋಗವನ್ನು ರಚಿಸಲಾಗುವುದು.

53. ಪಶುವೈದ್ಯಕೀಯ ಕಾಲೇಜುಗಳಿಗೆ ಅನುದಾನ : ಶಿವಮೊಗ್ಗ ಮತ್ತು ಹಾಸನ ಪಶುವೈದ್ಯಕೀಯ ಹೊಸ ಕಾಲೇಜುಗಳಿಗೆ ಅಗತ್ಯವಿರುವ ಕಟ್ಟಡ ಮತ್ತು ಉಪಕರಣಗಳ ಮೂಲಭೂತ ಸೌಕರ್ಯಕ್ಕಾಗಿ ಮತ್ತು ಪ್ರಸಕ್ತ ಸಾಲಿನಲ್ಲಿ, ಅಥಣಿ, ಗದಗ್ ಮತ್ತು ಪುತ್ತೂರಿನಲ್ಲಿ ಹೊಸ ಕಾಲೇಜುಗಳನ್ನು ನಿರ್ಮಿಸಲು ಒಟ್ಟು 60 ಕೋಟಿ ರೂ.ಗಳನ್ನು ನೀಡಲಾಗುವುದು.

ಮೀನುಗಾರಿಕೆಗೆ ಆದ್ಯತೆ

54. ಮೀನುಗಾರಿಕೆ ಇಲಾಖೆಯ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 215 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

55. ಮೀನುಗಾರಿಕೆ ಉತ್ಪಾದನೆ : ರಾಜ್ಯದಲ್ಲಿ ಮೀನುಮರಿ ಬೇಡಿಕೆ ಸುಮಾರು 80 ಕೋಟಿ ಫ್ರೈ ನಷ್ಟಿದ್ದು, ಪ್ರಸ್ತುತ 40 ಕೋಟಿ ಫ್ರೈ ಉತ್ಪಾದನೆ ಮಾಡಲಾಗುತ್ತಿದೆ. ಉಳಿದ ಬೇಡಿಕೆಯನ್ನು ಪೂರೈಸಲು ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣಕ್ಕಾಗಿ 10 ಕೋಟಿ ರೂ. ಸಹಾಯ ಒದಗಿಸಲಾಗುವುದು.

56. ನಿರ್ವಸತಿ ಮೀನುಗಾರರಿಗೆ 2012-13ನೇ ಸಾಲಿನಲ್ಲಿ 4000 ಮನೆಗಳನ್ನು ನಿರ್ಮಿಸಲು 24 ಕೋಟಿ ರೂ.ಗಳ ಅನುದಾನವನ್ನು ಒದಗಿಸ ಲಾಗುವುದು.

57. ಯಾಂತ್ರೀಕೃತ ದೋಣಿಗಳಿಗೆ ಹೆಚ್ಚಿನ ಡೀಸೆಲ್ : ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ರಾಜ್ಯ ಮಾರಾಟ ಕರ ರಹಿತ ಡೀಸೆಲ್ ಗೆ ಹೆಚ್ಚಿನ ಬೇಡಿಕೆ ಇದ್ದು ಈ ಪ್ರಮಾಣವನ್ನು 1.25 ಲಕ್ಷ ಕಿಲೋ ಲೀಟರ್‌ಗೆ ಏರಿಸಲಾಗುವುದು. 30 ಸಾವಿರ ಮೀನುಗಾರರಿಗೆ ಜೀವ ರಕ್ಷಣೆಗಾಗಿ 1,500 ರೂ. ಮೌಲ್ಯದ ಲೈಫ್ ಜಾಕೆಟ್ ಒದಗಿಸಲು 4.5 ಕೋಟಿ ರೂ.

ನೀಡಲಾಗುವುದು. 6 ಸಾವಿರ ಮಹಿಳಾ ಮೀನುಗಾರರಿಗೆ 4 ಸಾವಿರ ರೂ. ಮೌಲ್ಯದ ಶಾಖನಿರೋಧಕ ಪೆಟ್ಟಿಗೆಗಳನ್ನು ನೀಡಲಾಗುವುದು.

58. ಓಷನೇರಿಯಂಗಳ ನಿರ್ಮಾಣ : ಕೆ.ಆರ್.ಎಸ್. ಬೃಂದಾವನ ಮತ್ತು ಮಂಗಳೂರಿನ ಪಿಲಿಕುಳದಲ್ಲಿ ಅಂತರರಾಷ್ಟ್ರೀಯ ಮಟ್ಟದ ಓಷನೇರಿಯಂಗಳನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು.

59. ಉಡುಪಿ ಜಿಲ್ಲೆಯ ಹೆಜಮಾಡಿ ಕೋಡಿ ಇಳಿದಾಣ ಕೇಂದ್ರದ 2ನೇ ಹಂತದ ಅಭಿವೃದ್ಧಿಗೆ 60 ಕೋಟಿ ರೂ. ಹೂಡಿಕೆಗಾಗಿ, 2012–13ನೇ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ಅವಶ್ಯವಿರುವ 26 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ರೇಷ್ಮೆ

60. ರೇಷ್ಮೆ ಇಲಾಖೆಯ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 293 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

61. **ಉತ್ಪಾದನೆಯಲ್ಲಿ ಹೆಚ್ಚಳ :** 2012–13ನೇ ಸಾಲಿನಲ್ಲಿ 50,000 ಎಕರೆಗಳಲ್ಲಿ ಹೊಸದಾಗಿ ಹಿಪ್ಪುನೇರಳೆ ಬೆಳೆಯುವ, 12 ಕೋಟಿ ರೇಷ್ಮೆ ಮೊಟ್ಟೆ ಉತ್ಪಾದಿಸುವ ಹಾಗೂ 64,600 ಮೆಟ್ರಿಕ್ ಟನ್ ಗೂಡಿನ ಉತ್ಪಾದನೆ ಮಾಡುವ ಗುರಿಯನ್ನು ಹೊಂದಲಾಗಿದೆ.

62. **ಗುಣಮಟ್ಟದ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ :** ಗುಣಮಟ್ಟ ಹಾಗೂ ಉತ್ಪಾದಕತೆಯ ಆಧಾರದ ಮೇಲೆ ನೂರು ಮೊಟ್ಟೆಗೆ 60 ಕೆ.ಜಿ. ಗಿಂತ ಹೆಚ್ಚಿನ ಇಳುವರಿ ಪಡೆಯುವ ಮಿಶ್ರತಳಿ ಗೂಡನ್ನು ಬೆಳೆಯುವ ಬೆಳೆಗಾರರಿಗೆ ಪ್ರತಿ ಕೆ.ಜಿ.ಗೆ 10 ರೂ.ನಂತೆ ಹಾಗೂ ದ್ವಿತಳಿ ಸಂಕರಣ ತಳಿ ಗೂಡು ಉತ್ಪಾದಿಸುವ ಬೆಳೆಗಾರರಿಗೆ ಪ್ರತಿ ಕೆ.ಜಿ.ಗೆ 40 ರೂ.ನಂತೆ ಪ್ರೋತ್ಸಾಹಧನ ನೀಡಲಾಗುವುದು. ಇದಕ್ಕಾಗಿ, 2012–13ನೇ ಸಾಲಿನಲ್ಲಿ 35 ಕೋಟಿ ರೂ.ಗಳನ್ನು ವಿನಿಯೋಗಿಸಲಾಗುವುದು.

63. ನೂಲು ಬಿಚ್ಚಾಣಿಕೆ ಘಟಕಗಳಿಗೆ ವಿದ್ಯುತ್ ಸಹಾಯಧನ : ರಾಜ್ಯದಲ್ಲಿನ 7,430 ರೇಷ್ಮೆ ನೂಲು ಬಿಚ್ಚಾಣಿಕೆ ಘಟಕಗಳಲ್ಲಿ ಉಪಯೋಗಿಸುವ ಪ್ರತಿ ಯೂನಿಟ್ ವಿದ್ಯುತ್ ದರದಲ್ಲಿ ರೂ1.50 ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

64. ಬಿಚ್ಚಾಣಿಕೆ ನೂಲುಗಾರರು ಯಾವುದೇ ವಿಳಂಬವಿಲ್ಲದೆ ಸಾಲವನ್ನು ಮರುಪಾವತಿಸಿದಲ್ಲಿ, ಅವರು ಪಡೆದ ಒಂದು ಲಕ್ಷ ರೂ. ವರೆಗಿನ ದುಡಿಯುವ ಬಂಡವಾಳ ಸಾಲದ ಮೇಲೆ ಶೇ.6ರ ದರದಲ್ಲಿ ಬಡ್ಡಿ ಸಹಾಯ ಧನವನ್ನು ಒದಗಿಸಲಾಗುವುದು. ನೂಲು ಬಿಚ್ಚಾಣಿಕೆ ಉಪಕರಣಗಳ ಮೇಲೆ ಮಾಡಿದ ಯಾವುದೇ ಹೊಸ ಬಂಡವಾಳಕ್ಕೆ ಶೇ.25 ರವರೆಗಿನ ಬಂಡವಾಳ ಸಹಾಯಧನವನ್ನು 50 ಸಾವಿರ ರೂ.ಗಳಿಗೆ ಸೀಮಿತಗೊಳಿಸಿ ಒದಗಿಸ ಲಾಗುವುದು.

65. ರೇಷ್ಮೆ ಗೂಡು ಹಾಗೂ ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ಸುಧಾರಿಸಲು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ಕ್ಷೇತ್ರ ಮಟ್ಟದಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಬಲವರ್ಧನೆಗೆ 2012–13ರ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಹಾಯದೊಂದಿಗೆ ಒಟ್ಟು 112 ಕೋಟಿ ರೂ.ಗಳನ್ನು ಮೀಸಲಿರಿಸಲು ಉದ್ದೇಶಿಸಿದೆ.

66. ಹಳೆ ನೇಯ್ಗೆ ಕಾರ್ಖಾನೆಗಳ ಪುನರ್‌ಜ್ಜೀವನ : ಮೈಸೂರಿನಲ್ಲಿರುವ ರೇಷ್ಮೆ ನೇಯ್ಗೆ ಕಾರ್ಖಾನೆ, 2012ನೇ ಸಾಲಿನಲ್ಲಿ 100 ವರ್ಷಗಳನ್ನು ಪೂರೈಸುತ್ತಿದೆ. ಸಂಸ್ಥೆಯ ನೌಕರರಿಗೆ ಪ್ರೋತ್ಸಾಹ ಧನ, ಕಾರ್ಖಾನೆ ಉತ್ಪನ್ನಗಳ ಪ್ರಚಾರ, ಕಿರುಚಿತ್ರ ತಯಾರಿಕೆ, ಸಾಂಸ್ಕೃತಿಕ ಕಾರ್ಯ ಕ್ರಮಗಳಿಗೆ 5 ಕೋಟಿ ರೂ. ಮತ್ತು ಚನ್ನಪಟ್ಟಣದಲ್ಲಿರುವ ನೇಯ್ಗೆ ಘಟಕವನ್ನು ಪುನರುಜ್ಜೀವನಗೊಳಿಸಲು, ಸಾರ್ವಜನಿಕ–ಪರಿಣಿತ ಸಂಸ್ಥೆಗಳ ಸಹಭಾಗಿತ್ವದಲ್ಲಿ ಹೊಸ ನೇಯ್ಗೆ ಘಟಕ ಸ್ಥಾಪನೆ ಹಾಗೂ ಇತರೆ ಮೂಲಭೂತ ಸೌಕರ್ಯಗಳ ಅಳವಡಿಕೆಗಾಗಿ 6 ಕೋಟಿ ರೂ. ನೀಡಲಾ ಗುವುದು.

67. ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿಗೆ 2 ಕೋಟಿ ರೂ.ಗಳ ಸಹಾಯಧನ ನೀಡಲಾಗುವುದು.

ಕೃಷಿಗೆ ಉಚಿತ ವಿದ್ಯುತ್

68. 10 HP ವರೆಗಿನ ನೀರಾವರಿ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸುವ ಕಾರ್ಯಕ್ರಮವನ್ನು ಈ ವರ್ಷವೂ ಮುಂದು ವರೆಸಿ, ಇದಕ್ಕಾಗಿ ಎಸ್ಕಾಂಗಳಿಗೆ 4600 ಕೋಟಿ ರೂ.ಗಳ ಸಹಾಯಧನವನ್ನು ಒದಗಿಸಲಾಗುವುದು.

ಸಹಕಾರ

69. ಸಹಕಾರ ಇಲಾಖೆಯ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು 634 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

70. 2011–12 ವರ್ಷದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ಪಡೆಯುವ 3 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಬೆಳೆ ಸಾಲದ ಮೇಲಿನ ಬಡ್ಡಿ ದರವನ್ನು ಶೇ.1 ಕ್ಕೆ ಇಳಿಸಲಾಗಿತ್ತು. 2012–13ನೇ ಸಾಲಿನಿಂದ 1 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಬೆಳೆ ಸಾಲದ ಮೇಲಿನ ಈ ಬಡ್ಡಿ ದರವನ್ನು ಶೂನ್ಯಕ್ಕೆ ಇಳಿಸಲಾಗುವುದು.

71. ರೈತರುಗಳಿಗೆ ಸಾಲ ವಿತರಿಸಲು ಅನುಕೂಲವಾಗುವಂತೆ ಸಹಕಾರಿ ಸಂಸ್ಥೆಗಳಿಗೆ 300 ಕೋಟಿ ರೂ.ಗಳ ಸಹಾಯಧನ ನೀಡಲಾಗುವುದು.

72. ವಾಣಿಜ್ಯ ಬ್ಯಾಂಕುಗಳಿಂದ ಪಡೆಯುವ 50,000 ರೂ.ಗಳ ವರೆಗಿನ ಅಲ್ಪಾವಧಿ ಬೆಳೆ ಸಾಲದ ಮೇಲೆ ಬಡ್ಡಿದರವನ್ನು ಶೇ.3ಕ್ಕೆ ಸೀಮಿತ ಗೊಳಿಸಲು ಸರ್ಕಾರವು ಸಹಾಯಧನವನ್ನು ಒದಗಿಸುತ್ತದೆ. 2012–13ನೇ ಸಾಲಿನಲ್ಲಿ ಈ ಬೆಳೆ ಸಾಲಗಳ ಮಿತಿಯನ್ನು 1 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

73. ಯಶಸ್ವಿನಿ– ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ : 2011–12ರಲ್ಲಿ 82,000 ಸದಸ್ಯರು ಚಿಕಿತ್ಸೆ ಪಡೆಯುವ ಸಾಧ್ಯತೆ ಇದ್ದು, 2012–13ನೇ ಸಾಲಿಗೆ 100 ಕೋಟಿ ರೂ. ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರದ ವತಿಯಿಂದ 2012–13ನೇ ಸಾಲಿಗೆ ಅಂದಾಜಿಸಲಾದ ಆಯವ್ಯಯ 60 ಕೋಟಿ ರೂ.ಗಳ ಅಗತ್ಯವಿದೆ ಹಾಗೂ ಉಳಿದ 40 ಕೋಟಿ ರೂ.ಗಳನ್ನು ಸದಸ್ಯರ ವತಿಯಿಂದ ಭರಿಸಬೇಕಾಗುತ್ತದೆ.

74. ಸ್ವಸಹಾಯ ಗುಂಪುಗಳಿಗೆ ಶೇ. 4 ರ ಬಡ್ಡಿ ದರ : ಸ್ವಸಹಾಯ ಗುಂಪುಗಳಿಗೆ ಶೇ. 4 ಬಡ್ಡಿ ದರದಲ್ಲಿ ಸಹಕಾರ ಸಂಸ್ಥೆಗಳ ಮೂಲಕ ಸಾಲ ವಿತರಿಸುವ ಯೋಜನೆಯನ್ನು ಮುಂದುವರೆಸಿ 2012–13ನೇ ಸಾಲಿನಲ್ಲಿ ಅಂದಾಜು 750 ಕೋಟಿ ರೂ.ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

75. ಹೆಚ್ಚಿನ ಉಗ್ರಾಣಗಳ ನಿರ್ಮಾಣ : 2011–12ನೇ ಸಾಲಿನಲ್ಲಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ನಿಯಮಿತ ವತಿಯಿಂದ 2 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣಗಳನ್ನು 100 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. 2012–13ನೇ ಸಾಲಿನಲ್ಲಿ 50 ಕೋಟಿ ರೂ. ಹೂಡಿಕೆಯ 1 ಲಕ್ಷ ಟನ್ ಸಾಮರ್ಥ್ಯದ ಉಗ್ರಾಣಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ, 1 ಲಕ್ಷ ಟನ್ ಸಾಮರ್ಥ್ಯವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ಸೃಜಿಸಲಾಗುವುದು.

76. ಕೋಲಾರ ಚಿಕ್ಕಬಳ್ಳಾಪುರ ಸಹಕಾರಿ ಬ್ಯಾಂಕ್‌ನ್ನು ಪುನಃಶ್ಚೇತನಗೊಳಿಸಲಾಗುವುದು. ಪರವಾನಗಿ ವಿತರಿಸಲು ನಬಾರ್ಡ್ ಮೂಲಕ ಭಾರತೀಯ ರಿಸರ್ವ್ ಬ್ಯಾಂಕ್‌ನ್ನು ಸಂಪರ್ಕಿಸಲಾಗುವುದು. ರಾಜ್ಯ ಸರ್ಕಾರದಿಂದ ಅಗತ್ಯವಿರುವ ಹಣಕಾಸಿನ ನೆರವನ್ನು ಒದಗಿಸಲಾಗುವುದು.

77. 2012–13ನೇ ಸಾಲಿನಲ್ಲಿ ಪ್ರತ್ಯೇಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ್ನು ಉಡುಪಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಗುವುದು.

78. ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳ ಆಧಾರದ ಮೇಲೆ ಅಲ್ಪಾವಧಿ ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಪುನಃಶ್ಚೇತನ ಪ್ಯಾಕೇಜ್‌ನ್ನು ಒಟ್ಟು 643.29 ಕೋಟಿ ರೂ.ಗಳ ವೆಚ್ಚದಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ. ಪ್ಯಾಕೇಜ್‌ನಲ್ಲಿ ಮಾಡಲಾದ ಶಿಫಾರಸ್ಸುಗಳನ್ನು ಆಧರಿಸಿ ವಿವಿಧ ಹಂತಗಳಲ್ಲಿ ಸಂಸ್ಥೆಯ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸುವ ಮತ್ತು ಸಾಮರ್ಥ್ಯ ವೃದ್ಧಿಸುವ ಕಡೆ ಗಮನವನ್ನು ಕೇಂದ್ರೀಕರಿಸಲಾಗಿದೆ.

ಕೃಷಿ ಮಾರುಕಟ್ಟೆಗೆ ಹೊಸ ಆಯಾಮ

79. ನಮ್ಮ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರ ಉತ್ಪನ್ನಗಳ ಹೆಚ್ಚಿನ ಉತ್ಪಾದನೆ ಆದರೂ, ಸೂಕ್ತ ಮಾರುಕಟ್ಟೆಗಳು, ವ್ಯವಸ್ಥೆಯಲ್ಲಿ ಪಾರದರ್ಶಕತೆಯ ಕೊರತೆ, ಉತ್ಪಾದಕರು ಮತ್ತು ಗ್ರಾಹಕರ ನಡುವೆ ನೇರ ಸಂಪರ್ಕ ಇಲ್ಲದಿರುವುದು, ವರ್ಗೀಕರಣ ಮತ್ತು ಗುಣಮಟ್ಟದ ಕೊರತೆ, ಸೂಕ್ತ ಬೆಲೆ ಸಿಗಲು ಇ–ವ್ಯಾಪಾರದ ಕೊರತೆಗಳಿಂದ, ನಮ್ಮ ರೈತರ ಆರ್ಥಿಕ ಸ್ಥಿತಿ ದುರ್ಬಲವಾಗಿದೆ. ಈ ಸ್ಥಿತಿಯನ್ನು ಉತ್ತಮಗೊಳಿಸಿ, ಮುಂದಿನ ವರ್ಷಗಳಲ್ಲಿ ಶಾಶ್ವತವಾಗಿ ನಮ್ಮ ರೈತರ ಬಾಳನ್ನು ಸುಭದ್ರಗೊಳಿಸಲು ರಾಜ್ಯದ ಮಾರುಕಟ್ಟೆಗಳನ್ನು ಪುನರುಜ್ಜೀವನಗೊಳಿಸಲು ಸೂಕ್ತ ಕ್ರಮಗಳನ್ನು

ರೂಪಿಸಲಾಗಿದೆ. ಈ ರೀತಿಯ ಪ್ರಯತ್ನಗಳು ದೇಶದಲ್ಲೇ ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ನಡೆಯುತ್ತಿರುವುದು ನಮಗೆಲ್ಲಾ ಹೆಮ್ಮೆಯ ಸಂಗತಿ.

80. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ ಮತ್ತು ಅಭಿವೃದ್ಧಿ) ಶಾಸನ, 1966 ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ನಿಯಂತ್ರಿತ ಉತ್ಪನ್ನಗಳ ಮಾರಾಟಕ್ಕಾಗಿ ಅವಶ್ಯಕವಾದಂತಹ ಮೂಲಭೂತ ಸೌಲಭ್ಯಗಳನ್ನು ನೀಡಬೇಕೆಂದು ತಿಳಿಸಿರುವುದಲ್ಲದೆ ಖಾಸಗಿ ಮಾರುಕಟ್ಟೆಗಳು, ನೇರ ಖರೀದಿ ಕೇಂದ್ರಗಳು ಮತ್ತು ರೈತರ ಗ್ರಾಹಕ ಮಾರುಕಟ್ಟೆಗಳನ್ನು ಸ್ಥಾಪಿಸಲು ಹಾಗೂ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಮೂಲಕ ಇ–ವ್ಯಾಪಾರ ಕೈಗೊಳ್ಳಲು ಜೊತೆಗೆ ಒಪ್ಪಂದ ಕೃಷಿಯನ್ನು ಮಾಡಲು ಅವಕಾಶವನ್ನು ಮಾಡಿಕೊಡಲಾಗುವುದು.

81. ಪ್ರಸ್ತುತ ಆವರ್ತಕ ನಿಧಿಯ ಗಾತ್ರ 650 ಕೋಟಿ ರೂ.ಗಳಿದೆ. ಮಾರುಕಟ್ಟೆಯಲ್ಲಿನ ಕಡಿಮೆ ಬೆಲೆಯಿಂದಾಗಿ, ರೈತರಿಗೆ ಸಕಾಲದಲ್ಲಿ ನೆರವನ್ನು ಒದಗಿಸಲು ಆವರ್ತಕ ನಿಧಿಯ ಗಾತ್ರವನ್ನು 1,000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

82. ಆರ್.ಐ.ಟಿ.ಎಫ್. ಯೋಜನೆಯಲ್ಲಿ ಗ್ರಾಮೀಣ ಮಾರುಕಟ್ಟೆಗಳ ಅಭಿವೃದ್ಧಿ : ಗ್ರಾಮೀಣ ಮಾರುಕಟ್ಟೆಗಳಲ್ಲಿ ಹರಾಜು ಕಟ್ಟೆಗಳು, ಗೋದಾಮು, ರಸ್ತೆ, ಒಳಚರಂಡಿ, ಚಿಲ್ಲರೆ ಮಳಿಗೆಗಳು, ನೀರು ಸೌಲಭ್ಯ ಮತ್ತು ಶೌಚಾಲಯ ವ್ಯವಸ್ಥೆ, ಸೋಲಾರ್ ಲೈಟ್ ಹಾಗೂ ವಿದ್ಯುಚ್ಛಕ್ತಿಯ ವ್ಯವಸ್ಥೆ ಕಲ್ಪಿಸುವುದು.

83. ಟೆಕ್ನಾಲಜಿ ಪಾರ್ಕ್ : ಗುಲಬರ್ಗಾ ಜಿಲ್ಲೆಯಲ್ಲಿ ಒಂದು ತೊಗರಿ ಟೆಕ್ನಾಲಜಿ ಪಾರ್ಕ್, ರಾಣೆಬೆನ್ನೂರು ಮಾರುಕಟ್ಟೆ ಸಮಿತಿಯು ಹೊಂದಿರುವ 60 ಎಕರೆ ಜಾಗದಲ್ಲಿ ಮೆಕ್ಕೆಜೋಳದ ಟೆಕ್ನಾಲಜಿ ಪಾರ್ಕ್ ಮತ್ತು ತುಮಕೂರಿನ ತಿಪಟೂರು ತಾಲ್ಲೂಕಿನಲ್ಲಿ ತೆಂಗು ಉತ್ಪನ್ನಗಳ ಸಂಶೋಧನೆಯ ಮತ್ತು ಅಭಿವೃದ್ಧಿ ಘಟಕ ಸೇರಿದಂತೆ ತೆಂಗಿನ ಟೆಕ್ನಾಲಜಿ ಪಾರ್ಕ್‌ನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ಸರ್ಕಾರವು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ ಶೇ.20 ರಷ್ಟು ನೆರವನ್ನು ನೀಡಲಿದೆ.

ಇ–ಮಾರುಕಟ್ಟೆ ಸ್ಥಾಪನೆ

84. ರಾಷ್ಟ್ರೀಯ ಉತ್ಪನ್ನಗಳ ವಿನಿಮಯ ಕೇಂದ್ರವನ್ನು (ಎನ್.ಸಿ.ಡಿ.ಇ.ಎಕ್ಸ್.) 2003ರಲ್ಲಿ ಸ್ಥಾಪಿಸಿದ್ದು, ಈ ರಾಷ್ಟ್ರಮಟ್ಟದ ಸಾರ್ವಜನಿಕ ಸಂಸ್ಥೆಯಲ್ಲಿ ನಬಾರ್ಡ್, ಎಲ್.ಐ.ಸಿ. ಸೇರಿದಂತೆ ಹಲವಾರು ರಾಷ್ಟ್ರೀಕೃತ ಬ್ಯಾಂಕ್‌ಗಳು ಮತ್ತು ಪರಿಣಿತ ಸಂಸ್ಥೆಗಳು ಭಾಗವಹಿಸಿವೆ. ನುರಿತ ತಜ್ಞರಿಂದ ನಡೆಸುತ್ತಿರುವ ಈ ಸಂಸ್ಥೆ ರಾಷ್ಟ್ರದಲ್ಲಿ 23 ಕೃಷಿ ಉತ್ಪನ್ನಗಳು ಸೇರಿದಂತೆ ಒಟ್ಟು 36 ಉತ್ಪನ್ನಗಳಿಗೆ ತಾಂತ್ರಿಕತೆ ಆಧಾರಿಸಿದ ಪಾರದರ್ಶಕವಾದ ಮಾರುಕಟ್ಟೆ, ಆನ್‌ಲೈನ್ ವಿನಿಮಯ ಪ್ರಾಂಗಣ, ಉತ್ತಮ ಬೆಲೆ ಮತ್ತು ಮಧ್ಯಮವರ್ತಿಗಳಿಂದ ಕಿರುಕುಳ ತಪ್ಪಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಈ ಸಂಸ್ಥೆಯ ಚಟುವಟಿಕೆಗಳನ್ನು ನಮ್ಮ ರಾಜ್ಯದಲ್ಲಿ ವಿಸ್ತರಿಸುವ ಅಗತ್ಯವಿದೆ.

85. 2010–11ರ ಆಯವ್ಯಯದಲ್ಲಿ ತಿಳಿಸಿದಂತೆ, ಈಗಾಗಲೇ ಕೆಲವು ಮಾರುಕಟ್ಟೆ ಪ್ರಾಂಗಣಗಳಲ್ಲಿ ಎನ್.ಸಿ.ಡಿ.ಇ.ಎಕ್ಸ್. ಮೂಲಕ ಕೃಷಿ ಉತ್ಪನ್ನಗಳ ವಿನಿಮಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಇದರ ಯಶಸ್ಸಿನಿಂದ ಉತ್ತೇಜಿತಗೊಂಡ ರೈತರು ಈ ಮಾದರಿಯನ್ನು ಉನ್ನತೀಕರಿಸಿ ರಾಜ್ಯಾದ್ಯಂತ ವಿಸ್ತರಿಸಲು ಹೆಚ್ಚಿನ ಬೇಡಿಕೆಗಳನ್ನು ಮುಂದಿರಿಸಿದ್ದಾರೆ. ರೈತರ ಈ ಬೇಡಿಕೆಗಳು ಮತ್ತು ತಜ್ಞರ ಸಲಹೆಗಳನ್ನು ಪರಿಗಣಿಸಲಾಗಿದ್ದು, ಕೃಷಿ ಉತ್ಪನ್ನ ಮಾರುಕಟ್ಟೆಗಳನ್ನು ಆಧುನೀಕರಣಗೊಳಿಸಲು ಎನ್.ಸಿ.ಡಿ.ಇ.ಎಕ್ಸ್. ಮತ್ತು ಇತರೆ ಪರಿಣಿತ ಸಂಸ್ಥೆಗಳ ಜೊತೆ ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುವುದು.

86. ಇ–ವ್ಯಾಪಾರದ ಪಾತ್ರವನ್ನು ಹೆಚ್ಚಿಸುವುದು : ಈ 2012–13ನೇ ಸಾಲಿನಲ್ಲಿ 11 ಪ್ರಮುಖ ಉತ್ಪನ್ನಗಳಿಗೆ 50 ಎ.ಪಿ.ಎಂ.ಸಿ. ಮಾರುಕಟ್ಟೆಗಳ ಮೂಲಕ ಇ–ಟೆಂಡರ್ ಮಾರಾಟ ಪದ್ಧತಿಯನ್ನು ಅಳವಡಿಸಲಾಗುವುದು. ಮೊದಲನೇ ಹಂತದಲ್ಲಿ 11 ಪ್ರಮುಖ ಉತ್ಪನ್ನಗಳಾದ ತೊಗರಿ, ಕೊಬ್ಬರಿ, ಅರಿಶಿನ, ಒಣಮೆಣಸಿನಕಾಯಿ, ಒಣದ್ರಾಕ್ಷಿ, ಅಕ್ಕಿ, ಅಡಿಕೆ, ಮೆಕ್ಕೆಜೋಳ, ಶೇಂಗಾ, ಹತ್ತಿ ಮತ್ತು ಸೂರ್ಯಕಾಂತಿ ಬೆಳೆಗಳನ್ನು ಈ ಯೋಜನೆಯಡಿ ತರಲಾಗುವುದು. ಆರಂಭದಲ್ಲಿ ಈ ಪ್ರತಿ ಉತ್ಪನ್ನ ರಾಜ್ಯದ ಒಟ್ಟು ಉತ್ಪಾದನೆಯ ಶೇ.20 ರಿಂದ ಪ್ರಾರಂಭಿಸಿ, ಹಂತ ಹಂತವಾಗಿ ಶೇ.70 ರಷ್ಟು ಉತ್ಪಾದನೆಗೆ ಅಳವಡಿಸಲಾಗುವುದು. (ವಿವರಗಳಿಗೆ ಕೋಷ್ಟಕ–1 ನೋಡಿ).

87. **ವರ್ಗೀಕರಣ** : ಮೊದಲ ಹಂತದಲ್ಲಿ ರಾಯಚೂರು, ರಾಣೆಬೆನ್ನೂರು, ಬಾಗಲಕೋಟೆ, ಚಾಮರಾಜನಗರ, ಶಿಕಾರಿಪುರ ಮತ್ತು ಚನ್ನರಾಯಪಟ್ಟಣ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರದೇಶಗಳಲ್ಲಿ, ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವ್ಯವಹಾರ ಸಲಹೆಗಾರರ ಸಲಹೆ ಪಡೆದು ವಿನೂತನ ಉಗ್ರಾಣ, ಸ್ವಚ್ಛೀಕರಣ ಮತ್ತು ವರ್ಗೀಕರಣ ಮಾಡುವ ಉಪಕರಣಗಳು ಹಾಗೂ ಇನ್ನಿತರೆ ಮೌಲ್ಯವರ್ಧಿತ ಚಟುವಟಿಕೆಗಳನ್ನು ಸರ್ಕಾರ–ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲಾಗುವುದು.

88. **ಉಗ್ರಾಣ ಸೇವೆ ಮತ್ತು ದಾಸ್ತಾನು ಇಟ್ಟು ಉತ್ಪನ್ನಗಳಿಗೆ ಹಣಕಾಸಿನ ನೆರವು:** ಈ ಸೌಲಭ್ಯವು ಕೋಯ್ಲು ಆದ ತಕ್ಷಣ ಉತ್ಪನ್ನವನ್ನು ಕಡಿಮೆ ಧಾರಣೆಗೆ ಮಾರಾಟ ಮಾಡದೆ ಮುಂದಿನ ಅವಧಿಯಲ್ಲಿ ಹೆಚ್ಚಿನ ಧಾರಣೆಗೆ ಮಾರಾಟ ಮಾಡಲು ರೈತರಿಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ. ಉತ್ಪನ್ನಗಳ ಗುಣಮಟ್ಟದ ಬಗ್ಗೆ ಖಾತ್ರಿಯನ್ನು ನೀಡಬಹುದಾದಲ್ಲಿ, ಈ ಮಾರುಕಟ್ಟೆಗೆ ಮಾರುಕಟ್ಟೆ ಪ್ರಾಂಗಣದಲ್ಲಿ ಉತ್ಪನ್ನಗಳನ್ನು ಭೌತಿಕವಾಗಿ ಲಭ್ಯವಿರುವಂತೆ ಮಾಡುವ ಅವಶ್ಯಕತೆ ಇರುವುದಿಲ್ಲ. ಇಂತಹ ಉತ್ಪನ್ನಗಳನ್ನು ಆನ್‌ಲೈನ್ ವ್ಯಾಪಾರ ವೇದಿಕೆಯ ಮೂಲಕ ವ್ಯಾಪಾರ ಮಾಡಬಹುದು.

89. **ಯೋಜನೆಯ ಅನುಷ್ಠಾನ** : ಈ ಯೋಜನೆಯನ್ನು ಸರ್ಕಾರವು ಇನ್ನಿತರೆ ಭಾಗೀದಾರರಾದ ಕೃಷಿ ಮಾರಾಟ ಇಲಾಖೆ, ಕೃಷಿ ಇಲಾಖೆ, ಎನ್.ಸಿ.ಡಿ.ಇ.ಎಕ್ಸ್., ಸ್ಪಾಟ್ ಎಕ್ಸ್‌ಛೇಂಜ್, ಇವರುಗಳ ಮೂಲಕ ಅನುಷ್ಠಾನ ಗೊಳಿಸಲು ಉದ್ದೇಶಿಸಲಾಗಿದೆ. ಯೋಜನೆಯ ವಿನ್ಯಾಸ ಮತ್ತು ಅನುಷ್ಠಾನದ ಮೇಲ್ವಿಚಾರಣೆಗಾಗಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸ ಲಾಗುವುದು. ಈ ಯೋಜನೆಗೆ ಒಟ್ಟು 10 ಕೋಟಿ ರೂ.ಗಳನ್ನು ನೀಡಲಾಗುವುದು.

90. **ದೀರ್ಘ ಕಾಲದವರೆಗೆ ಉತ್ಪನ್ನಗಳ ಸಂಗ್ರಹಣೆ** : ರಾಜ್ಯದಲ್ಲಿ ಉತ್ಪಾದನೆಯಾಗುವ ಆಹಾರ ಧಾನ್ಯಗಳು, ಹಣ್ಣುಗಳು, ತರಕಾರಿಗಳನ್ನು ದೀರ್ಘಕಾಲದವರೆಗೆ ಸಂಗ್ರಹಿಸಲು ಅನುಕೂಲವಾಗುವಂತೆ ಅವುಗಳ ಅಸ್ತಿತ್ವದ ಸಾಮರ್ಥ್ಯವನ್ನು (Shelf-life) ಹೆಚ್ಚಿಸಲು ಹಾಗೂ ರಫ್ತನ್ನು ಉತ್ತೇಜಿಸಲು ಪ್ರಮುಖ ಹಂತದಲ್ಲಿ ಪೈಲಟ್ ಯೋಜನೆಗಾಗಿ ಬೆಂಗಳೂರಿನ ದಾಸನ ಪುರದಲ್ಲಿ ಮಾರುಕಟ್ಟೆ ಸಮಿತಿಯು ಹೊಂದಿರುವ ನಿವೇಶನದಲ್ಲಿ ಹೊಸ ಘಟಕವನ್ನು ಸ್ಥಾಪಿಸುವುದು.

91. ಮಾರುಕಟ್ಟೆಗಳ ಶ್ರೇಣೀಕರಣ : ರಾಜ್ಯದ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳು, ಕಾರ್ಯ ನಿರ್ವಹಣೆ ಸಾಮರ್ಥ್ಯ, ಸೇವೆಗಳ ಲಭ್ಯತೆ ಇವುಗಳ ಆಧಾರದ ಮೇಲೆ ಒಂದು ಸ್ವತಂತ್ರವಾದ ನೈಪುಣ್ಯತೆ ಇರುವ ಸಂಸ್ಥೆಯಿಂದ ಸಮೀಕ್ಷೆ ನಡೆಸಿ ಮಾರುಕಟ್ಟೆಗಳಿಗೆ ನಿರ್ದಿಷ್ಟ ಶ್ರೇಣಿಯನ್ನು (Rating) ನೀಡುವ ಬಗ್ಗೆ ಕ್ರಮ ಕೈಗೊಳ್ಳುವುದು. ಇಂತಹ ಶ್ರೇಣಿ ನೀಡುವ ವ್ಯವಸ್ಥೆಯು ರಾಷ್ಟ್ರಮಟ್ಟದಲ್ಲಿ ಉತ್ತಮ ಮಾರುಕಟ್ಟೆಗಳನ್ನು ಗುರುತಿಸಲು ಸಹಾಯಕವಾಗುವುದರ ಜೊತೆಗೆ ಉತ್ತಮ ಮಾರುಕಟ್ಟೆ ಪದ್ಧತಿಗಳನ್ನು ಹೆಚ್ಚು ಸುಧಾರಣೆಗೊಳಿಸುವ ದಿಶೆಯಲ್ಲಿ ಸಹಾಯಕವಾಗುವುದು.

ಜಲಸಂಪನ್ಮೂಲ ಅಭಿವೃದ್ಧಿಗೆ ಪ್ರಾಮುಖ್ಯತೆ

92. 2012-13ನೇ ಸಾಲಿನಲ್ಲಿ ನೀರಾವರಿ ವಲಯಕ್ಕೆ ಒಟ್ಟು 10,500 ಕೋಟಿ ರೂ.ಗಳನ್ನು ಒದಗಿಸಲು ಸಂಪನ್ಮೂಲವನ್ನು ಕ್ರೋಢೀಕರಿಸಲಾಗುವುದು.

93. ಈಗಾಗಲೇ ನಮ್ಮ ರಾಜ್ಯದಲ್ಲಿ ನೀರಾವರಿ ದಶಕವೆಂದು (2011–2020) ಘೋಷಿಸಿರುವುದರಿಂದ, ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

94. **ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–3 :** ಶಾಶ್ವತ ಬರಪೀಡಿತ ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ, ಗುಲ್ಬರ್ಗಾ, ಯಾದಗಿರಿ ಮತ್ತು ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಒಟ್ಟು 13.09 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸುವ ಈ ಯೋಜನೆಯನ್ನು ರಾಜ್ಯದ ಪಾಲಿನ 130 ಟಿ.ಎಂ.ಸಿ. ಕೃಷ್ಣಾ ನೀರಿನ ಬಳಕೆಗಾಗಿ 17,207 ಕೋಟಿ ರೂ.ಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಯನ್ನು 7 ವರ್ಷಗಳಲ್ಲಿ ಕಲ್ಪಿಸಲು ಉದ್ದೇಶಿಸಲಾಗಿದೆ. ಈ ಯೋಜನೆಗೆ ಕೇಂದ್ರದ ನೆರವು ಪಡೆದುಕೊಳ್ಳಲಾಗುವುದು. ಅಲ್ಲದೆ, ಈ ಯೋಜನೆಗೆ ವಿವಿಧ ಮೂಲಗಳಿಂದ ಹಣಕಾಸು ಸಂಪನ್ಮೂಲಗಳನ್ನು ಒದಗಿಸಲಾಗುವುದು.

95. ಪ್ರಸಕ್ತ ಸಾಲಿನಲ್ಲಿ ಮುಳವಾಡ ಏತ ನೀರಾವರಿ, ನಾರಾಯಣಪುರ ಬಲದಂಡೆ ವಿಸ್ತರಣಾ ಕಾಲುವೆ (95 ಕಿ.ಮೀ. ನಂತರ), ಚಿಮ್ಮಲಗಿ ಏತ ನೀರಾವರಿ, ಮಲ್ಲಾಬಾದಿ ಮುಂತಾದ ಯೋಜನೆಗಳನ್ನು ಪ್ರಾರಂಭಿಸಲಾಗುವುದು. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕಿನಲ್ಲಿ ನಂದವಾಡಗಿ, ಬಿಜಾಪುರ ಹಾಗೂ ಜಮಖಂಡಿ ತಾಲ್ಲೂಕಿನ ತುಬಚಿ-ಬಬಲೇಶ್ವರ, ಹಾಗೂ ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಬೂದಿಹಾಳ ಏತ ನೀರಾವರಿ ಯೋಜನೆಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುವುದು.

96. ಕುಡಿಯುವ ನೀರಿಗೆ ಎತ್ತಿನ ಹೊಳೆ ಯೋಜನೆ : ರಾಜ್ಯದ ಪೂರ್ವಭಾಗದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು, ಮತ್ತಿತರ ಜಿಲ್ಲೆಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ತೀವ್ರ ಅಭಾವವಿದ್ದು, ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಗಿರುವ ಹಿನ್ನೆಲೆಯಲ್ಲಿ, ಈ ಭಾಗದ ಜನರಿಗೆ ಕುಡಿಯುವ ನೀರನ್ನು ಒದಗಿಸುವ ದೃಷ್ಟಿಯಿಂದ ಎತ್ತಿನಹೊಳೆ ಯೋಜನೆಯನ್ನು ಸರ್ಕಾರವು ರೂಪಿಸಿದೆ. ಈಗಾಗಲೇ ಸದರಿ ಯೋಜನೆಯ ಶಕ್ಯತಾ ವರದಿಯನ್ನು ತಯಾರಿಸಿದ್ದು, ಹಾಸನ ಜಿಲ್ಲೆಯ ಸಕಲೇಶಪುರದ ಹತ್ತಿರ ಎತ್ತಿನಹೊಳೆ ಮತ್ತಿತರ ಹಳ್ಳಗಳಿಗೆ ಸಣ್ಣ ಸಣ್ಣ ಬ್ಯಾರೇಜುಗಳನ್ನು ನಿರ್ಮಿಸಿ 24 ಟಿ.ಎಂ.ಸಿ. ನೀರನ್ನು ಎತ್ತಿ ಈ ಜಿಲ್ಲೆಗಳಿಗೆ ಪೂರೈಸಲು ಯೋಜಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ಹಳ್ಳಗಳಲ್ಲಿಯೇ ನೀರನ್ನು ಸಂಗ್ರಹಿಸುವುದರಿಂದ, ಹೆಚ್ಚುವರಿಯಾಗಿ ಯಾವುದೇ ಅರಣ್ಯ ಪ್ರದೇಶ ಮುಳುಗಡೆಯಾಗುವ ಭೀತಿಯಾಗಲಿ, ಪರಿಸರಕ್ಕೆ ಧಕ್ಕೆ ಯಾಗುವ ಶಂಖೆ ಇರುವುದಿಲ್ಲ. 2012-13ನೇ ಸಾಲಿನಲ್ಲಿ ಈ ಯೋಜನೆಗೆ 400 ಕೋಟಿ ರೂ.ಗಳನ್ನು ಒದಗಿಸಲಾಗುವುದು.

97. ಇದಲ್ಲದೇ, ಪಶ್ಚಿಮಾಭಿಮುಖಿ ನದಿಗಳ ಪೂರಕ ನೀರನ್ನು, ಬರಪೀಡಿತ ಪ್ರದೇಶಗಳಿಗೆ ಹರಿಸುವ ಶ್ರೀ ಪರಮಶಿವಯ್ಯನವರ ವರದಿಯ ಅನುಸಾರ ಈಗಾಗಲೇ ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಕ್ರಮ ಜರುಗಿಸಲಾಗಿದೆ. ಹಾಗೂ ವಿವರವಾದ ಯೋಜನಾ ವರದಿಯ ಆಧಾರಿತ ಕ್ರಮಗಳನ್ನು ಪ್ರಸ್ತುತ ಸಾಲಿನಲ್ಲಿ ಕೈಗೊಳ್ಳಲಾಗುವುದು.

98. ಸೌಭಾಗ್ಯ ಸಂಜೀವಿನಿ : ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳ ಜೋಡಣೆ "ಸೌಭಾಗ್ಯ ಸಂಜೀವಿನಿ" ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಸಿದೆ. ಇದರಿಂದ ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆಯ ಕುಡಿಯುವ

ನೀರು, ನೀರಾವರಿ, ಮೀನುಗಾರಿಕೆ, ನೆರೆ ನಿಯಂತ್ರಣ ಹಾಗೂ ವಿದ್ಯುತ್ ಉತ್ಪಾದನೆಗೆ ಪೂರಕವಾಗಲಿದೆ.

99. ತುಂಗಭದ್ರಾ ಜಲಾಶಯಗಳಲ್ಲಿ ಹೂಳು ತೆಗೆಯುವುದು: ತುಂಗಭದ್ರಾ ಜಲಾಶಯದ ನೀರಿನ ಸಂಗ್ರಹಣಾ ಸಾಮರ್ಥ್ಯವು ಹೂಳು ಶೇಖರಣೆಯಿಂದಾಗಿ ಕುಂಠಿತಗೊಂಡಿರುತ್ತದೆ. ಜಲಾಶಯದ ಹೂಳು ನಿರ್ಮೂಲನೆ ಕುರಿತು ಪೂರ್ವಶಕ್ಯತಾ ಅಧ್ಯಯನವನ್ನು ಮತ್ತು ಡ್ರೆಡ್ಜಿಂಗ್ ನೊಂದಿಗೆ ಜಲಾಶಯದ ಹೂಳು ನಿರ್ಮೂಲನೆಯನ್ನು ಪ್ರಾಯೋಗಿಕವಾಗಿ ನಿರ್ವಹಿಸಲು ಕೆಲವು ಪರಿಣಿತ ಸಂಸ್ಥೆಗಳು ಸಹಮತಿ ವ್ಯಕ್ತಪಡಿಸಿದ್ದು, ಸೂಕ್ತ ಕಾರ್ಯ ವಿಧಾನವನ್ನು ನಿರ್ಧರಿಸಿ, ಹೂಳು ತೆಗೆಯುವ ಕಾಮಗಾರಿಯನ್ನು ಪ್ರಸ್ತುತ ವರ್ಷದಲ್ಲಿ ಕೈಗೊಳ್ಳಲಾಗುವುದು.

100. ಆಧುನೀಕರಣ : 2012–13ನೇ ಸಾಲಿನಲ್ಲಿ ನಾರಾಯಣಪುರ ಎಡದಂಡೆ, ಗೋಂಧಿ, ತುಂಗಾ, ವಿಜಯನಗರ ನಾಲೆಗಳು, ಹಾಗೂ ಶತಮಾನಗಳಷ್ಟು ಹಿಂದೆ ನಿರ್ಮಿಸಿರುವ ಚಾಮರಾಜ, ಮಿರ್ಲೆ & ರಾಮಸಮುದ್ರ, ಮಂದಗೆರೆ ಮತ್ತು ಹೇಮಗಿರಿ, ದೇವರಾಯ ವಿರಿಜಾ, ರಾಮಸ್ವಾಮಿ, ಚಿಕ್ಕದೇವರಾಯ ನಾಲೆ, ಹಲುಸೂರು, ಹುಲ್ಲಹಳ್ಳಿ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

101. ವಿ.ಸಿ. ಶಾಖಾ ನಾಲೆ ಆಧುನೀಕರಣ : ವಿಶ್ವೇಶ್ವರಯ್ಯ ನಾಲಾ ಜಾಲ ವ್ಯವಸ್ಥೆಯ 500 ಕಿಮೀ. ಉದ್ದದ, ಶಾಖಾ ನಾಲೆ, ಉಪನಾಲೆ ಅಭಿವೃದ್ಧಿ, ಕಾವೇರಿ ಕೊಳ್ಳದಲ್ಲಿ 600 ಕಿಮೀ. ಉದ್ದದ ಅಣೆಕಟ್ಟು ನಾಲೆಗಳ ಆಧುನೀಕರಣ, ಕೆರೆಗಳನ್ನು ತುಂಬಿಸುವ 4 ಯೋಜನೆಗಳು, ಅರ್ಕಾವತಿ ನದಿ ಪುನಃಶ್ಚೇತನ ಹಾಗೂ 100 ಕೆರೆಗಳ ಪುನರುತ್ಥಾನ ಕಾರ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುವುದು. ಕಾವೇರಿ ಕೊಳ್ಳದ ಯೋಜನೆಗಳಿಂದ 22,970 ಎಕರೆ ಪ್ರದೇಶಕ್ಕೆ ಹೊಸದಾಗಿ ನೀರಾವರಿ ಸೌಲಭ್ಯ ಹಾಗೂ ಕುಡಿಯುವ ನೀರಿನ ಯೋಜನೆಗಳು ಸೇರಿದಂತೆ 7 ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ.

102. ಯಗಚಿ ಯೋಜನೆಯಲ್ಲಿ ಮುಂದುವರೆದ 24,454 ಎಕರೆ ಪ್ರದೇಶವನ್ನು ಪ್ರಸ್ತುತ ಸಾಲಿನಲ್ಲಿ ನೀರಾವರಿಗೆ ತರಲಾಗುವುದು.

103. 2012–13ನೇ ಸಾಲಿಗೆ ಜಲಸಂಪನ್ಮೂಲ ಇಲಾಖೆಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ 1,55,000 ಎಕರೆ ಪ್ರದೇಶಕ್ಕೆ ಹೊಸದಾಗಿ ನೀರಾವರಿಗೆ ಒಳಪಡಿಸುವುದು, 1,00,000 ಎಕರೆ ಪ್ರದೇಶಕ್ಕೆ ಹೊಲಗಾಲುವೆ ನಿರ್ಮಿಸುವುದು, 2,00,000 ಎಕರೆ ಪ್ರದೇಶದಲ್ಲಿ ಬಸಿಗಾಲುವೆ ನಿರ್ಮಿಸುವುದು ಹಾಗೂ 60,000 ಎಕರೆ ಸವಳು ಚೌಳು ಬಾಧಿತ ನೀರಾವರಿ ಕ್ಷೇತ್ರವನ್ನು ಪುನರುತ್ಥಾನಗೊಳಿಸುವ ಗುರಿ ಹೊಂದಲಾಗಿದೆ.

104. ರೈತರಿಗೆ ಒದಗಿಸುವ ಸೇವೆಗಳನ್ನು ಉತ್ತಮಪಡಿಸಲು –

(ಅ) ಅಚ್ಚುಕಟ್ಟು ಪ್ರದೇಶದ ಮಣ್ಣು ಆರೋಗ್ಯ ಪತ್ರ ವಿತರಿಸುವುದು;

(ಆ) ನೀರು ಬಳಕೆದಾರರ ಸಂಘಗಳನ್ನು ಬಲಪಡಿಸಿ ಅವರಿಗೆ ನೀರಾವರಿ ನಿರ್ವಹಣೆಯಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ನೀಡಲಾಗುವುದು. ಇದಕ್ಕಾಗಿ ನೀರಿನ ಕರವನ್ನು ಕಂದಾಯ ಇಲಾಖೆ ಮೂಲಕ ವಸೂಲಿ ಮಾಡಿ, ಅದರಲ್ಲಿನ ಶೇ.70 ರಷ್ಟನ್ನು ನೀರಿನ ಬಳಕೆದಾರರ ಸಂಘಗಳಿಗೆ ನೀಡಲಾಗುವುದು. ಈಗಾಗಲೇ ಈ ಪದ್ಧತಿ ಬಿಹಾರ, ಮಹಾರಾಷ್ಟ್ರ ಮತ್ತು ಇತರೆ ರಾಜ್ಯಗಳಲ್ಲಿ ಅನುಷ್ಠಾನದಲ್ಲಿದೆ;

(ಇ) ನೀರಿನ ನಿರ್ವಹಣೆಗೆ ಒತ್ತು ನೀಡುವ ದೃಷ್ಟಿಯಿಂದ ಸಮಗ್ರ ಜಲಸಂಪನ್ಮೂಲಗಳ ನಿರ್ವಹಣೆಗೆ (IWRM) ನೈಪುಣ್ಯತಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಇದರ ಮೂಲಕ ಸಮರ್ಪಕ ನೀರು ನಿರ್ವಹಣೆಯಲ್ಲಿ ಸಮನ್ವಯತೆ ಸಾದಿಸುವುದು.

105. ಇದಲ್ಲದೆ, ಈ ಕೆಳಕಂಡ ಯೋಜನೆಗಳನ್ನು 2012–13ನೇ ಸಾಲಿನಲ್ಲಿ ಪೂರ್ಣಗೊಳಿಸಿ, ಲೋಕಾರ್ಪಣೆ ಮಾಡಲಾಗುವುದು. ಉದಾ: ಕಟ್ಟೆಪುರ ಅಚ್ಚುಕಟ್ಟು ಪ್ರದೇಶದ ನಾಲೆಗಳ ಆಧುನೀಕರಣ, ಕಬಿನಿ ಬಲದಂಡೆ ನಾಲೆಯ ಆಧುನೀಕರಣ, ಗೂಳೂರು, ಹೆಬ್ಬೂರು ಮತ್ತು ಹೊನ್ನವಳ್ಳಿ 2ನೇ ಹಂತದ ಕುಡಿಯುವ ನೀರಿನ ಕಾಮಗಾರಿ, ಶಿಗ್ಗಾಂವಿ ಏತ ನೀರಾವರಿ, ಸೌಪರ್ಣಿಕ ಯೋಜನೆ, ಬೆಣ್ಣೆಹಳ್ಳಿ–ಕೊಣ್ಣೂರು–ಕೊಳಚ್ಚಿ ಏತ ನೀರಾವರಿ

ಯೋಜನೆ, ಅಮರ್ಜಾ ಯೋಜನೆ, ಭದ್ರಾ ಕಾಲುವೆಗಳ ಆಧುನೀಕರಣ ಯೋಜನೆ ಮತ್ತು ರಾಜನಹಳ್ಳಿ ಏತ ನೀರಾವರಿ ಯೋಜನೆ.

ಸಣ್ಣ ನೀರಾವರಿಗೆ ಹೆಚ್ಚಿನ ಮಹತ್ವ

106. ಭಾರತ ಸರ್ಕಾರದಿಂದ ಲಭ್ಯವಾಗುವ ಅನುದಾನ ಹಾಗೂ ರಾಜ್ಯ ಸರ್ಕಾರದ ಪಾಲಿನೊಂದಿಗೆ ಡಿ.ಪಿ.ಎ.ಪಿ. ತಾಲ್ಲೂಕುಗಳಲ್ಲಿ ತ್ವರಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮದಡಿ (ಎ.ಐ.ಬಿ.ಪಿ.) ಪ್ರಸ್ತುತ 250 ಕೋಟಿ ರೂ. ಮೌಲ್ಯದ ಸುಮಾರು 176 ಯೋಜನೆಗಳನ್ನು 2012-13ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ. 2012-13ನೇ ಸಾಲಿನಲ್ಲಿ 15,000 ಹೆಕ್ಟೇರ್ ಪ್ರದೇಶದಲ್ಲಿ ಹೊಸ ನೀರಾವರಿ ಸೌಲಭ್ಯ, 11,100 ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಸೌಲಭ್ಯದ ಸ್ಥಿರೀಕರಣ, ಮತ್ತು 5,000 ಮೀಟರ್ ಉದ್ದದ ನದಿ ದಂಡೆ ಸಂರಕ್ಷಣೆ ಕಾಮಗಾರಿ ನಿರ್ಮಾಣ ಮಾಡಲಾಗುವುದು.

107. ಸಣ್ಣ ನೀರಾವರಿ ಕೆರೆಗಳ ಪುನರುಜ್ಜೀವನಕ್ಕಾಗಿ, ಈ ಯೋಜನೆಯನ್ನು ಬೃಹತ್ ಪ್ರಮಾಣದಲ್ಲಿ 2011-12ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಯೋಜನೆಯನ್ನು ಪುನರ್ ರಚಿಸಲು NREGA ಯೊಂದಿಗೆ ಏಕೀಕರಣಗೊಳಿಸುವ ಅಗತ್ಯವಿದ್ದು, ಇದಕ್ಕಾಗಿ 150 ಕೋಟಿ ರೂ.ಗಳನ್ನು ಒದಗಿಸಲಾಗುವುದು.

108. ಕರಾವಳಿ ಜಿಲ್ಲೆಗಳಲ್ಲಿ ಕಿಂಡಿ ಅಣೆಕಟ್ಟು ಮತ್ತು ಬಂದರುಗಳ ನಿರ್ಮಾಣ : ಕರಾವಳಿ ಜಿಲ್ಲೆಗಳಲ್ಲಿನ ನದಿ / ತೊರೆಗಳಿಗೆ ಅಡ್ಡಲಾಗಿ ಅಗತ್ಯವಿರುವ ಕಡೆಗಳಲ್ಲಿ ಕಿಂಡಿ ಅಣೆಕಟ್ಟುಗಳು ಮತ್ತು ಬಾಂದಾರಗಳನ್ನು ನಿರ್ಮಿಸಲು ಈ ವರ್ಷ 50 ಕೋಟಿ ರೂ.ಗಳನ್ನು ಮೀಸಲಿಡಲಾಗುವುದು.

109. ಅಂತರ್ಜಲ ನಿಯಂತ್ರಣ ಪ್ರಾಧಿಕಾರ : ಕುಡಿಯುವ ನೀರಿನ ಹಾಗೂ ನೀರಾವರಿ ವಲಯಗಳಲ್ಲಿ ಅಂತರ್ಜಲದ ಪ್ರಾಮುಖ್ಯತೆಯನ್ನು ಗಮನದಲ್ಲಿರಿಸಿಕೊಂಡು ನಮ್ಮ ಸರ್ಕಾರ ಈಗಾಗಲೇ "ಅಂತರ್ಜಲ ನಿಯಂತ್ರಣ ಪ್ರಾಧಿಕಾರ" ವನ್ನು ರಚಿಸಲು ನಿರ್ಣಯಿಸಿದ್ದು, ಅಂತರ್ಜಲ ವಿಷಯದ ಸಂಪೂರ್ಣ ಜವಾಬ್ದಾರಿಯನ್ನು ಸಣ್ಣ ನೀರಾವರಿ ಇಲಾಖೆಗೆ ವಹಿಸಲಾಗುವುದು.

110. ರೈತರ ಸಮುದಾಯ ಸಹಭಾಗಿತ್ವದಲ್ಲಿ ಕೆರೆಗಳ ಜೀರ್ಣೋದ್ಧಾರ: ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣಾ ಯೋಜನೆ ಯಡಿಯಲ್ಲಿ ನಿರಂತರ ಸುಸ್ಥಿರ ಕೆರೆಗಳ ನಿರ್ವಹಣೆ ಸಂಸ್ಥೆಗಳನ್ನು ಸಮಗ್ರ ಅಭಿವೃದ್ಧಿ ಮತ್ತು ಕಾರ್ಯಾಚರಣೆ ಮತ್ತು ನಿರ್ವಹಣೆಯ ಮುಖಾಂತರ ಜನರಿಗೆ ಹೆಚ್ಚುವರಿ ಆದಾಯವನ್ನು ಒದಗಿಸುವ ಉದ್ದೇಶದಿಂದ ಜಲ ಸಂವರ್ದನೆ ಯೋಜನಾ ಸಂಘವನ್ನು 2000ನೇ ವರ್ಷದಲ್ಲಿ ರೂಪಿಸಲಾಗಿದೆ. ಜಲ ಸಂವರ್ಧನೆ ಯೋಜನಾ ಸಂಘವು ಯಶಸ್ವಿಯಾಗಿ 3,126 ಸುಸ್ಥಿರ ಕೆರೆ ನಿರ್ವಹಣಾ ಸಂಸ್ಥೆಗಳನ್ನು 11.6 ಲಕ್ಷ ಸದಸ್ಯರುಗಳೊಂದಿಗೆ ರೂಪಿಸಿದೆ. 2.038 ಹೆಕ್ಟೇರ್‌ನಷ್ಟು ಕೆರೆ ಅಂಗಳದಲ್ಲಿ ಸಮುದಾಯದ ಸಹಭಾಗಿತ್ವದಿಂದ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಬಡತನದ ರೇಖೆಗಿಂತ ಕೆಳಗಿರುವ ದುರ್ಬಲ ವರ್ಗಗಳ 99,453 ಫಲಾನುಭವಿಗಳಿಗೆ 61 ಕೋಟಿ ರೂ. ಮೊತ್ತವನ್ನು ಪೂರಕವಾದ ಆದಾಯೋತ್ಪನ್ನ ಚಟುವಟಿಕೆಗೆ ವೆಚ್ಚ ಮಾಡಲಾಗಿದ್ದು, ಹೆಚ್ಚುವರಿ ಲಾಭವನ್ನು ಪಡೆದಿರುತ್ತಾರೆ.

111. ಜಲ ಸಂವರ್ಧನೆ ಯೋಜನಾ ಸಂಘವು ಸಮುದಾಯ ಆಧಾರಿತ ಕೆರೆ ನಿರ್ವಹಣೆಯಲ್ಲಿ ಗಳಿಸಿದ ಅತ್ಯಮೂಲ್ಯವಾದ ಅನುಭವ ಮತ್ತು ಪ್ರಾವೀಣ್ಯತೆಯನ್ನು ಮತ್ತು ಪರಿಣಿತ ಸಂಸ್ಥೆಯೊಂದು, 2008 ಮತ್ತು 2011ರ ಎರಡು ಹಂತಗಳಲ್ಲಿ ಮೌಲ್ಯಮಾಪನವನ್ನು ಮಾಡಿದ್ದು, ಉತ್ತಮ ಪ್ರೋತ್ಸಾಹದಾಯಕ ಫಲಿತಾಂಶಗಳನ್ನು ಪರಿಗಣಿಸಿದೆ. ಈ ಯೋಜನೆಗಾಗಿ ವಿಶ್ವ ಬ್ಯಾಂಕ್ ನೀಡಿರುವ ಅನುದಾನವು ಜನವರಿ 2012ಕ್ಕೆ ಅಂತ್ಯಗೊಂಡಿ ರುತ್ತದೆ. ಆದರೂ, ಈ ಯೋಜನೆಯನ್ನು ಪೂರ್ಣಗೊಳಿಸಲು, ಆಯವ್ಯ ಯದಲ್ಲಿ 120 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗಿದೆ.

ಮಾನ್ಯ ಸಭಾಧ್ಯಕ್ಷರೆ,

ವರಕವಿ ಕುವೆಂಪು ಅವರು ಅನ್ನದಾತ ರೈತನನ್ನು ಮೆಚ್ಚಿ ನುಡಿದಂತೆ

ರಾಜ್ಯಗಳುದಿಸಲಿ ರಾಜ್ಯಗಳಳಿಯಲಿ,
ಹಾರಲಿ ಗದ್ದುಗೆ, ಮುಕುಟಗಳು,
ಮುತ್ತಿಗೆ ಹಾಕಲಿ ಸೈನಿಕರೆಲ್ಲಾ,
ಬಿತ್ತುಳಿವುದನವ ಬಿಡುವುದೆ ಇಲ್ಲ.

ಇಂತಹ ರೈತರ ಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆಯುವಂತಾಗಲಿ ಎಂಬುದು ನಮ್ಮೆಲ್ಲರ ಹಾರೈಕೆ.

ಮಣ್ಣ ಮನುಜರು ನಾವೆಲ್ಲ
ಧ್ಯೇಯದಾರಿಗೆ ಇರದು ಅಡೆ-ತಡೆ ಭಯ
ನ್ಯಾಯನೀತಿಗೆ ಕಟ್ಟಿಟ್ಟದ್ದು ಜಯ
ಕರ್ಮಯೋಗಿಗೆ ದುಡಿಮೆ ಎಂಬುದೇ ಧ್ಯೇಯ

ಎಂಬ ರೈತರನ್ನು ಕುರಿತ ಅಜ್ಞಾತ ಕವಿವಾಣಿ ಸದಾ ನೆನೆಯುವಂತಹುದು. ಕೃಷಿಯನ್ನು ಲಾಭದಾಯಕ ಕಸುಬನ್ನಾಗಿಸಲು ಮತ್ತು ಪ್ರಾತಃಸ್ಮರಣೀಯ ರೈತರ ಕ್ಷೇಮ ಮತ್ತು ಕಲ್ಯಾಣಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿ ಕೃಷಿ ಕ್ಷೇತ್ರವನ್ನು ಬಲಪಡಿಸಲು ಈ ಮುಂಗಡ ಪತ್ರದಲ್ಲಿ ನಮೂದಿಸಿರುವ ಕಾರ್ಯಕ್ರಮಗಳು ಹೆಚ್ಚಿನ ಒತ್ತಾಸೆ ನೀಡುತ್ತವೆಂದು ಭಾವಿಸುತ್ತೇನೆ.

112. 2012-13ನೇ ಸಾಲಿನಲ್ಲಿ ಕೃಷಿ ಸಂಬಂಧಿತ ಚಟುವಟಿಕೆಗಳಿಗೆ 19660 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

113. ನಮ್ಮ ರಾಜ್ಯದಲ್ಲಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳನ್ನು ಆಧರಿಸಿ, ಜೀವನ ನಡೆಸುತ್ತಿರುವ ರೈತ ಮತ್ತು ಇತರೆ ಕುಟುಂಬಗಳ ಸಮಗ್ರ ಅಭಿವೃದ್ಧಿಗಾಗಿ ನಡೆಸಿರುವ ಹೊಸ ಆಯಾಮಗಳ ಚಿಂತನೆ ಈ ಕೃಷಿ ಆಯವ್ಯಯದಲ್ಲಿದೆ. ನಮ್ಮ ದೇಶದಲ್ಲಿಯೇ ವಿನೂತನವಾದ ನಮ್ಮ ಸರ್ಕಾರದ ಈ ಎರಡನೇ ಪ್ರಯತ್ನಕ್ಕೆ ತಮ್ಮೆಲ್ಲರ ಮಾರ್ಗದರ್ಶನ, ಸಹಕಾರ, ಸಹಭಾಗಿತ್ವ ಮತ್ತು ಬೆಂಬಲ ಸಿಗುತ್ತದೆಂದು ಭಾವಿಸುತ್ತೇನೆ.

** – ** – **

ಕೋಷ್ಟಕ - 1 : ಪ್ರಮುಖ ಉತ್ಪನ್ನಗಳು ಮತ್ತು ಮಾರುಕಟ್ಟೆ ಪ್ರದೇಶಗಳು

ಕ್ರ. ಸಂ.	ಉತ್ಪನ್ನಗಳು	ಮಾರುಕಟ್ಟೆ ಸಮಿತಿ ಹೆಸರು	ರಾಜ್ಯದಲ್ಲಿ ಉತ್ಪಾದನೆ (ಮೆ.ಟನ್‌ಗಳಲ್ಲಿ)	ಮೊದಲ ಹಂತದಲ್ಲಿ ಯೋಜನೆ ಅನುಷ್ಠಾನ (2012–13)	ಎರಡನೇ ಹಂತದಲ್ಲಿ ಯೋಜನೆ ಅನುಷ್ಠಾನ (2013–14)	ಮೂರನೆ ಹಂತದಲ್ಲಿ ಯೋಜನೆ ಅನುಷ್ಠಾನ (2014–15)
1.	ತೊಗರಿ	ಗುಲಬರ್ಗಾ, ಬೀದರ್, ಯಾದಗೀರ್, ರಾಯಚೂರು, ಸೇಡಂ ತಾಳಿಕೋಟೆ	3.95 ಲಕ್ಷ	80%	85%	90%
2.	ಕೊಬ್ಬರಿ	ತಿಪಟೂರು, ಅರಸೀಕೆರೆ, ಚೆನ್ನರಾಯಪಟ್ಟಣ	4.5 ಲಕ್ಷ	20%	30%	50%
3.	ಅರಿಶಿನ	ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಮಹಾಲಿಂಗಪುರ, ಅಥಣಿ, ಜಮಖಂಡಿ, ಕುಡಚಿ	2.83 ಲಕ್ಷ	20%	30%	40%
4.	ಒಣ ಮೆಣಸಿನಕಾಯಿ	ಬ್ಯಾಡಗಿ, ಗದಗ	1.2 ಲಕ್ಷ	30%	40%	50%
5.	ಒಣದ್ರಾಕ್ಷಿ	ಬಿಜಾಪೂರ, ಬಾಗಲಕೋಟೆ	0.38 ಲಕ್ಷ	25%	40%	50%
6.	ಅಕ್ಕಿ	ಗಂಗಾವತಿ, ಕಾರಟಗಿ, ಸಿಂಧನೂರು, ರಾಯಚೂರು, ಮಂಡ್ಯ, ಟಿ.ನರಸೀಪುರ	22.75 ಲಕ್ಷ	25%	40%	50%
7.	ಅಡಿಕೆ	ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಮಂಗಳೂರು, ಪುತ್ತೂರು, ಶಿರ್ಸಿ	3.2 ಲಕ್ಷ	40%	50%	60%
8.	ಮೆಕ್ಕೆಜೋಳ	ಶಿವಮೊಗ್ಗ, ಶಿಕಾರಿಪುರ, ಚಿತ್ರದುರ್ಗ, ದಾವಣಗೆರೆ, ರಾಣೆಬೆನ್ನೂರು, ಹಾವೇರಿ, ಬಾಗಲಕೋಟ	35.00 ಲಕ್ಷ	20%	25%	30%
9.	ಶೇಂಗಾ	ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಕೊಟ್ಟೂರು, ಬಳ್ಳಾರಿ	4.8 ಲಕ್ಷ	20%	25%	30%
10.	ಹತ್ತಿ	ಬೈಲಹೊಂಗಲ, ಸೌದತ್ತಿ, ರಾಣೆಬೆನ್ನೂರು, ಹಾವೇರಿ, ರಾಯಚೂರು, ಹುಬ್ಬಳ್ಳಿ	11.5 ಲಕ್ಷ	20%	25%	30%
11.	ಸೂರ್ಯಕಾಂತಿ	ಚಿತ್ರದುರ್ಗ, ಗದಗ, ರಾಣೆಬೆನ್ನೂರು, ರಾಯಚೂರು	2.8 ಲಕ್ಷ	15%	20%	25%

ಮಾನ್ಯ ಸಭಾಧ್ಯಕ್ಷರೇ,

1) ಈಗ ನಾನು ನೇರವಾಗಿ ಕೃಷಿಗೆ ಸಂಬಂಧಿಸಿದ ಇತರ ವಲಯಗಳು ಮತ್ತು 2012-13ನೇ ಸಾಲಿನ ತೆರಿಗೆ ಪ್ರಸ್ತಾವನೆಗಳನ್ನೊಳಗೊಂಡ ಭಾಗ-2 ಸಾಮಾನ್ಯ ಆಯವ್ಯಯವನ್ನು ಮಂಡಿಸುತ್ತಿದ್ದೇನೆ.

ಆಡಳಿತಕ್ಕೆ ಹೊಸ ಆಯಾಮ

2) ಅಭಿವೃದ್ಧಿ ನಮ್ಮ ಸರ್ಕಾರದ ಆಡಳಿತ ಮಂತ್ರವಾಗಿದೆ. ನಾನು ಆಗಸ್ಟ್ 4, 2011ರಂದು ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ಕೂಡಲೇ ಕೈಗೊಂಡ ಸಂಕಲ್ಪವೆಂದರೆ ಈಗಾಗಲೇ ನಮ್ಮ ಸರ್ಕಾರ ಮಾಡಿರುವ ಸಾಧನೆಗಳನ್ನು ಸಂಚಯಿಸಿಕೊಂಡು ಆಡಳಿತಕ್ಕೆ ಹೊಸ ಆಯಾಮ ಮತ್ತು ಅಭಿವೃದ್ಧಿಗೆ ಇನ್ನೂ ಹೆಚ್ಚಿನ ವೇಗ ನೀಡಬೇಕು ಎಂಬುದು.

3) ಸರ್ಕಾರಿ ಯೋಜನೆಗಳ ಫಲ ಫಲಾನುಭವಿಗಳಿಗೆ ಸಕಾಲದಲ್ಲಿ ದೊರೆಯಬೇಕು. ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಪ್ರಯೋಜನ ದೊರೆಯಬೇಕು. ಅಭಿವೃದ್ಧಿ ವೇಗ ಹೆಚ್ಚಿಸುವುದರ ಜೊತೆಗೆ ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಸಾಧ್ಯವಾಗಬೇಕು. ಅಭಿವೃದ್ಧಿ ಕೇಂದ್ರಿತ ಆಡಳಿತದ ಜೊತೆಗೆ ಕೆಂಪು ಪಟ್ಟಿಗೆ ಅವಕಾಶವಿಲ್ಲದ ಪಾರದರ್ಶಕ ಆಡಳಿತ ನಮ್ಮ ಗುರಿಯಾಗಿದೆ. ನಮ್ಮ ಈ ಧ್ಯೇಯವನ್ನು ಸಾಕಾರಗೊಳಿಸಲು ಆಡಳಿತ ಶೈಲಿಯಲ್ಲಿ ಬದಲಾವಣೆ ಅನಿವಾರ್ಯ. ಆದ್ದರಿಂದ ಕರ್ನಾಟಕ ನಾಗರಿಕ ಸೇವಾ ಖಾತರಿ ಅಧಿನಿಯಮವನ್ನು ಜಾರಿಗೆ ತರಲಾಗಿದೆ. ಇದರಿಂದ ಸಾರ್ವಜನಿಕರಿಗೆ ಸರ್ಕಾರಿ ಕಚೇರಿಗಳಲ್ಲಿ ಉತ್ತಮ ಸೇವೆ ಮತ್ತು ಸವಲತ್ತುಗಳು ದೊರೆಯಲಿವೆ. ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವ ಸಾರ್ವಜನಿಕರಿಗೆ ಯಾವುದೇ ಸರ್ಕಾರಿ ಅಧಿಕಾರಿ ಅಥವಾ ಸಿಬ್ಬಂದಿ ಇಂದು-ನಾಳೆ ಎನ್ನುವಂತಿಲ್ಲ. ಹೇಳಿದ ಸಮಯಕ್ಕೆ ಸೇವೆ ಮತ್ತು ಸವಲತ್ತುಗಳನ್ನು ಒದಗಿಸುವುದು ಕಡ್ಡಾಯ. ಈ ಬಗ್ಗೆ ಮುಂದಿನ ಭಾಗದಲ್ಲಿ ವಿವರಗಳನ್ನು ನೀಡಲಿದ್ದೇನೆ.

4) ಬದಲಾವಣೆ ನಿರಂತರವಾದ ಪ್ರಕ್ರಿಯೆ. ಪ್ರಗತಿ ಮತ್ತು ಸುಧಾರಣೆಗಾಗಿ ಬದಲಾವಣೆ ಅನಿವಾರ್ಯ. ಆದ್ದರಿಂದ ಆಡಳಿತ ಯಂತ್ರಕ್ಕೆ ಹೊಸ ಆಯಾಮ ನೀಡಿ ಹೊಸ ಹಾದಿಯಲ್ಲಿ ನಡೆಯುವ ಪ್ರಯತ್ನ ಮಾಡಲಾಗಿದೆ.

ಹೊಸ ಹಾದಿಯನು ಹಿಡಿದು ನಡೆಯಣ್ಣ, ಮುಂದೆ !
ಹೊಸ ಜೀವ, ಹೊಸ ಭಾವ, ಹೊಸ ವೇಗದಿಂದೆ.
ಜಗಕೊಂದು ಯುಗಕೊಂದು ಹೊಸ ಹೆಸರು ಬೇಕು ;
ನಗೆಗೊಂದು, ಬಗೆಗೊಂದು, ಹೊಸ ಕುಸುರು ಬೇಕು ;
ಹೊಸತನವೆ ಜೀವನದ ಪ್ರಗತಿಯ ರಹಸ್ಯ ;
ಹೊಸತನವೆ ಮನುಜತೆಯ ಮೈಸಿರಿಯ ಲಾಸ್ಯ !

5) ಖ್ಯಾತ ಕವಿ ಗೋಪಾಲಕೃಷ್ಣ ಅಡಿಗ ಅವರು ತಮ್ಮ ಕವನದಲ್ಲಿ ಹೇಳಿರುವಂತೆ ಹೊಸ ಭಾವ ಮತ್ತು ಹೊಸ ವೇಗದಿಂದ ಆಡಳಿತ ಮತ್ತು ಅಭಿವೃದ್ಧಿ ಸೇರಿ ಎಲ್ಲಾ ಕ್ಷೇತ್ರಗಳಿಗೂ ಹೊಸತನದ ಸ್ಪರ್ಶ ನೀಡುವ ಪ್ರಯತ್ನವನ್ನು ನಮ್ಮ ಸರ್ಕಾರ ಮಾಡುತ್ತಿದೆ.

6) ಸಮತೆ ಮತ್ತು ತಾರತಮ್ಯ ರಹಿತ ಆಡಳಿತ ನಮ್ಮ ಪ್ರಧಾನ ಆದ್ಯತೆ. ರಾಜ್ಯದ ಸಮಸ್ತ ನಾಗರಿಕರು ಒಂದೆಂಬ ಭಾವನೆಯಿಂದ, ಪ್ರಾದೇಶಿಕ ಭಾವನೆ ಮೀರಿ ಎಲ್ಲರಿಗೂ ಒಳಿತನ್ನುಂಟು ಮಾಡಲು ಸರ್ಕಾರ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ.

ಸಮಗ್ರ ಆರ್ಥಿಕ ಪರಿಸ್ಥಿತಿ

7) 2011-12ನೇ ಸಾಲಿನಲ್ಲಿ ಒಟ್ಟಾರೆ ಸಮಗ್ರ ಆರ್ಥಿಕ ಪರಿಸ್ಥಿತಿಯು ಸಂಪೂರ್ಣವಾಗಿ ಅನಿಶ್ಚಿತತೆ ಮತ್ತು ಸವಾಲುಗಳಿಂದ ಕೂಡಿತ್ತು. 2011-12ರ ಆಯವ್ಯಯ ಮಂಡನೆಯ ಸಮಯದಲ್ಲಿ ರಾಷ್ಟ್ರದ ಆರ್ಥಿಕತೆಯಲ್ಲಿನ ದೃಢವಾದ ಬೆಳವಣಿಗೆಗೆ ಸಂಬಂಧಿಸಿದಂತೆ ಹೊಂದಿದ್ದ ಆಶಾಭಾವನೆಯು ಸಾಕಾರಗೊಳ್ಳಲಿಲ್ಲ. ಆ ಹಂತದಲ್ಲಿ ಜಾಗತಿಕ ಅರ್ಥ ವ್ಯವಸ್ಥೆಯ ಚೇತರಿಕೆಯನ್ನು ನಿರೀಕ್ಷಿಸಲಾಗಿತ್ತು. ಮತ್ತು ರಾಷ್ಟ್ರದ ಆರ್ಥಿಕ ವ್ಯವಸ್ಥೆಯೂ ಸಹ ಹಿಂದಿನ ಅಭಿವೃದ್ಧಿ ಪಥಕ್ಕೆ ಹಿಂದಿರುಗುತ್ತದೆ ಎಂದು ಆಶಿಸಲಾಗಿತ್ತು. ಕೈಗಾರಿಕಾ ವಲಯದಲ್ಲಿ ಮತ್ತೊಮ್ಮೆ ಗತಿವೃದ್ಧಿ ಕಂಡು ಬರುತ್ತಿತ್ತು. ಹಣದುಬ್ಬರ ಹೊರತುಪಡಿಸಿ ಬೇರೆ ಯಾವ ಚಿಂತೆಯ ಪರಿಸ್ಥಿತಿ ಇರಲಿಲ್ಲ.

8) ಆದರೆ, ರಾಷ್ಟ್ರದಲ್ಲಿ ಆರ್ಥಿಕ ಪರಿಸ್ಥಿತಿಯು ನಿರೀಕ್ಷೆಗೆ ವ್ಯತಿರಿಕ್ತವಾಗಿ ಘಟಿಸಿ ಅಭಿವೃದ್ಧಿಯಲ್ಲಿ ಇಳಿಕೆ ತಂದಿದೆ. ದೇಶದ ಅರ್ಥ ವ್ಯವಸ್ಥೆಯು ಶೇಕಡ 7 ರಷ್ಟು ಬೆಳವಣಿಗೆಯನ್ನು ಸಾಧಿಸುವುದೆಂದು

ನಿರೀಕ್ಷಿಸಲಾಗಿದ್ದು, ಇದು ಶೇಕಡ 8 ರಿಂದ 8.5 ರ ಸಾಮರ್ಥ್ಯಕ್ಕಿಂತ ತುಂಬಾ ಕಡಿಮೆಯಾಗಿದೆ. ಬಿಗಿಯಾಗಿರುವ ಆರ್ಥಿಕ ನೀತಿಯಲ್ಲಿ ಸ್ವಲ್ಪ ಮಟ್ಟಿಗೆ ಸಡಿಲಿಕೆಯಾಗುವ ಸಾಧ್ಯತೆಯಿದ್ದರೂ ಬಂಡವಾಳದ ವಾತಾವರಣದಲ್ಲಿ ಚೇತರಿಕೆಯಾಗುವುದಕ್ಕೆ ಇನ್ನೂ ಸ್ವಲ್ಪ ಸಮಯ ಬೇಕಾಗುವುದು.

9) ಬಂಡವಾಳ ಹೂಡಿಕೆಯ ಮಾರುಕಟ್ಟೆಯಲ್ಲಿ ಪುನಃಶ್ಚೇತನವಾಗ ಬೇಕಾದಲ್ಲಿ ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರ್ಕಾರದ ಸಬಲವಾದ ಮತ್ತು ಸಮನ್ವಯಯುತ ನೀತಿ ಉಪಕ್ರಮಗಳ ಅಗತ್ಯತೆ ಇದೆ. ಕೇಂದ್ರ ಸರ್ಕಾರವು ಅರ್ಥ ವ್ಯವಸ್ಥೆಯನ್ನು ಹಿಂದಿನ ಉತ್ತಮ ಬೆಳವಣಿಗೆ ಸಾಮರ್ಥ್ಯದ ಮಟ್ಟಕ್ಕೆ ತರಲು ಅಗತ್ಯವಾದ ಕಠಿಣವಾದ ನೀತಿ ಉಪಕ್ರಮಗಳನ್ನು ಕೈಗೊಳ್ಳುವುದೆಂದು ರಾಜ್ಯ ಸರ್ಕಾರವು ನಿರೀಕ್ಷಿಸಿತ್ತು. ಆದರೆ, ಕೇಂದ್ರ ಆಯವ್ಯಯದಲ್ಲಿ ಬಂಡವಾಳವನ್ನು ಉತ್ತೇಜಿಸಲು ಹೆಚ್ಚೇನೂ ಇಲ್ಲ.

10) ರಾಜ್ಯ ಮಟ್ಟದಲ್ಲಿ ಬಂಡವಾಳವನ್ನು ಹೆಚ್ಚಿಸುವುದಕ್ಕೆ ಆರ್ಥಿಕ ಸಂಪನ್ಮೂಲದ ಮಿತಿಯೊಳಗೆ ಈ ಆಯವ್ಯಯದ ಮೂಲಕ ಮೂಲಭೂತ ಸೌಕರ್ಯ ಬಂಡವಾಳದ ಮೇಲೆ ಹೆಚ್ಚಿನ ಒತ್ತನ್ನು ರಾಜ್ಯ ಸರ್ಕಾರವು ನೀಡಿದೆ.

ರಾಜ್ಯದ ಅರ್ಥ ವ್ಯವಸ್ಥೆ

11) 2011-12ನೇ ವರ್ಷವು ರಾಜ್ಯದ ಆರ್ಥಿಕತೆಗೂ ಸಹ ಸಂಕಷ್ಟದ ವರ್ಷವಾಗಿದೆ. ಅಧಿಕ ಹಣದುಬ್ಬರ, ಬಿಗಿ ಹಣಕಾಸು ನೀತಿ, ರಾಜ್ಯದ ಆಂತರಿಕ ಉತ್ಪನ್ನ ಪ್ರಮಾಣಕ್ಕನುಗುಣವಾಗಿ ನಿಗದಿತ ಬಂಡವಾಳ ಸೃಜನೆಯಲ್ಲಿ ಸಂಕೋಚನ, ರಾಷ್ಟ್ರೀಯ ಮಟ್ಟದಲ್ಲಿ ಕಂಡುಬಂದ ತೀವ್ರ ಆರ್ಥಿಕ ಹಿಂಜರಿತದ ಜೊತೆಗೆ ಕರ್ನಾಟಕ ಆರ್ಥಿಕತೆಯು ಹೆಚ್ಚಿನ ಪ್ರದೇಶ ಗಳಲ್ಲಿ ಬರಗಾಲ ಮತ್ತು ಗಣಿಗಾರಿಕೆ ನಿಷೇಧದ ಪರಿಸ್ಥಿತಿಯನ್ನು ಎದುರಿಸ ಬೇಕಾಯಿತು.

12) ತೀವ್ರ ಬರಗಾಲ ತಲೆದೋರಿದ ಪರಿಣಾಮದಿಂದಾಗಿ, ಕೃಷಿ ವಲಯವು ಹಿಂದಿನ ವರ್ಷದಲ್ಲಿ ಕಂಡುಬಂದಂಥ ಶೇಕಡ 13.3 ರಷ್ಟರ ತುಂಬಾ ದೃಢ ಬೆಳವಣಿಗೆಗೆ ಹೋಲಿಸಿದಲ್ಲಿ 2011-12ನೇ ಸಾಲಿನಲ್ಲಿ ಶೇಕಡ 2.9 ರಷ್ಟು ಕುಗ್ಗುವುದೆಂದು ಅಂದಾಜು ಮಾಡಲಾಗಿದೆ. ಗಣಿಗಾರಿಕೆ ವಲಯದ ಬೆಳವಣಿಗೆಯೂ ಸಹ ಶೇಕಡ 1.6 ರಷ್ಟಕ್ಕೆ ಮಿತಿಗೊಳ್ಳುವುದೆಂದು

ನಿರೀಕ್ಷಿಸಲಾಗಿದೆ. ಬೆಂಗಳೂರು ಆರ್ಥಿಕತೆಯ ಸದೃಢ ಭಾಗವಾದ ಸೇವೆಗಳ ವಲಯವು 10.6 ಬೆಳವಣಿಗೆಯೊಂದಿಗೆ ಅತ್ಯುತ್ತಮ ಸಾಧನೆಗೈದಿದೆ. ರಾಜ್ಯದ ಆರ್ಥಿಕತೆಯು 2011–12ನೇ ಸಾಲಿನಲ್ಲಿ ಬರಗಾಲ ಮತ್ತು ಗಣಿಗಾರಿಕೆ ನಿಷೇಧದ ಪರಿಸ್ಥಿತಿ ಇದ್ದಾಗ್ಯೂ ವಾಸ್ತವಿಕವಾಗಿ ಒಟ್ಟಾರೆ ಶೇಕಡ 6.4 ಬೆಳವಣಿಗೆ ಕಾಣಬಹುದೆಂದು ನಿರೀಕ್ಷಿಸಲಾಗಿದೆ.

13) ಪ್ರಸಕ್ತ ಬೆಲೆಗಳಲ್ಲಿ ಒಟ್ಟು ರಾಜ್ಯದ ಆಂತರಿಕ ಉತ್ಪನ್ನವು 2011–12ನೇ ಸಾಲಿನಲ್ಲಿ ಶೇಕಡ 14.9 ರಷ್ಟು ಬೆಳವಣಿಗೆ ಸಾಧಿಸಬಹುದೆಂದು ಮತ್ತು 4,65,551 ಕೋಟಿ ರೂ. ತಲುಪಬಹುದೆಂದು ನಿರೀಕ್ಷಿಸಲಾಗಿದೆ. ಕೃಷಿ, ಕೈಗಾರಿಕೆ ಮತ್ತು ಸೇವೆಗಳ ಪ್ರಸ್ತುತ ಬೆಳವಣಿಗೆಗಳು ಕ್ರಮವಾಗಿ ಶೇಕಡ 9.1, ಶೇಕಡ 11.5 ಮತ್ತು ಶೇಕಡ 18.5 ಆಗಲಿದೆ. ವಾಸ್ತವವಾಗಿ, ಇವುಗಳು ಋಣಾತ್ಮಕ ಶೇಕಡ 2.9, ಶೇಕಡ 3.6 ಮತ್ತು ಶೇಕಡ 10.6 ಆಗಲಿದ್ದು ಒಟ್ಟಾರೆ ಬೆಳವಣಿಗೆಯು ಶೇಕಡ 6.4 ರಷ್ಟಾಗುವ ಸಂಭವವಿದೆ.

14) ಹೂಡಿಕೆ ಪರಿಸ್ಥಿತಿಯು ಶೀಘ್ರದಲ್ಲಿ ಮತ್ತೆ ಉತ್ತಮಗೊಳ್ಳದಿದ್ದರೆ, ಮುಂದುವರಿಯುತ್ತಿರುವ ಆರ್ಥಿಕ ಹಿಂಜರಿತವು ವರ್ಷದ ಅವಧಿಯಲ್ಲಿ ರಾಜ್ಯದ ಸ್ವಂತ ರಾಜಸ್ವದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಬಹುದು.

ಸೇವೆಗಳ ಖಾತರಿ

15) ಹಿಂದಿನ ಅಧಿವೇಶನದಲ್ಲಿ ಗೌರವಾನ್ವಿತ ಸದನವು ಅನುಮೋದಿಸಿದ ಕರ್ನಾಟಕ ನಾಗರಿಕ ಸೇವೆಗಳ ಖಾತರಿ ಅಧಿನಿಯಮ 2011, ನಾಗರಿಕರಿಗೆ ಮೂಲಭೂತ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ದಕ್ಷತೆ, ಪಾರದರ್ಶಕತೆ, ಕಾಲಬದ್ಧತೆ ಮತ್ತು ಜವಾಬ್ದಾರಿಯನ್ನು ಖಚಿತಪಡಿಸುವ ನಮ್ಮ ದೃಢ ಬದ್ಧತೆಯನ್ನು ಸೂಚಿಸುತ್ತದೆ. ಈ ಅಧಿನಿಯಮದ ಸಧ್ಯದ ವ್ಯಾಪ್ತಿಯಲ್ಲಿ 11 ಇಲಾಖೆಗಳ 151 ಸೇವೆಗಳು ಬರುತ್ತವೆ. ಇದರ ಅನುಷ್ಠಾನ ವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಚೇರಿಯ ಜೊತೆಗೆ ಪ್ರತಿ ರಾಜಸ್ವ ವಿಭಾಗಕ್ಕೊಂದರಂತೆ 4 ತಾಲ್ಲೂಕುಗಳಲ್ಲಿ ಪ್ರಯೋಗಾರ್ಥವಾಗಿ ಪ್ರಾರಂಭಿಸಲಾಗಿದೆ. ವಾಣಿಜ್ಯ ತೆರಿಗೆ ಇಲಾಖೆಯು, ಪ್ರಾರಂಭದಿಂದಲೇ ರಾಜ್ಯದಾದ್ಯಂತ ಇದರ ಅನುಷ್ಠಾನ ಕ್ರಮವನ್ನು ಕೈಗೆತ್ತಿಕೊಂಡಿದೆ. ಈವರೆಗೆ ಸುಮಾರು 87,000 ಸೇವಾ ಕೋರಿಕೆಗಳನ್ನು ಸ್ವೀಕರಿಸಲಾಗಿದ್ದು, ಅವುಗಳಲ್ಲಿ

(ಶೇಕಡ 80 ರಷ್ಟು) ಕೋರಿಕೆಗಳನ್ನು ಈಗಾಗಲೇ ನಿಗದಿಪಡಿಸಿದ ಅವಧಿಗಿಂತ ಬಹುಮುಂಚೆಯೇ ವಿಲೆ ಮಾಡಲಾಗಿದೆ. ರಾಜ್ಯದಾದ್ಯಂತ ಮತ್ತು ಎಲ್ಲ 11 ಇಲಾಖೆಗಳಲ್ಲಿ, ಈ ಅಧಿನಿಯಮವು ಉತ್ತಮ ಆಡಳಿತದ ಹೊಸ ಸಂಸ್ಕೃತಿ ಶುಭೋದಯವಾಗಿ 2012 ಏಪ್ರಿಲ್ 2 ರಿಂದ ಅನುಷ್ಠಾನಕ್ಕೆ ಬರುತ್ತದೆಂದು ಘೋಷಿಸಲಾಗುವುದು.

2011–12ನೇ ಸಾಲಿನ ಯೋಜನಾ ನಿರ್ವಹಣೆ

16) 2011–12ನೇ ಸಾಲಿನ ರಾಜ್ಯ ಯೋಜನಾ ಗಾತ್ರ 38070 ಕೋಟಿ ರೂ. ಆಗಿತ್ತು. ವರ್ಷದ ಅವಧಿಯಲ್ಲಿ, ಕೆಲವು ವಲಯಗಳಿಂದ ಹೆಚ್ಚುವರಿ ಸಂಪನ್ಮೂಲಗಳಿಗೆ ಬೇಡಿಕೆ ಬಂದಿದ್ದರೆ, ಇತರ ವಲಯಗಳು ನಿಧಾನಗತಿಯ ಅನುಷ್ಠಾನದ ಕಾರಣದಿಂದಾಗಿ ಸಂಭಾವ್ಯ ಉಳಿತಾಯಗಳನ್ನು ಮಾಡಿವೆ. ಈ ಗೌರವಾನ್ವಿತ ಸದನವು ಮೊದಲ ಎರಡು ಪೂರಕ ಅಂದಾಜು ಗಳಲ್ಲಿ 4944 ಕೋಟಿ ರೂ.ಗಳ ಹೆಚ್ಚುವರಿ ಯೋಜನಾ ಹಣಕಾಸು ನೆರವಿಗೆ ಅನುಮೋದನೆ ನೀಡಿತ್ತು. ಸರ್ಕಾರವು 2327 ಕೋಟಿ ರೂಪಾಯಿಗಳ ಯೋಜನಾ ಹಣಕಾಸು ನೆರವನ್ನು ಒಳಗೊಂಡ ಪೂರಕ ಅಂದಾಜುಗಳ ಮೂರನೆಯ ಮತ್ತು ಕೊನೆಯ ಕಂತಿಗೆ ಅನುಮೋದನೆಯನ್ನು ಕೋರುತ್ತಿದೆ. ಉತ್ತಮ ತೆರಿಗೆ ಪ್ರಯತ್ನಗಳು ಮತ್ತು ಕೆಲವು ಯೋಜನೆಗಳಡಿ ಮಾಡಲಾದ ಉಳಿತಾಯಗಳ ಮೂಲಕ ವರ್ಷಾವಧಿಯಲ್ಲಿ ಸಂಗ್ರಹಿಸಲಾದ ಹೆಚ್ಚುವರಿ ಸಂಪನ್ಮೂಲಗಳಿಂದ ಈ ಹೆಚ್ಚುವರಿ ಅಗತ್ಯತೆಗಳನ್ನು ಭರಿಸಲಾಗಿದೆ.

17) ರಾಜ್ಯ ಆಯವ್ಯಯದಿಂದ ಫೆಬ್ರವರಿ 2012 ರವರೆಗೆ ಮಾಡಲಾದ ಯೋಜನಾ ವೆಚ್ಚವು, 2010–11ನೇ ಸಾಲಿನಲ್ಲಿ ಇದೇ ಅವಧಿಗೆ ಮಾಡಿದ್ದ ವೆಚ್ಚಕ್ಕಿಂತ ಶೇಕಡ 20 ರಷ್ಟು ಅಧಿಕವಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಸರ್ಕಾರವು ರಾಜ್ಯ ಯೋಜನಾ ಗಾತ್ರವನ್ನು ಸಂಪೂರ್ಣ ವಾಗಿ ಸಾಧಿಸುವ ನಿರೀಕ್ಷೆಹೊಂದಿದ್ದು, ಇದು 2010–11ನೇ ಸಾಲಿನಲ್ಲಿ ಮಾಡಿದ 31154 ಕೋಟಿ ರೂಪಾಯಿಗಳ ಸಾಧನೆಗಿಂತ ಶೇಕಡ 22 ರಷ್ಟು ಅಧಿಕವಾಗಲಿದೆ.

12ನೇ ಪಂಚವಾರ್ಷಿಕ ಯೋಜನೆ

18) 2012ರ ಏಪ್ರಿಲ್‌ನಿಂದ ಪ್ರಾರಂಭವಾಗಲಿರುವ 12ನೇ ಪಂಚವಾರ್ಷಿಕ ಯೋಜನೆಯು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಕರ್ನಾಟಕದ ಅಭಿವೃದ್ಧಿ ಕಾರ್ಯಸೂಚಿಯ ಸಮಗ್ರ ರೇಖೆಯನ್ನು ರೂಪಿಸುತ್ತದೆ ಎಂದು ನಿರೀಕ್ಷಿಸಲಾಗಿದೆ. ಇದರಲ್ಲಿ ತ್ವರಿತ, ಹೆಚ್ಚು ವ್ಯಾಪಕ ಮತ್ತು ಪರಿಸರ ದೃಷ್ಟಿಯಿಂದ ಸುಸ್ಥಿರವಾದ ಬೆಳವಣಿಗೆಗಾಗಿನ ಧ್ಯೇಯೋದ್ದೇಶಗಳು ಮತ್ತು ಸವಾಲುಗಳ ಕುರಿತ ವಿಸ್ತೃತ ರಾಷ್ಟ್ರೀಯ ಒಮ್ಮತವನ್ನು ಪ್ರತಿಬಿಂಬಿಸಬೇಕಾಗಿದೆ. ರಾಜ್ಯ ಯೋಜನಾ ಮಂಡಳಿಯು 12ನೇ ಯೋಜನೆಗೆ ವಿಷಯ ಮಾಹಿತಿಗಳನ್ನು ಒದಗಿಸಲು ಸರ್ಕಾರದ ಮತ್ತು ಸರ್ಕಾರೇತರ ತಜ್ಞರುಗಳನ್ನು ಒಳಗೊಂಡ 16 ಕಾರ್ಯನಿರತ ತಂಡಗಳ ಮುಖಾಂತರ ಪ್ರಮುಖ ವಲಯಗಳಾಗಿ ವಿವರವಾದ ವರದಿಗಳನ್ನು ಸಿದ್ಧಪಡಿಸುತ್ತಿದೆ.

19) 11ನೇ ಯೋಜನೆಯಲ್ಲಿ ಐದು ವಲಯಗಳ ಅಂದರೆ, ನೀರಾವರಿ, ಸಾರಿಗೆ, ವಿದ್ಯುತ್, ನಗರಾಭಿವೃದ್ಧಿ ಮತ್ತು ಶಿಕ್ಷಣದ ಮೇಲೆ ಬಂಡವಾಳ ಹೂಡಿಕೆಯ ಕೇಂದ್ರೀಕರಣವನ್ನು ಮಾಡಲಾಗಿದ್ದು, ಇದು ಒಟ್ಟಾರೆ ರಾಜ್ಯ ಯೋಜನಾ ವೆಚ್ಚದ ಶೇಕಡ 59 ರಷ್ಟು ಆಗಿತ್ತು. ಕಾರ್ಯನಿರತ ತಂಡಗಳ ಶಿಫಾರಸ್ಸುಗಳು ಮತ್ತು ಭಾಗಿದಾರರೊಂದಿಗೆ ನಡೆಸಿದ ಸಮಾಲೋಚನೆಗಳನ್ನು ಪರಿಶೀಲಿಸಿದ ನಂತರ 12ನೇ ಯೋಜನೆಯ ಆದ್ಯತೆಗಳನ್ನು ಅಂತಿಮಗೊಳಿಸಲಾಗುವುದು.

20) 2008–09 ಮತ್ತು 2009–10ನೇ ಸಾಲುಗಳಲ್ಲಿ ಆರ್ಥಿಕ ಹಿಂಜರಿತದ ಪ್ರತಿಕೂಲ ಪರಿಣಾಮವಿದ್ದರೂ, 2012ರ ಮಾರ್ಚ್‌ನಲ್ಲಿ ಮುಕ್ತಾಯಗೊಂಡ 11ನೇ ಯೋಜನೆಗೆ ಅನುಮೋದಿಸಲಾಗಿದ್ದ 101664 ಕೋಟಿ ರೂ.ಗಳ ವೆಚ್ಚಕ್ಕೆ ಹೋಲಿಸಿದರೆ 114152 ಕೋಟಿ ರೂಪಾಯಿಗಳ ಸಂಭಾವ್ಯ ಸಾಧನೆಯ ಶೇಕಡ 112 ರಷ್ಟು ಆಗಿರುವುದೆಂದು ಅಂದಾಜಿಸಲಾಗಿದೆ. ಈ ಸಾಧನೆಯೊಂದಿಗೆ, ಕರ್ನಾಟಕವು ಅತ್ಯಧಿಕ ತಲಾವಾರು ಯೋಜನಾ ವೆಚ್ಚ ನಿರ್ವಹಣೆ ಮಾಡಿದ ರಾಜ್ಯಗಳಲ್ಲಿ ಒಂದಾಗಿದೆ.

21) 2012–13ನೇ ಸಾಲಿನಿಂದ ಪ್ರಾರಂಭವಾಗುವ 12ನೇ ಯೋಜನೆಗೆ 2011–12ರ ಬೆಲೆಗಳಲ್ಲಿ 195816 ಕೋಟಿ ರೂ.ಗಳ ಅಂದಾಜು ಸಂಪನ್ಮೂಲಗಳನ್ನು ಕಲ್ಪಿಸಲಾಗಿದೆ. 11ನೇ ಯೋಜನೆಯ ಸಾಧನೆಗೆ

ಹೋಲಿಸಿದರೆ 12ನೇ ಪಂಚವಾರ್ಷಿಕ ಯೋಜನೆಯ ವೆಚ್ಚವು 2006–07ರ ಬೆಲೆಗಳಲ್ಲಿ ಶೇಕಡ 33 ಕ್ಕಿಂತ ಅಧಿಕವಾಗಲಿದೆಯೆಂದು ನಿರೀಕ್ಷಿಸಲಾಗಿದೆ.

2012–13ನೇ ಸಾಲಿನ ಆಯವ್ಯಯದ ಆದ್ಯತೆ

22) ನನ್ನ ಆದ್ಯತೆಗಳೇನು ಮತ್ತು ಅವುಗಳನ್ನು ಸಾಧಿಸಲು ನಾನು ಹೇಗೆ ಪ್ರಯತ್ನಿಸಬೇಕು?

23) ಅಭಿವೃದ್ಧಿ ಮೂಲಕ ಮಾತ್ರವೇ ನಾವು ತಲಾ ಆದಾಯದಲ್ಲಿ ಹೆಚ್ಚಳವನ್ನು ಸಾಧಿಸಬಹುದು.

24) ಕೇಂದ್ರ ಆಯವ್ಯಯದಲ್ಲಿ ಪ್ರತಿಫಲಿತವಾದ ರಾಷ್ಟ್ರೀಯ ಚಿತ್ರಣವು ಪ್ರೋತ್ಸಾಹದಾಯಕವಾಗಿಲ್ಲ. 2011–12ರ ಅವಧಿಯಲ್ಲಿ ಶೇಕಡ 6.9 ರಷ್ಟಿದ್ದ ವೃದ್ಧಿದರ 2012–13ನೇ ಸಾಲಿನಲ್ಲಿ ಶೇಕಡ 8.5 ರಷ್ಟು ಸಾಮರ್ಥ್ಯದ ಬದಲಾಗಿ ಶೇಕಡ 7.6 ರಷ್ಟಕ್ಕೆ ಏರಿಕೆಯಾಗುತ್ತದೆ. ನಾನು ಕೃಷಿ ಮತ್ತು ತತ್ಸಂಬಂಧ ಕಾರ್ಯಚಟುವಟಿಕೆಗಳ ಬಗ್ಗೆ ನನ್ನ ಆದ್ಯತೆಗಳ ಹಾಗೂ ಕಾರ್ಯತಂತ್ರಗಳ ಬಗ್ಗೆ ಈಗಾಗಲೇ ತಿಳಿಸಿದ್ದೇನೆ.

25) ಜಾಗತಿಕ ಮತ್ತು ರಾಷ್ಟ್ರೀಯ ಸವಾಲುಗಳೇನೇ ಇದ್ದರೂ, ಈ ಆಯವ್ಯಯದ ಮೂಲಕ ಉತ್ತಮ ಅಭಿವೃದ್ಧಿಯನ್ನು ಸಾಧಿಸುವುದಲ್ಲದೇ ಸಮಗ್ರ ವೃದ್ಧಿಯನ್ನು ಸಹ ಸಾಧಿಸಲು ಉದ್ದೇಶಿಸಿದ್ದೇನೆ. ಇದನ್ನು ನಾವು ವಿವಿಧ ಉಪಕ್ರಮಗಳ ಮೂಲಕ ಸಾಧಿಸುತ್ತೇವೆ. ಈ ಪ್ರಸ್ತಾವನೆಗಳಲ್ಲಿ ಶಿಕ್ಷಣ, ಆರೋಗ್ಯ, ಕುಡಿಯುವ ನೀರಿನ ಪೂರೈಕೆ ಮತ್ತು ಸಮಾಜ ಕಲ್ಯಾಣ ವಲಯಗಳಲ್ಲಿ ಬಂಡವಾಳವನ್ನು ಹೂಡುವ ಮೂಲಕ ಮಾನವ ಸಂಪನ್ಮೂಲಗಳನ್ನು ಬಲಪಡಿಸುವುದೂ ಸೇರಿದೆ. ಅಲ್ಲದೆ, ಇಂಧನ, ರಸ್ತೆಗಳು, ಬಂದರುಗಳು, ವಸತಿ, ಕೌಶಲ್ಯ ಅಭಿವೃದ್ಧಿ, ವ್ಯಾಪಾರ ಮತ್ತು ಕೈಗಾರಿಕಾ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಮೂಲಸೌಕರ್ಯ ಹೂಡಿಕೆಗಳನ್ನು ಮಾಡುವ ಮೂಲಕ ಭೌತಿಕ ಬಂಡವಳವನ್ನೂ ಸಹ ಬಲಪಡಿಸುತ್ತೇವೆ. ಇದರೊಂದಿಗೆ, ದುರ್ಬಲ ವರ್ಗಗಳ ಸಾಮಾಜಿಕ ರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅವರನ್ನು ಒಳಗೊಳ್ಳುವಂತೆ ಮಾಡುತ್ತೇವೆ. ನಮ್ಮ ಸರ್ಕಾರಿ ವ್ಯವಸ್ಥೆಯನ್ನು ನಾಗರಿಕ ಸ್ನೇಹಿ, ತ್ವರಿತ ಮತ್ತು ಹೊಣೆಯಾಗಿರುವಂತೆ ಬಲಪಡಿಸುವುದು ಅಗತ್ಯ. ಇದನ್ನು ಸರ್ಕಾರಿ ಸಿಬ್ಬಂದಿಯ ಸಾಮರ್ಥ್ಯ

ವರ್ಧನೆಯ ಮೂಲಕ ಹಾಗೂ ಮಾಹಿತಿ ತಂತ್ರಜ್ಞಾನವನ್ನು ಬಳಸುವ ಮೂಲಕ ಮಾಡಲಾಗುವುದು.

26) ಸರ್ಕಾರವು ನಿರ್ವಹಿಸಬೇಕಾದ ಬೃಹತ್ ಕೆಲಸ-ಕಾರ್ಯಗಳನ್ನು ಆಯವ್ಯಯದ ಮಿತಿಯಲ್ಲಿ ಮಾಡಲು ಸಾಧ್ಯವಿಲ್ಲ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ರೂಪದಲ್ಲಿ ಬಂಡವಾಳದ ಅನುಕೂಲವನ್ನು ಪಡೆಯುವುದು ಸಹ ಅಗತ್ಯವಿದೆ. ಈ ರೀತಿಯ ಹೂಡಿಕೆಗಳಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ನಾವು ಸಾಧಿಸಿದ್ದೇವೆ. ಕರ್ನಾಟಕವು ವಾಣಿಜ್ಯ ಬ್ಯಾಂಕ್‌ಗಳ ಮತ್ತು ಅದರ ಶಾಖೆಗಳ ಬೃಹತ್ ಜಾಲವನ್ನು ಹೊಂದಿದೆ. ನಾವು, ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿ ವೇದಿಕೆಯ (ಎಸ್‌ಎಲ್‌ಬಿಸಿ) ಮೂಲಕ ಬ್ಯಾಂಕಿಂಗ್ ವಲಯವನ್ನು ನಿರಂತರವಾಗಿ ಪರಿಶೀಲನೆ ಮತ್ತು ಮೇಲ್ವಿಚಾರಣೆಗೆ ಒಳಪಡಿಸುವ ಮೂಲಕ ವಾಣಿಜ್ಯ ಬ್ಯಾಂಕಿಂಗ್ ಸಂಪರ್ಕವನ್ನು ಬಳಸಿಕೊಳ್ಳಲು ಬಯಸುತ್ತೇವೆ. ಜೊತೆಗೆ ಹಿಂದಿನಂತೆ ಬಹುಪಕ್ಷೀಯ ಹಣಕಾಸು ಸಂಸ್ಥೆಗಳ ಮೂಲಕ ಕಡಿಮೆ ದರದ ಸಾಲವನ್ನು ಪಡೆಯಲಾಗುವುದು.

ಆಯವ್ಯಯದ ಗಾತ್ರ ಮತ್ತು ರಾಜ್ಯ ಯೋಜನೆ 2012-13

27) ಈ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ನಿಯಂತ್ರಕ ಚಟುವಟಿಕೆಗಳಿಗಾಗಿ ಒಟ್ಟಾರೆ 102742 ಕೋಟಿ ರೂ.ಗಳ ವೆಚ್ಚದ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಇದು 2011-12ನೇ ಸಾಲಿನ ಆಯವ್ಯಯದಲ್ಲಿ ಇರುವ 85319 ಕೋಟಿ ರೂ. ಮೇಲೆ ಶೇಕಡ 20.42 ಹೆಚ್ಚಳ ಹೊಂದಿದೆ. ಪ್ರಪ್ರಥಮ ಬಾರಿಗೆ ಆಯವ್ಯಯದ ಗಾತ್ರವು 1 ಲಕ್ಷ ಕೋಟಿ ರೂ.ಗಳನ್ನು ಮೀರಿದೆ. ರಾಜ್ಯ ಸರ್ಕಾರವು ಈ ಬೃಹತ್ ಮೊತ್ತವನ್ನು ರಾಜ್ಯದ ಮತ್ತು ರಾಜ್ಯದ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಉಪಯೋಗಿಸಲು ಬದ್ಧವಾಗಿದೆ.

28) ಅನುಬಂಧ-1 ರಲ್ಲಿ ಪ್ರಮುಖ ವಲಯವಾರು ಅನುದಾನವನ್ನು ತೋರಿಸಲಾಗಿದೆ.

29) 2012-13ನೇ ಸಾಲಿನಲ್ಲಿ ರಾಜ್ಯದ ಯೋಜನಾ ಗಾತ್ರವನ್ನು 42030 ರೂ.ಗಳಿಗೆ ನಿಗದಿಪಡಿಸಲಾಗಿದ್ದು, ಇದು ಕಳೆದ ಸಾಲಿನ ಗಾತ್ರಕ್ಕೆ ಹೋಲಿಸಿದಲ್ಲಿ ಶೇಕಡ 10.4 ರಷ್ಟು ದೊಡ್ಡದಿದೆ.

ಇಂಧನ

30) ಸಮಗ್ರ ಆರ್ಥಿಕ ಬೆಳವಣಿಗೆಗೆ ಅನುವು ಮಾಡಿಕೊಡುವ ಸಲುವಾಗಿ ಕೈಗೆಟುಕುವ ಬೆಲೆಗಳಲ್ಲಿ ಸಮರ್ಪಕ ವಿದ್ಯುಚ್ಛಕ್ತಿ ಪೂರೈಕೆಯನ್ನು ಖಚಿತಪಡಿಸುವುದು ರಾಜ್ಯ ಸರ್ಕಾರ ಎದುರಿಸುತ್ತಿರುವ ಒಂದು ಪ್ರಮುಖ ಸವಾಲಾಗಿದೆ. ವಿದ್ಯುಚ್ಛಕ್ತಿಯ ಬಳಕೆಯು ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಗಣನೀಯವಾಗಿ ಹೆಚ್ಚುತ್ತಿದ್ದು, ಇದು ವಿದ್ಯುಚ್ಛಕ್ತಿಯ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರದ ಮೇಲೆ ಒತ್ತಡ ಹೇರುತ್ತಿದೆ.

31) ಕಳೆದ ವರ್ಷವಿದ್ದ 7815 ಮೆ.ವ್ಯಾ. ಅತ್ಯಧಿಕ ಗರಿಷ್ಠ ವಿದ್ಯುಚ್ಛಕ್ತಿ ಬೇಡಿಕೆಗೆ (ಪೀಕ್ ಡಿಮ್ಯಾಂಡ್) ಹೋಲಿಸಿದರೆ, ಈ ವರ್ಷದಲ್ಲಿ ಗರಿಷ್ಠ ವಿದ್ಯುಚ್ಛಕ್ತಿ ಬೇಡಿಕೆಯು ಈಗಾಗಲೇ 8506 ಮೆ.ವ್ಯಾ. ತಲುಪಿದೆ. ಹಾಗೆಯೇ ಕಳೆದ ಸಾಲಿನಲ್ಲಿ ದಾಖಲಾಗಿದ್ದ, ಒಂದು ದಿನದಲ್ಲಿ ಅತ್ಯಧಿಕ ಬಳಕೆಯ ಪ್ರಮಾಣ 172 ದಶಲಕ್ಷ ಯೂನಿಟ್‌ಗೆ ಹೋಲಿಸಿದಲ್ಲಿ ಪ್ರಸಕ್ತ ಸಾಲಿನಲ್ಲಿ 181 ದಶಲಕ್ಷ ಯೂನಿಟ್ ತಲುಪಿದೆ.

32) ವಿದ್ಯುಚ್ಛಕ್ತಿ ಸಂಸ್ಥೆಗಳು, ಬೇಡಿಕೆಯಲ್ಲಿನ ಹೆಚ್ಚಳವನ್ನು ನಿಭಾಯಿಸಲು ದಿನವಿಡೀ ವಿದ್ಯುತ್ ಪೂರೈಕೆಗಾಗಿ 780 ಮೆ.ವ್ಯಾ. ಮತ್ತು ಗರಿಷ್ಠ ಬಳಕೆಯ ವಿದ್ಯುತ್ ಪೂರೈಕೆಗಾಗಿ 300 ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ಖರೀದಿಸಲು ಖರೀದಿ ಆದೇಶಗಳನ್ನು ಮಾಡಿವೆ. ಜೊತೆಗೆ, ರಾಜ್ಯ ಸರ್ಕಾರವು ಇನ್ನೂ 400 ಮೆ.ವ್ಯಾ. ವಿದ್ಯುಚ್ಛಕ್ತಿಯನ್ನು ರಾಜ್ಯ ಗ್ರಿಡ್‌ಗೆ ಪೂರೈಸಲು ರಾಜ್ಯದಲ್ಲಿನ ಎಲ್ಲಾ ವಿದ್ಯುಚ್ಛಕ್ತಿ ಉತ್ಪಾದಕರಿಗೆ ನಿರ್ದೇಶನ ನೀಡಿದೆ. 2013ರ ಜೂನ್ 15 ರವರೆಗೆ 1280 ಮೆ.ವ್ಯಾ ವಿದ್ಯುಚ್ಛಕ್ತಿ ಖರೀದಿಸಲು ಖರೀದಿ ಆದೇಶಗಳನ್ನು ಮಾಡುವ ಮೂಲಕ 2012-13ನೇ ಸಾಲಿನ ವಿದ್ಯುತ್ ಸಂಗ್ರಹಿಸಲು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

33) ಕಳೆದ ನಾಲ್ಕು ವರ್ಷಗಳಲ್ಲಿ, ಸರ್ಕಾರವು ವಿದ್ಯುಚ್ಛಕ್ತಿ ಉತ್ಪಾದನೆ, ಪ್ರಸರಣ ಮತ್ತು ವಿತರಣೆಯ ಸಾಮರ್ಥ್ಯಗಳನ್ನು ವೃದ್ಧಿಸುವ ಸಲುವಾಗಿ ವಿದ್ಯುಚ್ಛಕ್ತಿ ಸಂಸ್ಥೆಗಳಲ್ಲಿ 3500 ಕೋಟಿ ರೂ.ಗಳ ಬಂಡವಾಳ ನೆರವನ್ನು ಒದಗಿಸಿದೆ. ಕಳೆದ 13 ವರ್ಷಗಳಲ್ಲಿನ ಶೂನ್ಯ ಈಕ್ವಿಟಿ ನೆರವಿನ ಹಿನ್ನೆಲೆಯಲ್ಲಿ ಇಂತಹ ದೊಡ್ಡ ಪ್ರಮಾಣದ ನೆರವು ಅತಿ ವಿಶಿಷ್ಟವಾಗಿದೆ. ಆ ವರ್ಷಗಳಲ್ಲಿ ಸರ್ಕಾರದ ನೆರವಿನ ಕೊರತೆಯು, ವಿದ್ಯುಚ್ಛಕ್ತಿ ಬೇಡಿಕೆ ಮತ್ತು ಪೂರೈಕೆಗಳ ನಡುವೆ ಅಂತರ ಹೆಚ್ಚಲಿಕ್ಕೆ ಗಣನೀಯವಾಗಿ ಕೊಡುಗೆ ನೀಡಿದೆ.

34) ಹೊಸ ಉತ್ಪಾದನಾ ಸಾಮರ್ಥ್ಯವನ್ನು ಸ್ಥಾಪಿಸುವ ನಿಟ್ಟಿನಲ್ಲಿ ನಮ್ಮ ಸಾಕಷ್ಟು ಪ್ರಯತ್ನಗಳಿದ್ದರೂ, ಕೇಂದ್ರ ಸರ್ಕಾರದಿಂದ ನಮ್ಮ ಸ್ಥಾವರ ಗಳಿಗೆ ಅಗತ್ಯವಾದ ಕಲ್ಲಿದ್ದಲಿನ ನಿರಂತರ ಪೂರೈಕೆ ಮತ್ತು ಪರಿಸರ ಇಲಾಖೆಯಿಂದ ಒಪ್ಪಿಗೆ ಪಡೆಯುವಲ್ಲಿ ರಾಜ್ಯ ಸರ್ಕಾರವು ಬಹು ದೊಡ್ಡ ತೊಡಕನ್ನು ಎದುರಿಸಿದೆ. ಕೇಂದ್ರ ಸರ್ಕಾರದೊಂದಿಗೆ ನಿರಂತರವಾಗಿ ಈ ವಿಷಯಗಳನ್ನು ಪ್ರಸ್ತಾಪಿಸಿದ್ದರೂ, ಕಾಯಬೇಕೆಂಬ ಸಲಹೆಯನ್ನು ಹೊರತು ಪಡಿಸಿ ಬೇರೇನೂ ಸಿಗಲಿಲ್ಲ.

35) 2012–13ನೇ ಸಾಲಿನಲ್ಲಿ ಬಿ.ಟಿ.ಪಿ.ಎಸ್. ನ 2ನೇ ಘಟಕದಿಂದ 500 ಮೆ.ವ್ಯಾ. ಮತ್ತು ಯು.ಪಿ.ಸಿ.ಎಲ್. 2ನೇ ಘಟಕದಿಂದ 600 ಮೆ.ವ್ಯಾ. ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯ ಬರುವ ನಿರೀಕ್ಷೆಯಿದೆ. ಬಳ್ಳಾರಿಯಲ್ಲಿ 500 ಮೆ.ವ್ಯಾ. ಸಾಮರ್ಥ್ಯದ 3ನೇ ಘಟಕ, ಯರಮರಸ್‌ನಲ್ಲಿ ತಲಾ 800 ಮೆ.ವ್ಯಾ. ಸಾಮರ್ಥ್ಯದ ಎರಡು ಘಟಕಗಳು ಮತ್ತು ಎಡ್ಲಾಪುರ್ ನಲ್ಲಿ 800 ಮೆ.ವ್ಯಾ. ಸಾಮರ್ಥ್ಯದ ಒಂದು ಘಟಕ ಅನುಷ್ಠಾನ ಪ್ರಗತಿಯಲ್ಲಿವೆ. ಕರ್ನಾಟಕ ವಿದ್ಯುತ್ ನಿಗಮದಿಂದ ಸ್ಥಾಪಿಸಲಾಗುತ್ತಿರುವ 1500 ಮೆ.ವ್ಯಾ. ಸಾಮರ್ಥ್ಯದ ಛತ್ತಿಸ್‌ಘಡ್ ಉಷ್ಣ ವಿದ್ಯುತ್ ಸ್ಥಾವರ, 700 ಮೆ.ವ್ಯಾ. ಸಾಮರ್ಥ್ಯದ ಬಿಡದಿ ಅನಿಲ ಸ್ಥಾವರ ಹಾಗೂ ಎನ್.ಟಿ.ಪಿ.ಸಿ.ಯ 4000 ಮೆ.ವ್ಯಾ. ಸಾಮರ್ಥ್ಯದ ಉಷ್ಣ ಸ್ಥಾವರಗಳ ಕಾಮಗಾರಿಯು 2012–13ನೇ ಸಾಲಿನಲ್ಲಿ ಪ್ರಾರಂಭಗೊಳ್ಳುವ ನಿರೀಕ್ಷೆಯಿದೆ.

36) ಗ್ರಾಮೀಣ ಕುಟುಂಬಗಳಿಗೆ 24 ಗಂಟೆ ವಿದ್ಯುತ್ ಪೂರೈಕೆ ಕಲ್ಪಿಸುವ ನಿಟ್ಟಿನಲ್ಲಿ ಪ್ರಾರಂಭಿಸಲಾದ ಒಟ್ಟು 2182 ಕೋಟಿ ರೂ.ಗಳ ವೆಚ್ಚದ ನಿರಂತರ ಜ್ಯೋತಿ ಯೋಜನೆಯು 2012–13ನೇ ಸಾಲಿನಲ್ಲಿ ಪೂರ್ಣ ಗೊಳ್ಳುವ ನಿರೀಕ್ಷೆಯಿದೆ. 2012–13ನೇ ಸಾಲಿನಲ್ಲಿ 610 ಕೋಟಿ ರೂ.ಗಳ ಒಟ್ಟು ವೆಚ್ಚದಲ್ಲಿ ಸಂಯೋಜಿತ ಪ್ರಸರಣ ಮಾರ್ಗಗಳ ಜೊತೆಗೆ 83 ಹೊಸ ಉಪಕೇಂದ್ರಗಳನ್ನು ಸ್ಥಾಪಿಸಲು ಮತ್ತು ಹಾಲಿಯಿರುವ 117 ಉಪಕೇಂದ್ರಗಳ ಸಾಮರ್ಥ್ಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

37) 2012–13ನೇ ಸಾಲಿಗೆ 5000 ಕುಡಿಯುವ ನೀರು ಸರಬರಾಜು ಸ್ಥಾವರಗಳಿಗೆ ಮತ್ತು 50,000 ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಯೋಜಿಸಲಾಗಿದೆ.

38) ಸರ್ಕಾರವು ನಿರಾವರಿ ಪಂಪ್‌ಸೆಟ್‌ಗಳ ಸಕ್ರಮೀಕರಣಕ್ಕಾಗಿ ಅಗತ್ಯವಿರುವ ಮೂಲ ಸೌಕರ್ಯವನ್ನು ವೃದ್ಧಿಸಲು 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. 2012–13ನೇ ಸಾಲಿನಲ್ಲಿ ಕೂಡ ಇದೇ ರೀತಿಯ ಹಣಕಾಸು ನೆರವನ್ನು ಎಸ್ಕಾಂಗಳಿಗೆ ಒದಗಿಸಲಾಗುವುದು.

39) 2011–12ನೇ ಸಾಲಿನಲ್ಲಿ 441 ಮೆ.ವ್ಯಾ. ವಿದ್ಯುಚ್ಛಕ್ತಿ ಸಾಮರ್ಥ್ಯದ ಸೇರ್ಪಡೆಯೊಂದಿಗೆ ನವೀಕರಿಸಬಹುದಾದ ಇಂಧನ ಮೂಲಕ್ಕೆ ಉತ್ತೇಜನ ನೀಡುವಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದೆ. ಕೈಗಾರಿಕಾ ಮತ್ತು ವಾಣಿಜ್ಯ ಬಳಕೆಯ ಗ್ರಾಹಕರ ಮೇಲೆ ಪ್ರತಿ ಯೂನಿಟ್‌ಗೆ 5 ಪೈಸೆಯಂತೆ ಉಪಕರ ವಿಧಿಸುವ ಮೂಲಕ ಹಸಿರು ಇಂಧನ ನಿಧಿ (ಗ್ರೀನ್ ಎನರ್ಜಿ ಫಂಡ್) ಸ್ಥಾಪಿಸಲಾಗುವುದು. ಈ ಉಪಕರಕ್ಕೆ ಪೂರಕವಾಗಿ 2012–13ನೇ ಸಾಲಿನ ರಾಜ್ಯ ಆಯವ್ಯಯದಿಂದ 25 ಕೋಟಿ ರೂ.ಗಳ ನೆರವನ್ನು ಒದಗಿಸ ಲಾಗುವುದು. ಈ ನಿಧಿಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಮೇಲ್ಛಾವಣಿ ಜಾಲ ಸಂಪರ್ಕಿತ ಸೌರಶಕ್ತಿ ಯೋಜನೆಗಳಿಗೆ ಪ್ರೋತ್ಸಾಹ ನೀಡಲು ಬಳಸಿಕೊಳ್ಳಲಾಗುವುದು.

40) ವಿದ್ಯುತ್ ಪೂರೈಕೆ ಅವಶ್ಯಕತೆಯನ್ನು ನಿಯಂತ್ರಣ ಮಾಡಲು ಕಟ್ಟಡ ಇಂಧನ ಸಂರಕ್ಷಣೆಗೆ ಸಂಹಿತೆಯನ್ನು ರಚಿಸಲಾಗಿದ್ದು, ಇದನ್ನು ಕ್ರಮೇಣ ವಿವಿಧ ಬಗೆಯ ಕಟ್ಟಡಗಳಿಗೆ ಕಡ್ಡಾಯಗೊಳಿಸಲಾಗುವುದು. ಹಾಲಿ ಯಿರುವ ಪಂಪ್‌ಸೆಟ್‌ಗಳ ಬದಲಾಗಿ ಇಂಧನ ಸಕ್ಷಮತೆಯುಳ್ಳ ಸ್ಟಾರ್ ರೇಟೆಡ್ ಪಂಪ್‌ಸೆಟ್‌ಗಳನ್ನು ಅಳವಡಿಸುವ ಸಲುವಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಪ್ರಾರಂಭಿಸಲಾದ ಪ್ರಾಯೋಗಿಕ ಯೋಜನೆಯಿಂದ ಸುಮಾರು ಶೇಕಡಾ 25 ರಷ್ಟು ಇಂಧನ ಉಳಿತಾಯದ ಪ್ರೋತ್ಸಾಹದಾಯಕ ಫಲಿತಾಂಶ ದೊರೆತಿದೆ. ಈ ಪ್ರಾಯೋಗಿಕ ಯೋಜನೆಯನ್ನು ಇನ್ನು ಹೆಚ್ಚು ಪ್ರದೇಶಗಳಿಗೆ ವಿಸ್ತರಿಸಲಾಗುವುದು.

41) 2012–13ನೇ ಸಾಲಿನಲ್ಲಿ ಇಂಧನ ವಲಯಕ್ಕಾಗಿ ಒಟ್ಟು 10289 ಕೋಟಿ ರೂ.ಗಳ ವೆಚ್ಚವನ್ನು ಮಾಡಲು ಆಯವ್ಯಯದಲ್ಲಿ ಉದ್ದೇಶಿಸಲಾಗಿದೆ.

ರಸ್ತೆಗಳು

42) 2012–13ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿಗಳು, ಪ್ರಮುಖ ಜಿಲ್ಲಾ ರಸ್ತೆಗಳು ಹಾಗೂ ಗ್ರಾಮೀಣ ಮತ್ತು ನಗರ ರಸ್ತೆಗಳ ಸುಧಾರಣೆ, ನವೀಕರಣ ಮತ್ತು ನಿರ್ವಹಣೆಗಾಗಿ ಈವರೆಗೆ ಯಾವ ವರ್ಷದಲ್ಲೂ ನೀಡಲಾರದಷ್ಟು ಹೆಚ್ಚಿನ ಹಣವನ್ನು ಎಂದರೆ 4380 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನಕ್ಕೆ ಪೂರಕವಾಗಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮೂಲಕ ಖಾಸಗಿ ಬಂಡವಾಳವನ್ನು ಸಹ ಪೂರೈಸಲಾಗುವುದು. ನಿರ್ವಹಣೆಯ ವೆಚ್ಚವನ್ನು ಶೇಕಡ 32 ರಷ್ಟು ಹೆಚ್ಚಳದೊಂದಿಗೆ 1215 ಕೋಟಿ ರೂ.ಗಳವರೆಗೆ ಗಣನೀಯವಾಗಿ ಹೆಚ್ಚಿಸಲಾಗಿದೆ.

43) ಸರ್ಕಾರವು 4132 ಕಿ.ಮೀ.ಗಳ ರಸ್ತೆಯನ್ನು ಬಲಪಡಿಸುವುದು ಮತ್ತು 3122 ಕಿ.ಮೀ. ಉದ್ದದ ರಸ್ತೆಯನ್ನು ನವೀಕರಿಸುವುದನ್ನು ಒಳಗೊಂಡ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಿದೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಒಟ್ಟು ವೆಚ್ಚವು 2797 ಕೋಟಿ ರೂ.ಗಳಷ್ಟು ಆಗಿದೆ. ಜಿಲ್ಲೆ–ಜಿಲ್ಲೆಗಳ ನಡುವೆ ಮತ್ತು ಜಿಲ್ಲಾ ಕೇಂದ್ರದಿಂದ ತಾಲ್ಲೂಕು ಕೇಂದ್ರ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಒಳಗೊಂಡ ಸುಮಾರು 1000 ಕೋಟಿ ರೂ.ಗಳ ವೆಚ್ಚದೊಂದಿಗೆ ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾರ್ಯಕ್ರಮದ ಮೊದಲನೇ ಹಂತದ ಬಿಡ್ಡನ್ನು ಏಪ್ರಿಲ್ 2012ರೊಳಗೆ ಆಹ್ವಾನಿಸಲಾಗುವುದು. 2012–13ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಗಾಗಿ 500 ಕೋಟಿ ರೂ.ಗಳನ್ನು ಒದಗಿಸಲಾಗುವುದು.

44) ಅಲ್ಲದೇ, ಸರ್ಕಾರವು ಪ್ರಮುಖ ಜಿಲ್ಲಾ ರಸ್ತೆಗಳ ಸುಧಾರಣೆ ಮತ್ತು ನಿರ್ವಹಣೆಗೂ ಸಹ ಹೆಚ್ಚಿನ ಆದ್ಯತೆ ನೀಡುತ್ತಿದೆ. 2011–12ನೇ ಸಾಲಿನಲ್ಲಿ 2153 ಕೋಟಿ ರೂ. ವೆಚ್ಚದ 2181 ಹೊಸ ಕಾಮಗಾರಿಗಳನ್ನು ಅನುಮೋದಿಸಲಾಗಿದೆ. ಅಂಥ ಬೃಹತ್ ಪ್ರಮಾಣದ ಕಾಮಗಾರಿಗಳನ್ನು 'ಅನುಬಂಧ–ಇ' ನಲ್ಲಿ ಹಿಂದೆಂದೂ ಅನುಮೋದಿಸಿರಲಿಲ್ಲ. ಈ ಕಾಮಗಾರಿಗಳನ್ನು 2012–13ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲಾಗುವುದು.

45) ವಿಶ್ವ ಬ್ಯಾಂಕ್ ಮತ್ತು ಏಷ್ಯಾ ಅಭಿವೃದ್ಧಿ ಬ್ಯಾಂಕ್‌ನ ಸಾಲದ ನೆರವಿನೊಂದಿಗೆ ಒಟ್ಟು 885 ಕಿ.ಮೀ. ಉದ್ದದ ರಸ್ತೆಯನ್ನು ಒಳಗೊಂಡ ರಾಜ್ಯ ಹೆದ್ದಾರಿ ಸುಧಾರಣಾ ಯೋಜನೆಗಳಿಗೆ 2011–12ನೇ ಸಾಲಿನಲ್ಲಿ ಗುತ್ತಿಗೆಗಳನ್ನು ನೀಡಲಾಗಿದೆ. ಈ ಎರಡು ಯೋಜನೆಗಳು ಮುಂದಿನ

ಎರಡೂವರೆ ವರ್ಷಗಳಲ್ಲಿ ಪೂರ್ಣಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಅಲ್ಲದೇ, ಅನ್ಯೂಇಟಿ ವಿಧಾನದ ಮೂಲಕ 562 ಕಿ.ಮೀ. ಉದ್ದದ ರಸ್ತೆಯ ಸುಧಾರಣೆಗಾಗಿ ಯೋಜನೆ ಹಾಗೂ ಸಂಗ್ರಹಣಾ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

46) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ವಾರ್ಷಿಕ ಬಿಓಟಿ-ವಿಜಿಎಫ್, ಪಿಪಿಪಿ ಮುಂತಾದ ಮಿಶ್ರ ವಿಧಾನಗಳ ಮೂಲಕ 1816 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 630 ಕಿ.ಮೀ. ಉದ್ದದ ರಸ್ತೆಯ ಸುಧಾರಣಾ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಇದಲ್ಲದೇ, 1191 ಕಿ.ಮೀ.ಗಳ ಉದ್ದದ ರಾಜ್ಯ ಹೆದ್ದಾರಿಗಳ ನಿರ್ವಹಣೆ, ಕಾರ್ಯಾಚರಣೆ ಮತ್ತು ಸುಂಕದ ಸಂಗ್ರಹಣಾ ಪ್ರಕ್ರಿಯೆಯನ್ನು 2012-13ನೇ ಸಾಲಿನೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ರಾಮನಗರ ಮತ್ತು ಚನ್ನಪಟ್ಟಣ ಬೈಪಾಸ್ ರಸ್ತೆಗಳ ಕ್ರಿಯಾ ಯೋಜನೆಯನ್ನು ರೂಪಿಸಲಾಗುತ್ತಿದೆ.

47) ಕೊಡಗು ಜಿಲ್ಲೆಯ ರಸ್ತೆಗಳ ಅಭಿವೃದ್ಧಿಗಾಗಿ 75 ಕೋಟಿ ರೂ.ಗಳ ಪ್ಯಾಕೇಜ್‌ನ್ನು ಲೋಕೋಪಯೋಗಿ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ ಒದಗಿಸಿರುವ ಹಣದ ಮೂಲಕ ನೀಡಲಾಗುವುದು.

48) ರಾಜ್ಯ ಹೆದ್ದಾರಿಗಳು ಮತ್ತು ಪ್ರಮುಖ ಜಿಲ್ಲಾ ರಸ್ತೆಗಳಿಗೆ ಆದ್ಯತೆ ನೀಡುವ ಎರಡು ವಿಸ್ತೃತ ಕಾರ್ಯಕ್ರಮಗಳಲ್ಲಿ ಸಣ್ಣ ಪ್ರಮಾಣದ ವೆಚ್ಚಗಳನ್ನು ಒಳಗೊಂಡ ಯೋಜನೆಗಳನ್ನು ಸೇರಿಸುವ ಮೂಲಕ ಲೋಕೋಪಯೋಗಿ ಇಲಾಖೆಯ ಆಯವ್ಯಯವನ್ನು ಪುನರ್ ವಿನ್ಯಾಸಗೊಳಿಸಲಾಗಿದೆ.

ಮೂಲ ಸೌಕರ್ಯ

49) ಸರ್ಕಾರವು ಮೂಲ ಸೌಕರ್ಯ ವಲಯದಲ್ಲಿ ಖಾಸಗಿ ಬಂಡವಾಳ ಹೂಡುವಂತಾಗಲು ಮತ್ತು ಸಾಮರ್ಥ್ಯವನ್ನು ಕಲ್ಪಿಸಲು ಹೆಚ್ಚಿನ ಆದ್ಯತೆಯನ್ನು ನೀಡುತ್ತಿದೆ. ಸಾರ್ವಜನಿಕ ಖಾಸಗಿ ಪಾಲುದಾರಿಕೆಯ ತತ್ವದ ಮೇಲೆ ಹೆಚ್ಚು ಯೋಜನೆಗಳಿಗೆ ಅವಕಾಶ ಕಲ್ಪಿಸಲು ಶಾಸನದ ಬೆಂಬಲವನ್ನು ಹೊಂದಿರುವ ಪಾರದರ್ಶಕವಾದ ಮತ್ತು ಉತ್ತರದಾಯಿತ್ವ ವಿಧಿವಿಧಾನಗಳನ್ನು

ಹೊಂದಿದ ಮೂಲ ಸೌಕರ್ಯ ವಿಧೇಯಕವನ್ನು ವಿಧಾನಮಂಡಲದಲ್ಲಿ ಮಂಡಿಸಲಿದೆ.

50) ಸಮರ್ಥರಾದ ಸಲಹೆಗಾರರು ಮತ್ತು ವ್ಯವಹಾರ ಸಲಹೆಗಾರರ ನೆರವಿನೊಂದಿಗೆ 12 ವಲಯಗಳಲ್ಲಿ ಸಿದ್ಧ ಬಂಡವಾಳ ಹೂಡಿಕೆ ಮೂಲ ಸೌಕರ್ಯಗಳ ವಿವಿಧ ಆಯಾಮದ ಕಾಮಗಾರಿಗಳನ್ನು ಒಳಗೊಂಡ ಸಮಗ್ರ ಕರ್ನಾಟಕ ಕಾರ್ಯತಂತ್ರ ಮೂಲ ಸೌಕರ್ಯ ಬಂಡವಾಳ ಹೂಡಿಕೆ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಆರ್ಥಿಕ ಮತ್ತು ಸಾಮಾಜಿಕ ಮೂಲ ಸೌಕರ್ಯ ವಲಯಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ಗಳನ್ನು ಗುರುತಿಸಲು, ವಿನ್ಯಾಸಗೊಳಿಸಲು, ಅಭಿವೃದ್ಧಿಪಡಿಸಲು ಮತ್ತು ಮೇಲ್ವಿಚಾರಣೆ ಮಾಡಲು ಸರ್ಕಾರವು ತನ್ನ ಅಧಿಕಾರಿಗಳ ಸಾಮರ್ಥ್ಯವನ್ನು ಸಹ ಹೆಚ್ಚಿಸುತ್ತಿದೆ.

51) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 1479 ಕೋಟಿ ರೂ.ಗಳ ವೆಚ್ಚದಲ್ಲಿ ಟರ್ಮಿನಲ್-1 ರ ವಿಸ್ತರಣಾ ಕಾರ್ಯವನ್ನು ಕೈಗೆತ್ತಿ ಕೊಂಡಿದೆ. 2012ರ ಡಿಸೆಂಬರ್ ಹೊತ್ತಿಗೆ ವಿಸ್ತರಣಾ ಕಾರ್ಯವು ಪೂರ್ಣ ಗೊಳ್ಳಲಿದ್ದು, ಈ ವಿಮಾನ ನಿಲ್ದಾಣವು ಈಗಿರುವ 11 ದಶಲಕ್ಷ ಸಾಮರ್ಥ್ಯಕ್ಕೆ ಹೋಲಿಸಿದಲ್ಲಿ ಒಂದು ಷರ್ದಲ್ಲಿ 17.5 ದಶಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಲಿದೆ.

52) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾದ ಶಿವಮೊಗ್ಗ ಮತ್ತು ಗುಲ್ಬರ್ಗಾ ವಿಮಾನ ನಿಲ್ದಾಣಗಳು ಈ ಆರ್ಥಿಕ ವರ್ಷದ ಅವಧಿಯಲ್ಲಿ ಕಾರ್ಯಾರಂಭ ಮಾಡಲಿದೆ. ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ ವಿಸ್ತರಣಾ ಕಾರ್ಯವನ್ನು ಸಹ ಕೈಗೊಳ್ಳಲಾಗುವುದು. ಭಾರತ ವಿಮಾನ ನಿಲ್ದಾಣ ಪ್ರಾಧಿಕಾರವು ಹುಬ್ಬಳ್ಳಿ ಮತ್ತು ಬೆಳಗಾವಿ ವಿಮಾನ ನಿಲ್ದಾಣಗಳ ಮೇಲೆ 150 ಕೋಟಿ ರೂ.ಗಳ ಬಂಡವಾಳ ಹೂಡಿಕೆ ಮಾಡುವುದೆಂದು ನಿರೀಕ್ಷಿಸಲಾಗಿದೆ.

53) ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ (ಜಿಎಐಎಲ್) ಕೈಗೊಂಡಿರುವ ಧಾಬೋಲ್‌ನಿಂದ ಬೆಂಗಳೂರುವರೆಗಿನ ಪ್ರಾಕೃತಿಕ ಅನಿಲ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿಯು ಈ ಹಣಕಾಸು ವರ್ಷದಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ. ಬೆಂಗಳೂರು ಮತ್ತು

ಅದರ ಸುತ್ತಮುತ್ತ ಇರುವ ವಿದ್ಯುತ್ ಸ್ಥಾವರಗಳು, ಸಾಗಣೆ ವಾಹನಗಳು, ಕೈಗಾರಿಕೆಗಳು ಮತ್ತು ಕುಟುಂಬಗಳಿಗೆ ಶುದ್ಧ ಇಂಧನವನ್ನು ಒದಗಿಸಲು ಜಿಎಐಎಲ್ ಮತ್ತು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲ ಸೌಕರ್ಯ ಮತ್ತು ಅಭಿವೃದ್ಧಿ ನಿಗಮದೊಂದಿಗೆ ಒಂದು ಜಂಟಿ ಉದ್ಯಮವನ್ನು ಸ್ಥಾಪಿಸಲಾಗಿದೆ.

54) ಹಂತ–1 ರಲ್ಲಿ, ವಾರ್ಷಿಕ 35 ದಶಲಕ್ಷ ಟನ್‌ಗಳ ನಿರ್ವಹಣಾ ಸಾಮರ್ಥ್ಯದ 3000 ಕೋಟಿ ರೂ.ಗಳ ಅಂದಾಜು ವೆಚ್ಚದ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವ ಮಾದರಿಯ ತಡದಿ ಸಮುದ್ರ ಬಂದರು ಕಾಮಗಾರಿಯು ಸವಾಲುದಾರರ ಅಂತಿಮ ಪಟ್ಟಿಯನ್ನು ಸಿದ್ಧಪಡಿಸುವ ಮತ್ತು ಸವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸುವ ಕಾರ್ಯವು ಪೂರ್ಣಗೊಂಡಿದೆ. ಸದರಿ ಯೋಜನೆಯನ್ನು ಕೇಂದ್ರ ಸರ್ಕಾರದ ಸಹಾಯ ದೊಂದಿಗೆ ಕೈಗೆತ್ತಿಕೊಳ್ಳಲಾಗುವುದು.

55) ಏಷ್ಯಾ ಅಭಿವೃದ್ಧಿ ಬ್ಯಾಂಕಿನ ಸಾಲದ ನೆರವಿನೊಂದಿಗೆ 170 ಕೋಟಿ ರೂ.ಗಳ ವೆಚ್ಚದಲ್ಲಿ ಉಲ್ಲಾಳದಲ್ಲಿ ಸಮುದ್ರ ತೀರ ನಿರ್ವಹಣಾ ಯೋಜನೆಯ ಕಾಮಗಾರಿಯು 2012–13ನೇ ಸಾಲಿನಲ್ಲಿ ಪ್ರಾರಂಭಗೊಳ್ಳುವು ದೆಂದು ನಿರೀಕ್ಷಿಸಲಾಗಿದೆ.

56) ಹುಬ್ಬಳ್ಳಿ–ಅಂಕೋಲ ರೈಲ್ವೆ ಮಾರ್ಗ ಯೋಜನೆಯನ್ನು ಮುಂದುವರೆಸುವ ಮೂಲಕ ಒಳನಾಡು ಸಂಪರ್ಕವನ್ನು ಖಚಿತಪಡಿಸ ಲಾಗುತ್ತಿದೆ. ಭಾರತ ವಿಜ್ಞಾನ ಸಂಸ್ಥೆಯು ಪರಿಸರ ಪರಿಣಾಮ ಉಪಶಮನ ವರದಿಯನ್ನು ಸಿದ್ಧಪಡಿಸದೆ. ಈ ಯೋಜನೆಯನ್ನು ಮುಂದುವರೆಸಲು ಪರಿಸರ ಮತ್ತು ಅರಣ್ಯ ಸಂಬಂಧಿತ ಅನುಮತಿಗಳನ್ನು ಪಡೆಯಲು ಭಾರತ ಸರ್ವೋಚ್ಛ ನ್ಯಾಯಾಲಯದ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಮತ್ತು ಪರಿಸರ ಮತ್ತು ಅರಣ್ಯ ಮಂತ್ರಾಲಯವನ್ನು ಕೋರಲಾಗುವುದು. ಕಾರವಾರ ಮತ್ತು ತಡದಿ ಬಂದರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪರ್ಕ ಜಾಲದ ಅಭಿವೃದ್ಧಿ ಕಾರ್ಯವನ್ನು ಸಹ ಕೈಗೆತ್ತಿಕೊಳ್ಳಲಾಗುವುದು.

57) ರಾಜ್ಯ ಸರ್ಕಾರವು ಮೂರು ಹೊಸ ರೈಲ್ವೆ ಯೋಜನೆಗಳನ್ನು ಅಂದರೆ ಗದಗ–ವಾಡಿ, ಗದಗ–ಹಾವೇರಿ ಮತ್ತು ಶ್ರೀನಿವಾಸಪುರ–ಮದನಪಲ್ಲಿ ಯೋಜನೆಗಳನ್ನು ರೈಲ್ವೆ ಮಂತ್ರಾಲಯದ ವೆಚ್ಚ ಹಂಚಿಕೆ ವ್ಯವಸ್ಥೆಯ ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿದೆ. ಯೋಜನೆಯನ್ನು ಸುಗಮವಾಗಿ ಕೈಗೆತ್ತಿಕೊಳ್ಳುವ ಸಲುವಾಗಿ ಆರು ತಿಂಗಳ ದಾಖಲೆಯ ಕಾಲದೊಳಗೆ 2,293

ಎಕರೆ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. 2012-13ನೇ ಸಾಲಿನಲ್ಲಿ ಕಡೂರು- ಚಿಕ್ಕಮಗಳೂರು ನಡುವಿನ ರೈಲ್ವೆ ಮಾರ್ಗ, ರಾಮನಗರ- ಮಂಡ್ಯ ನಡುವಿನ ಜೋಡಿ ರೈಲ್ವೆ ಮಾರ್ಗ, ಶ್ರಾವಣ ಬೆಳಗೋಳ - ಹಿರಿಸಾವೆ ನಡುವಿನ ರೈಲ್ವೆ ಮಾರ್ಗ ಹಾಗೂ ನಾಗಮಂಗಲ -ಸೋಲೂರು ರೈಲ್ವೆ ಮಾರ್ಗಗಳನ್ನು ಪೂರ್ಣಗೊಳಿಸಲು ಯೋಜಿಸಲಾಗಿದೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಆಯವ್ಯಯದಲ್ಲಿ 445 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

58) 250 ಕೋಟಿ ರೂ.ಗಳ ಅಂದಾಜು ಬಂಡವಾಳ ಹೂಡಿಕೆಯ ದೇವನಹಳ್ಳಿಯ ಸಮ್ಮೇಳನ ಸಭಾಂಗಣದ ವಿನ್ಯಾಸ ಪ್ರಕ್ರಿಯೆಯನ್ನು ಮುಂದಿನ ಆರು ತಿಂಗಳೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಇಪಿಸಿ ಗುತ್ತಿಗೆಯ ಅಡಿಯಲ್ಲಿ ಈ ಯೊಜನೆಯ ಕಾಮಗಾರಿಯನ್ನು 2012-13 ರೊಳಗೆ ಪ್ರಾರಂಭಿಸುವ ನಿರೀಕ್ಷೆ ಇದೆ.

ನಗರಾಭಿವೃದ್ಧಿ

59) ನಗರ ಪ್ರದೇಶಗಳಿಗೆ ಜನರ ವಲಸೆಯ ಪ್ರಮಾಣವು ಹೆಚ್ಚುತ್ತಿರುವುದರಿಂದಾಗಿ ರಾಜ್ಯದ ಒಟ್ಟಾರೆ ಆರ್ಥಿಕ ಅಭಿವೃದ್ಧಿಗೆ ಕ್ರಮಬದ್ಧ ಮತ್ತು ಸುಯೋಜಿತ ನಗರಾಭಿವೃದ್ಧಿಯು ಅತ್ಯಾವಶ್ಯಕವಾಗಿದೆ. ನಗರಾಭಿವೃದ್ಧಿಗಾಗಿ 8797 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

60) ಎಲ್ಲಾ ನಗರಗಳು ಮತ್ತು ಪಟ್ಟಣಗಳಲ್ಲಿ 1454 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿರುವ ಮುಖ್ಯಮಂತ್ರಿಯವರ ನಗರೋತ್ಥಾನ ಯೋಜನೆಯು (ಸಿ.ಎಂ.ಎಸ್.ಎಂ.ಟಿ.ಡಿ.ಪಿ) ಮೂಲ ಸೌಲಭ್ಯ ಸ್ಥಿತಿಯನ್ನು ಉತ್ತಮಗೊಳಿಸುವುದರೊಂದಿಗೆ ಗಮನಾರ್ಹ ಯಶಸ್ಸನ್ನು ಕಂಡಿದೆ. ಸ್ಥಳೀಯ ಸಂಸ್ಥೆಗಳ ಪ್ರಾಥಮಿಕ ಮೂಲ ಸೌಲಭ್ಯಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಗಳನ್ನು ಆಯ್ಕೆ ಮಾಡುವಲ್ಲಿ ಹಾಗೂ ಅನುಷ್ಠಾನಗೊಳಿಸುವಲ್ಲಿ ಈ ಯೋಜನೆಯ ಅನುಭವವನ್ನು ಬಳಸಿಕೊಂಡು ಕಾರ್ಯಕ್ರಮವನ್ನು ಹೆಚ್ಚು ಪರಿಣಾಮಕಾರಿಯಾಗಿ 'ಮಾಡಲಾಗುವುದು. ನೀರು ಸರಬರಾಜು ಮತ್ತು ಒಳಚರಂಡಿ ಈ ಎರಡು ಬೃಹತ್ ಮೂಲ ಸೌಲಭ್ಯ ಯೋಜನೆಗಳಿಗೆ ಆದ್ಯತೆ ನೀಡಿ ಈ ಕಾರ್ಯಕ್ರಮದ ಹಂತ-IIನ್ನು 1591 ಕೋಟಿ ರೂ. ವೆಚ್ಚದೊಂದಿಗೆ

2012–13ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು ಮತ್ತು ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

61) ಇದುವರೆವಿಗೆ ಯಾವುದೇ ಬೃಹತ್ ಯೋಜನೆಯಲ್ಲಿ ಒಳಪಟ್ಟಿರದ 74 ಪಟ್ಟಣಗಳಲ್ಲಿ ನೀರು ಸರಬರಾಜು ಮತ್ತು ನೈರ್ಮಲ್ಯ ಸೌಲಭ್ಯ ಒದಗಿಸುವ ಯೋಜನೆಗೆ, ಹಣಕಾಸು ಸಂಸ್ಥೆಗಳು ಮತ್ತು ಮಾರುಕಟ್ಟೆಗಳಿಂದ ಸಾಲಗಳನ್ನು ಕ್ರೋಢೀಕರಿಸಲು ಆ ಪಟ್ಟಣಗಳ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರ ಮೂಲಕ, ಪ್ರಾರಂಭಿಸಲಾಗುವುದು.

62) ಎ.ಡಿ.ಬಿ. ನೆರವಿನ ಕೆ.ಯು.ಡಿ.ಸಿ. ಇ.ಎಂ. ಯೋಜನೆಯಡಿ ಮಂಗಳೂರು ನಗರಕ್ಕೆ ಸಮಗ್ರ ನೀರು ಸರಬರಾಜನ್ನು ಹೆಚ್ಚಿಸಲಾಗಿದೆ. ಆದರೆ ವಿತರಣಾ ವ್ಯವಸ್ಥೆಯು ಪೂರ್ಣ ಪ್ರಮಾಣದಲ್ಲಿ ಇರುವುದಿಲ್ಲ. ಕಾಲಕಾಲಕ್ಕೆ ನೀರು ಸರಬರಾಜು ಮಾಡುವ ಪ್ರಸ್ತುತ ವ್ಯವಸ್ಥೆಯನ್ನು 24x7 ಸರಬರಾಜು ವ್ಯವಸ್ಥೆಗೆ 146 ಕೋಟಿ ರೂ. ಒಟ್ಟು ವೆಚ್ಚದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮಾದರಿ ಮೂಲಕ ಪರಿವರ್ತಿಸಲಾಗುವುದು. ಕಾಮಗಾರಿಯನ್ನು 2012–13 ರೊಳಗೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

63) ಹುಬ್ಬಳ್ಳಿ– ಧಾರವಾಡ, ಬೆಳಗಾವಿ ಮತ್ತು ಗುಲ್ಬರ್ಗಾಗಳಲ್ಲಿ 24x7 ನೀರು ಸರಬರಾಜು ಪ್ರಾಯೋಗಿಕ ಯೋಜನೆಯ ಪ್ರಾತ್ಯಕ್ಷಿಕೆ ವಲಯಗಳಲ್ಲಿನ ಯೋಜನೆಯನ್ನು 1700 ಕೋಟಿ ರೂ. ವೆಚ್ಚದ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಈ ಮೂರು ನಗರಗಳಲ್ಲಿ ಇಡೀ ಪ್ರದೇಶಕ್ಕೆ ವಿಸ್ತರಿಸಲಾಗುವುದು. ಈ ಉದ್ದೇಶಕ್ಕಾಗಿ ಸಾಲದ ನೆರವು ಪಡೆಯಲು ಕೇಂದ್ರ ಸರ್ಕಾರವು ಒಂದು ಪ್ರಸ್ತಾಪವನ್ನು ವಿಶ್ವ ಬ್ಯಾಂಕಿಗೆ ಶಿಫಾರಸ್ಸು ಮಾಡಿದೆ. ಪೂರ್ವ ಅರ್ಹತಾ ಟೆಂಡರ್ ಪ್ರಕ್ರಿಯೆಯನ್ನು 2012–13ರಲ್ಲಿ ಪ್ರಾರಂಭಿಸಲಾಗುವುದು.

64) ಮುಂದಿನ ಐದು ವರ್ಷಗಳಲ್ಲಿ ಸಮರ್ಪಕವಾಗಿ ನೀರು ಸರಬರಾಜು ಮಾಡಲು ಎಲ್ಲಾ ನಗರ ಪ್ರದೇಶಗಳನ್ನು ಒಳಗೊಳ್ಳುವ ಒಂದು ಬೃಹತ್ ಯೋಜನೆಯನ್ನು ತಯಾರಿಸಲಾಗುವುದು. ಯುಕ್ತ ಕಾನೂನು, ಆಡಳಿತ ಮತ್ತು ಆರ್ಥಿಕ ಕ್ರಮಗಳ ಮೂಲಕ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪಾತ್ರವನ್ನು ಎಲ್ಲಾ ನಗರ ಪ್ರದೇಶಗಳಿಗೆ ಒಂದು ಸಮಗ್ರ ನೀರು ಪೂರೈಸುವ ಸಂಸ್ಥೆಯನ್ನಾಗಿ ರೂಪಿಸಿ,

ಆ ಮೂಲಕ ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲಾಗುವುದು. ಸಂವಿಧಾನದ 74ನೇ ತಿದ್ದುಪಡಿಗೆ ಅನುಸಾರವಾಗಿ ನೀರು ಸರಬರಾಜು ಮಾಡುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಪತ್ರವನ್ನು ಸುಸ್ಪಷ್ಟಗೊಳಿಸಲಾಗುವುದು. ತದನಂತರ ಈ ಸಂಸ್ಥೆಗಳ ತಾಂತ್ರಿಕ ಮತ್ತು ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

65) ಹೆಚ್ಚು ಪಾರದರ್ಶಕತೆ ಮತ್ತು ಉತ್ತರದಾಯಿ ಆಡಳಿತ ನೀಡುವ ಗುರಿಯೊಂದಿಗೆ ಎಲ್ಲಾ ನಗರ ಸಭೆಗಳಲ್ಲಿ ವಾರ್ಡ್ ಸಮಿತಿ ಮತ್ತು ಪ್ರದೇಶ ಸಭೆಯನ್ನು ಈ ವರ್ಷದಲ್ಲಿ ಕಾರ್ಯಾರಂಭಗೊಳಿಸಲಾಗುವುದು.

66) ನಗರವಾಸಿ ಬಡ ಜನರ ಅಗತ್ಯಗಳನ್ನು ಪೂರೈಸಲು ರಾಜ್ಯವು ಕೇಂದ್ರ ಸರ್ಕಾರದ ನ್ಯಾಷನಲ್ ಲೈವ್ಲಿಹುಡ್ ಮಿಷನ್ ಮತ್ತು ರಾಜೀವ್ ಆವಾಸ್ ಯೋಜನೆ (ಆರ್.ಎ.ವೈ) ಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದೆ. ಬೀದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಒಂದು ನ್ಯಾಯಸಮ್ಮತ ಹಕ್ಕು ಕೊಡುವ ಉದ್ದೇಶದಿಂದ, ರಾಷ್ಟ್ರೀಯ ನೀತಿಗನುಸಾರವಾಗಿ, ಬೀದಿ ವ್ಯಾಪಾರಿಗಳ ವಿಧೇಯಕವನ್ನು ಈ ಘನ ಸದನದಲ್ಲಿ ಮಂಡಿಸಲಾಗುವುದು.

67) ಮೈಸೂರು ನಗರದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಆಟೋ ನಗರವನ್ನು ಸ್ಥಾಪಿಸಲು ಅನುದಾನವನ್ನು ನೀಡಲಾಗುವುದು.

68) ಮೈಸೂರು ನಗರದಲ್ಲಿ, ಸಂಚಾರಿ ಸಣ್ಣ ವ್ಯಾಪಾರಿಗಳ ಸಹಕಾರಿ ಸಂಘಕ್ಕೆ 2 ಕೋಟಿ ರೂ.ಗಳ ಸಹಾಯಧನವನ್ನು ಒದಗಿಸಲಾಗುವುದು.

69) ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರೋತ್ಸಾಹದಾಯಕವಾಗಿ 13ನೇ ಹಣಕಾಸು ಆಯೋಗದ ನೆರವಿನೊಂದಿಗೆ 172 ಕೋಟಿ ರೂ.ಗಳ ಕಾರ್ಯದಕ್ಷತೆ ಅನುದಾನವನ್ನು ಒದಗಿಸಲಾಗುವುದು. ಕಾರ್ಯದಕ್ಷತೆಯನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಲು ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗುವುದು.

ಬೆಂಗಳೂರು ಅಭಿವೃದ್ಧಿ

70) ಬೈಯಪ್ಪನ ಹಳ್ಳಿಯಿಂದ ಮಹಾತ್ಮಾ ಗಾಂಧಿ ರಸ್ತೆವರೆಗೆ 6.5 ಕಿ.ಮೀ. ಮಾರ್ಗ–1ನ್ನು ಉದ್ಘಾಟಿಸುವುದರ ಮೂಲಕ ಬೆಂಗಳೂರಿನಲ್ಲಿ ಮೆಟ್ರೋ ರೈಲು ಸಾಕಾರಗೊಂಡಿದೆ. ಮುಂದಿನ 9 ತಿಂಗಳೊಳಗೆ ಇನ್ನೂ 10.4 ಕಿ.ಮೀ. ಮಾರ್ಗವನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಡಿಸೆಂಬರ್

2013 ರೊಳಗಾಗಿ ಇಡೀ ಹಂತ–1ನ್ನು ಪೂರ್ಣಗೊಳಿಸುವ ನಿರೀಕ್ಷೆಯಿದೆ. ಮೆಟ್ರೋ ಯೋಜನೆಗಾಗಿ 500 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

71) ಒಟ್ಟು 26405 ಕೋಟಿ ರೂ.ಗಳ ವೆಚ್ಚದಲ್ಲಿ 72 ಕಿ.ಮೀ. ಒಟ್ಟು ಉದ್ದದ 4 ವಿಸ್ತರಣಾ ಮಾರ್ಗಗಳು ಮತ್ತು 2 ಹೊಸ ಮಾರ್ಗಗಳನ್ನು ಒಳಗೊಂಡ ಹಂತ–2ಕ್ಕೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದೆ. ಪ್ರಯಾಣಿಕರಿಗೆ ಹೆಚ್ಚು ಅಗತ್ಯವಾದ ಕೊನೆಯ ಹಂತದವರೆಗಿನ ಸಂಪರ್ಕ ವನ್ನು ಈ 4 ವಿಸ್ತರಣಾ ಮಾರ್ಗಗಳು ಕಲ್ಪಿಸುತ್ತವೆ. ಬೆಂಗಳೂರಿನ ಕೆಲವು ಜನನಿಬಿಡ ಮತ್ತು ಸಂಚಾರ ದಟ್ಟಣೆ ಪ್ರದೇಶಗಳ ಮೂಲಕ ಹಾದು ಹೋಗುವ ಎರಡು ಹೊಸ ಮಾರ್ಗಗಳು ಮಾಹಿತಿ ತಂತ್ರಜ್ಞಾನದ ಉದ್ಯಮ ಗಳಿಗೆ ಸಂಪರ್ಕ ಕಲ್ಪಿಸುತ್ತವೆಂದು ನಿರೀಕ್ಷಿಸಲಾಗಿದೆ. ಹಂತ–1 ರಲ್ಲಿನಂತೆ. ಹಂತ–2 ರಲ್ಲೂ ಭಾಗಿಯಾಗಲು ಹಾಗೂ ಭಾಗಶಃ ಹಣಕಾಸು ಒದಗಿಸಲು ಭಾರತ ಸರ್ಕಾರವನ್ನು ಕೋರಲಾಗಿದೆ. 2ನೇ ಹಂತದ ಕಾಮಗಾರಿಯು 2012–13ರಲ್ಲಿ ಪ್ರಾರಂಭಗೊಂಡು, 2017–18 ರೊಳಗೆ ಪೂರ್ಣಗೊಳ್ಳುವು ದೆಂದು ಯೋಜಿಸಲಾಗಿದೆ.

72) ಸಂಚಾರ ದಟ್ಟಣೆಯನ್ನು ಸುಗಮಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2012–13ನೇ ಸಾಲಿನಲ್ಲಿ 426 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಒಟ್ಟು 51.5 ಕಿ.ಮೀ ಉದ್ದದ ಐದು ಮುಖ್ಯವಾದ ಸಿಗ್ನಲ್ ಮುಕ್ತ ಕಾರಿಡಾರ್‌ಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಿದೆ. ಇದರ ಜೊತೆಗೆ 200 ಕೋಟಿ ರೂ.ಗಳ ಒಟ್ಟು ವೆಚ್ಚದಲ್ಲಿ ಟೆಂಡರ್ ಶ್ಯೂರ್ ಡಿಸೈನ್ ನಾರ್ಮ್ಸ್ ಮೇಲೆ ಪ್ರಮುಖ ರಸ್ತೆ ಕಾಮಗಾರಿ ಗಳನ್ನು ಕೈಗೆತ್ತಿಕೊಳ್ಳಲಾಗುವುದು. 2012–13ರಲ್ಲಿ 8 ವಾಹನ ನಿಲುಗಡೆ ಸಮುಚ್ಚಯಗಳು ಮತ್ತು ಘನ ತ್ಯಾಜ್ಯ ನಿರ್ವಹಣಾ ಮೂಲ ಸೌಲಭ್ಯ ಯೋಜನೆಗಳ ನಿರ್ಮಾಣವನ್ನು ತಲಾ 200 ಕೋಟಿ ರೂ ಒಟ್ಟು ವೆಚ್ಚದಲ್ಲಿ ಪ್ರಾರಂಭಿಸಲು ಯೋಜಿಸಲಾಗಿದೆ. ಹಸಿ ಘನ ತ್ಯಾಜ್ಯವನ್ನು ಬಳಸಿ ಮೀಥೇನ್ ಉತ್ಪಾದಿಸುವ 16 ಯೋಜನೆಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುವುದು.

73) 2012–13ನೇ ಸಾಲಿನಲ್ಲಿ ರಸ್ತೆ, ಉದ್ಯಾನವನ ಮತ್ತು ಘನ ತ್ಯಾಜ್ಯ ನಿರ್ವಹಣಾ ಮೂಲ ಸೌಲಭ್ಯ ಸೇರಿದಂತೆ ಪ್ರಮುಖ ಆಯ್ದ ಯೋಜನೆಗಳಿಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಒಟ್ಟು 1000 ಕೋಟಿ ರೂ. ಆರ್ಥಿಕ ನೆರವು ಒದಗಿಸಲಾಗುವುದು.

74) ನಗರಕ್ಕೆ ಹೆಚ್ಚುವರಿ 500 ಎಂ.ಎಲ್.ಡಿ. ನೀರನ್ನು ತರುವ ಮತ್ತು ಅದರಿಂದ ನಗರ ಹೊರ ವಲಯಗಳ ನೀರಿನ ಬವಣೆ ನೀಗಿಸುವ ಕಾವೇರಿ ನೀರು ಸರಬರಾಜು ಯೋಜನೆ ಘಟ್ಟ–4 ಹಂತ–2 ಸೆಪ್ಟೆಂಬರ್ 2012 ವೇಳೆಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಬಳಕೆ ಪ್ರಮಾಣ ಲೆಕ್ಕಕ್ಕೆ ಸಿಗದ ನೀರಿನ ಬಳಕೆಯನ್ನು ಕಡಿಮೆ ಮಾಡುವ ಹಾಗೂ ಒಳಚರಂಡಿ ವ್ಯವಸ್ಥೆಗಳಿಗೆ ಮತ್ತು ಸಂಸ್ಕರಣಾ ಘಟಕಗಳಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನವನ್ನು ತೀವ್ರಗೊಳಿಸಲು ಉದ್ದೇಶಿಸಲಾಗಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 1000 ಕೋಟಿ ರೂ. ಹಂಚಿಕೆ ಮಾಡಲಾಗಿದೆ.

75) ಬೆಂಗಳೂರು ನಗರದ ಅಗಲಮುಖ ವಿಸ್ತೀರ್ಣ ವರ್ಧನೆಯ ಬದಲಾಗಿ ಊರ್ಧ್ವಮುಖ ಬೆಳವಣಿಗೆಗೆ ಸಹಕಾರಿಯಾಗುವಂತೆ ಸರ್ಕಾರವು ಒಂದು ಕಾರ್ಯ ನೀತಿಯನ್ನು ರೂಪಿಸಲಿದೆ.

76) ಕೆಂಪೇಗೌಡ ಬಡಾವಣೆ ಅಭಿವೃದ್ಧಿ, ಅಡಚಣೆರಹಿತ ಸಂಪರ್ಕಕ್ಕಾಗಿ ಹೊರವಲಯ ರಸ್ತೆ ಸುಧಾರಣೆ ಮತ್ತು ಎತ್ತರಿಸಿದ ರಸ್ತೆಗಳ ನಿರ್ಮಾಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯೋಜಿಸಿದೆ. 2012–13ರಲ್ಲಿ ಪೆರಿಫೆರಲ್ ಹೊರ ವರ್ತುಲ ರಸ್ತೆ ಕಾಮಗಾರಿಯ ಯೋಜನಾ ವರದಿ ತಯಾರಿಕೆ ಮತ್ತು ಭೂಸ್ವಾಧೀನ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

77) ರಾಜ್ಯದ ನಗರ ಪ್ರದೇಶಗಳಲ್ಲಿ ಕೆರೆಗಳು ಮತ್ತು ಜಲಘಟಕಗಳನ್ನು ಸಂರಕ್ಷಿಸುವ ಅಗತ್ಯದ ಬಗ್ಗೆ ಸರ್ಕಾರವು ತೀವ್ರ ಕಾಳಜಿಯನ್ನು ಹೊಂದಿದೆ. ಕೆರೆಗಳ ಸಂರಕ್ಷಣೆ, ಪುನರ್ ಸ್ಥಾಪನೆ ಮತ್ತು ಜೀರ್ಣೋದ್ಧಾರಕ್ಕಾಗಿ ಆಯವ್ಯಯದಲ್ಲಿ 50 ಕೋಟಿ ರೂ. ಗಳನ್ನು ಹಂಚಿಕೆ ಮಾಡಿದ್ದು, ಅದಕ್ಕೆ ಪೂರಕವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗಳು ಸಮಾನ ಮೊತ್ತವನ್ನು ಭರಿಸಲಿವೆ.

78) ವಿವಿಧ ಸಂಸ್ಥೆಗಳ ಮೂಲಕ ಬೆಂಗಳೂರು ನಗರದ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಯೋಜನೆ ಮತ್ತು ಕಾಮಗಾರಿಗಳಿಗಾಗಿ ಒಟ್ಟಾರೆ 5,500 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್

79) ಭಾರತ ಸರ್ಕಾರದ ಅನುದಾನಗಳೂ ಸೇರಿದಂತೆ ಗ್ರಾಮೀಣ ಅಭಿವೃದ್ಧಿಗಾಗಿ 2012-13ನೇ ಸಾಲಿನಲ್ಲಿ ಒಟ್ಟು 6896 ಕೋಟಿ ರೂ.ಗಳ ಅನುದಾನವನ್ನು ಮೀಸಲಿರಿಸಲಾಗಿದೆ.

80) ಸಾಕಷ್ಟು ಪ್ರಮಾಣದ ಸುರಕ್ಷಿತ ಕುಡಿಯುವ ನೀರು, ಉದ್ಯೋಗ ಸೃಜನೆ ಮತ್ತು ನೈರ್ಮಲ್ಯ ಇವು 2011-12ನೇ ಸಾಲಿನ ಆದ್ಯತೆಯಾಗಿದ್ದು ಇದನ್ನು 2012-13ನೇ ಸಾಲಿನಲ್ಲಿ ಅದನ್ನು ಮುಂದುವರಿಸಲು ಉದ್ದೇಶಿಸಲಾಗಿದೆ. 2011-12ರಲ್ಲಿ 6321 ಗ್ರಾಮಗಳಲ್ಲಿ ನೀರು ಸರಬರಾಜು ಯೋಜನೆಗಳ ಪೂರ್ಣಗೊಳ್ಳುವಿಕೆ, 447 ಲಕ್ಷ ಮಾನವ ದಿನಗಳ ಸೃಜನೆ, 3,69,000 ಕುಟುಂಬಗಳಿಗೆ ನೈರ್ಮಲ್ಯ ಪ್ರಯೋಜನಗಳ ಲಭ್ಯತೆ ಮತ್ತು 2981 ಕಿ.ಮೀ. ಗ್ರಾಮೀಣ ರಸ್ತೆಗಳ ನಿರ್ಮಾಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

81) ನಾಲ್ಕನೇ ಹಂತದವರೆಗೂ ಅನುಮೋದನೆಗೊಂಡ ಎಲ್ಲಾ ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ಪೂರ್ಣಗೊಳಿಸುವುದರ ಜೊತೆಗೆ, ಈ ಯೋಜನೆಯ ಐದನೇ ಹಂತದಲ್ಲಿ ಹೆಚ್ಚುವರಿ 1000 ಗ್ರಾಮಗಳನ್ನು ತೆಗೆದುಕೊಳ್ಳಲಾಗುವುದು. ಇದಕ್ಕಾಗಿ 400 ಕೋಟಿ ರೂ. ಒಟ್ಟು ಅನುದಾನವನ್ನು ಒದಗಿಸಲಾಗುತ್ತಿದೆ.

82) ಪ್ರತಿ ಗ್ರಾಮೀಣ ಮತಕ್ಷೇತ್ರದ ತಲಾ 20 ಕಿ.ಮೀ. ರಸ್ತೆ ಅಭಿವೃದ್ಧಿಯನ್ನು 2012-13ನೇ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು. ಇದಲ್ಲದೇ, ಪ್ರತಿ ಮತಕ್ಷೇತ್ರದ 30 ಕಿ.ಮೀ. ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಯೋಜನೆಗಳನ್ನು ಈ ವರ್ಷದಲ್ಲಿ ಪ್ರಾರಂಭಿಸಲಾಗುವುದು.

83) 3ನೇ ರಾಜ್ಯ ಹಣಕಾಸು ಆಯೋಗದ ಅನುದಾನಗಳನ್ನು ಬಳಸಿಕೊಂಡು, ಪ್ರತಿ ಗ್ರಾಮ ಪಂಚಾಯಿತಿ ಕಟ್ಟಡಕ್ಕೆ 20 ಲಕ್ಷ ರೂ.ಗಳ ನಿರ್ಮಾಣ ವೆಚ್ಚದಲ್ಲಿ, 282 ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು.

84) 8000 ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿಗಳಿಗೆ ನಿರ್ಬಂಧರಹಿತ ಅನುದಾನಗಳನ್ನು ವಾರ್ಷಿಕ 10 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು. ಪ್ರತಿ ಜಿಲ್ಲಾ ಪಂಚಾಯಿತಿಗೆ 2 ಕೋಟಿ ರೂ. ಮತ್ತು ಪ್ರತಿ ತಾಲ್ಲೂಕು ಪಂಚಾಯಿತಿಗೆ 1 ಕೋಟಿ ರೂ. ನಿರ್ಬಂಧರಹಿತ ಅನುದಾನಗಳನ್ನು ಒದಗಿಸಲಾಗುವುದು.

85) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪ್ರೋತ್ಸಾಹಧನವಾಗಿ 390 ಕೋಟಿ ರೂ. ಕಾರ್ಯದಕ್ಷತೆ ಅನುದಾನಗಳನ್ನು 13ನೇ ಹಣಕಾಸು ಆಯೋಗದ ಅನುದಾನದಿಂದ ನೀಡಲಾಗುವುದು. ಕಾರ್ಯದಕ್ಷತೆಯನ್ನು ವಸ್ತುನಿಷ್ಠವಾಗಿ ಮೌಲ್ಯಮಾಪನ ಮಾಡಲು ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಲಾಗುವುದು.

86) ರಾಯಚೂರು ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾದ ಭೌಗೋಳಿಕ ಮಾಹಿತಿ ವ್ಯವಸ್ಥೆ ಬಳಕೆಯ ಪ್ರಾಯೋಗಿಕ ಯೋಜನೆಯನ್ನು ವಿಸ್ತರಿಸಿ ಎಲ್ಲಾ ಕಾರ್ಯಕ್ರಮದ ಪ್ರಗತಿ ಮತ್ತು ಅಭಿವೃದ್ಧಿ ಅನುಷ್ಠಾನದ ಆನ್‌ಲೈನ್ ಉಸ್ತುವಾರಿ ಮಾಡಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

87) ಕರ್ನಾಟಕ ನಾಗರಿಕ ಸೇವಾ ಖಾತರಿ ಅಧಿನಿಯಮದ ಅನುಷ್ಠಾನಕ್ಕಾಗಿ ಗ್ರಾಮಪಂಚಾಯಿತಿಗಳನ್ನು ಸಮರ್ಥಗೊಳಿಸಲು 13ನೇ ಹಣಕಾಸು ಆಯೋಗದ ಅನುದಾನಗಳನ್ನು ಬಳಸಿಕೊಂಡು ಗ್ರಾಮ ಪಂಚಾಯಿತಿಗಳಲ್ಲಿ ಕಂಪ್ಯೂಟರ್ ವ್ಯವಸ್ಥೆ ಮತ್ತು ನೈಪುಣ್ಯತೆಗಳನ್ನು ಬಲಪಡಿಸಲಾಗುವುದು. ಪಹಣಿ (RTC) ಪತ್ರಿಕೆಗಳ ನೀಡಿಕೆಯಂತಹ ತತ್‌ಕ್ಷಣದ ಸೇವೆಗಳನ್ನು ಸಹ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದೊರೆಯುವಂತೆ ಶಕ್ತಗೊಳಿಸಲಾಗುವುದು.

ಪ್ರದೇಶಾಭಿವೃದ್ಧಿ

88) ಸರ್ಕಾರವು ಸಂವಿಧಾನದ ಕಲಂ 371–ಡಿ ಪ್ರಕಾರ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲು ಬದ್ಧವಾಗಿದೆ. ರಾಜ್ಯದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲು 2012–13ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ 2680 ಕೋಟಿ ರೂ.ಗಳ ಅಂದಾಜು ಒದಗಿಸಲಾಗುತ್ತಿದೆ. ಈ ಕಾರ್ಯಕ್ರಮವನ್ನು

ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೆ ತರಲು ಸಂಬಂಧಿಸಿದ ಕಾರ್ಯ ತಂತ್ರಗಳನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಲಾಗುವುದು. ದೇವದುರ್ಗ ತಾಲ್ಲೂಕಿನಲ್ಲಿ ಸಾಮಾಜಿಕ ಸೂಚಕಗಳು ತುಂಬಾ ಕೆಳಮಟ್ಟದಲ್ಲಿದ್ದು, ಮಕ್ಕಳಲ್ಲಿ ಪೌಷ್ಠಿಕತೆಯ ಕೊರತೆ ತುಂಬಾ ಗಂಭೀರವಾಗಿದೆ. ಈ ಅತೀ ಹಿಂದುಳಿದ ತಾಲ್ಲೂಕಿಗೆ ಹೆಚ್ಚು ಗಮನ ನೀಡುವುದಕ್ಕಾಗಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು.

89) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಗಾಗಿ 300 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಯೋಜನೆಯ ಪರಿಣಾಮಕಾರಿ ಮೇಲ್ವಿಚಾರಣೆಗಾಗಿ ವೆಬ್-ಆಧಾರಿತ ಎಂಐಎಸ್ ಅನ್ನು ರೂಪಿಸಲಾಗಿದೆ.

90) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಹಾಗೂ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕಾಗಿ ಒಟ್ಟು 125 ಕೋಟಿ ರೂಪಾಯಿಗಳ ಅನುದಾನವನ್ನು ಕಲ್ಪಿಸಲಾಗುತ್ತಿದೆ.

ಶಿಕ್ಷಣ

91) ಒಂದು ದಶಕದೊಳಗೆ ಬಹುಮಟ್ಟಿಗೆ ಶೇಕಡಾ 100 ರಷ್ಟು ಪ್ರಾಥಮಿಕ ಶಿಕ್ಷಣಕ್ಕೆ ದಾರಿ ಸುಗಮಗೊಳಿಸಿ, ಈ ಹಿಂದೆ ಶಾಲೆಗಳಿಲ್ಲದ ಮಕ್ಕಳು ಬದಲಾಗಿ ಮಕ್ಕಳಿಲ್ಲದ ಶಾಲೆಗಳು ಎಂಬ ಪರಿಸ್ಥಿತಿ ನಿರ್ಮಾಣ ಆಗಿದೆ. ಮುಂಬರುವ ದಶಕದಲ್ಲಿ ಪರಿಮಾಣಕ್ಕಿಂತ ಹೆಚ್ಚಾಗಿ ಗುಣಮಟ್ಟದ ಬಗ್ಗೆ ಗಮನ ನೀಡಲಾಗುವುದು.

92) ಕರ್ನಾಟಕ ರಾಜ್ಯ ಗುಣಮಟ್ಟದ ಮೌಲ್ಯಮಾಪನ ಮತ್ತು ಮಾನ್ಯತಾ ಪರಿಷತ್ತು ಶಾಲಾ ಶಿಕ್ಷಣದ ಹಂತಗಳಲ್ಲಿ ಕಲಿಕೆಯ ಗುಣಮಟ್ಟದ ಮೌಲ್ಯಮಾಪನ ಮಾಡುವ ಒಂದು ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಧಾರವಾಡದಲ್ಲಿ ಸ್ಥಾಪಿಸಲಾಗಿರುವ ರಾಜ್ಯ ಶಾಲಾ ನಾಯಕತ್ವ ಶಿಕ್ಷಣ ಯೋಜನೆ ಮತ್ತು ನಿರ್ವಹಣಾ ಸಂಸ್ಥೆಯ (ಎಸ್.ಐ.ಎಸ್.ಎಲ್.ಇ.ಪಿ) ಮೂಲಕ ಶಾಲೆ, ಬ್ಲಾಕ್ ಮತ್ತು ಜಿಲ್ಲಾ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕ ಕಾರ್ಯನಿರ್ವಾಹಕರಿಗೆ ಆಡಳಿತ ತರಬೇತಿಯನ್ನು ಒದಗಿಸಲು ಮತ್ತು ಅವರ ನಾಯಕತ್ವ ಕೌಶಲ್ಯವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

93) ಸರ್ಕಾರವು 2012-13ನೇ ಸಾಲಿನಿಂದ ಶಿಕ್ಷಣ ಹಕ್ಕು ಅಧಿನಿಯಮವನ್ನು ಅನುಷ್ಠಾನಗೊಳಿಸಲಿದ್ದು, ಇದಕ್ಕಾಗಿ ಖಾಸಗಿ ಆಡಳಿತವಿರುವ ಶಾಲೆಗಳಿಂದ ಪೂರ್ಣ ಸಹಕಾರವನ್ನು ಕೋರುತ್ತದೆ.

94) ಖಾಸಗಿ ಆಡಳಿತವಿರುವ ಶಾಲೆಗಳ ಬಹುದಿನಗಳ ಬೇಡಿಕೆಯನ್ನು ಈಡೇರಿಸಲು ರಾಜ್ಯ ಸರ್ಕಾರವು ನಿರ್ಧರಿಸಿದೆ. 1994-95 ರವರೆಗೆ ಪ್ರಾರಂಭವಾಗಿರುವ ಮತ್ತು ಮಾನದಂಡಗಳನ್ನು ಪೂರೈಸಿರುವ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಸಹಾಯಾನುದಾನವನ್ನು ನೀಡಲಾಗುವುದು.

95) 2012-13ನೇ ಶೈಕ್ಷಣಿಕ ವರ್ಷದಲ್ಲಿ V ಮತ್ತು VIII ನೇ ತರಗತಿಗಳಿಗೆ ಎನ್.ಸಿ.ಎಫ್-2005 ರಲ್ಲಿ ನಿರ್ದಿಷ್ಟಪಡಿಸಿರುವ ಹತ್ತು ಪ್ರಮುಖ ಅಂಶಗಳನ್ನು ಆಧರಿಸಿರುವ ಹೊಸ ಪಠ್ಯಕ್ರಮ ಮತ್ತು ಪಠ್ಯ ವಿಷಯಗಳನ್ನು ಒಳಗೊಂಡಿರುವ ಹೊಸ ಪಠ್ಯಪುಸ್ತಕಗಳನ್ನು ಪರಿಚಯಿಸಲಿದೆ. 2012-13ನೇ ಸಾಲಿನಿಂದ + 2 ಹಂತದಲ್ಲಿ ವಿಜ್ಞಾನ ವಿಷಯಗಳಲ್ಲಿ ಎನ್.ಸಿ.ಇ.ಆರ್.ಟಿ. ಯವರು ಸಿದ್ಧಪಡಿಸಿರುವ ಪಠ್ಯಪುಸ್ತಕಗಳನ್ನು ಅಳವಡಿಸಿಕೊಳ್ಳಲಾಗುವುದು.

96) ಪ್ರತಿ ಬ್ಲಾಕ್‌ನಲ್ಲಿ ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. (Xನೇ ತರಗತಿ) ಪರೀಕ್ಷೆಯಲ್ಲಿ ಪ್ರಪ್ರಥಮ ಸ್ಥಾನದಲ್ಲಿರುವ ಮೂರು ವಿದ್ಯಾರ್ಥಿಗಳಿಗೆ ಕಂಪ್ಯೂಟರ್‌ಗಳನ್ನು ನೀಡಲಾಗುವುದು. ಹಾಗೆಯೇ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕ್ಷೇತ್ರದಲ್ಲಿ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪುರಸ್ಕರಿಸಲಾಗುವುದು.

97) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಆರ್ಥಿಕ ನೆರವನ್ನು 2 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

ಉನ್ನತ ಶಿಕ್ಷಣ

98) ಕರ್ನಾಟಕ ರಾಜ್ಯವನ್ನು ಭಾರತ ದೇಶ ಜ್ಞಾನ ರಾಜಧಾನಿ ಹಾಗೂ ಶೈಕ್ಷಣಿಕ ಔನ್ನತ್ಯದ ಜಾಗತಿಕ ಕೇಂದ್ರವನ್ನಾಗಿ ಪರಿವರ್ತಿಸಲು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೀರ್ಘಕಾಲೀನ ಸಮಗ್ರ ಕಾರ್ಯನೀತಿಯೊಂದನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಕರ್ನಾಟಕ ಜ್ಞಾನ ಆಯೋಗ ಮತ್ತು ಉನ್ನತ ಶಿಕ್ಷಣ ಪರಿಷತ್ತಿನ ಸಹಕಾರದೊಂದಿಗೆ ಈ ಕಾರ್ಯನೀತಿಯನ್ನು ಅಭಿವೃದ್ಧಿಪಡಿಸಲಾಗುವುದು.

99) ಉನ್ನತ ಶಿಕ್ಷಣದಲ್ಲಿ ಆಡಳಿತ ಮತ್ತು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಕೇಂದ್ರ ಕಚೇರಿಯಲ್ಲಿ ಮತ್ತು ಎಲ್ಲಾ ಕಾಲೇಜುಗಳಲ್ಲಿ ಗುಣಮಟ್ಟ ಕೋಶವನ್ನು ಹಾಗೂ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಬೋಧಕರಲ್ಲಿ ಬೋಧನಾ ಸಾಮರ್ಥ್ಯ ಹೆಚ್ಚಿಸಲು ಸಾಮರ್ಥ್ಯ ಬಲವರ್ಧನಾ ಕೋಶವನ್ನು ಪ್ರಾರಂಭಿಸಲಾಗುವುದು.

100) ಅನಗತ್ಯ ಕೋರ್ಸ್‌ಗಳನ್ನು ಹಾಗೂ ಸಂಯೋಜನೆಗಳನ್ನು ತೆಗೆದು ಹೊಸ ಅಗತ್ಯಾಧಾರಿತ ಕೋರ್ಸ್‌ಗಳನ್ನು ಹಾಗೂ ಸಂಯೋಜನೆಗಳನ್ನು ಪ್ರಾರಂಭಿಸಲಾಗುವುದು.

101) ಜನಪದ ವಿಶ್ವವಿದ್ಯಾನಿಲಯಕ್ಕೆ 7.5 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

102) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜೈನ ವಿದ್ಯಾಪೀಠವನ್ನು ಸ್ಥಾಪಿಸಲಿದ್ದು, ಈ ಉದ್ದೇಶಕ್ಕಾಗಿ 1 ಕೋಟಿ ರೂ.ಗಳ ನೆರವು ನೀಡಲಾಗುವುದು.

ಆರೋಗ್ಯ

103) ರಾಜ್ಯದ ಜನರಿಗೆ ಸಮಗ್ರವಾಗಿರುವ, ನಿವಾರಣಾ ರೂಪದ, ಉತ್ತೇಜಕವಾದ, ಗುಣಪಡಿಸುವ ಮತ್ತು ಪುನಃಶ್ಚೇತನಗೊಳಿಸುವ ಆರೋಗ್ಯ ಪಾಲನೆಯನ್ನು ಒದಗಿಸುವುದು ಸರ್ಕಾರದ ಆದ್ಯತಾ ಕ್ಷೇತ್ರಗಳಲ್ಲಿ ಒಂದು.

104) 'ಮಡಿಲು', 'ಪ್ರಸೂತಿ ಆರೈಕೆ'. 'ತಾಯಿ ಭಾಗ್ಯ' ಮುಂತಾದ ನವೀನ ಕಾರ್ಯಕ್ರಮಗಳ ಅನುಷ್ಠಾನವು ಒಂದು ಸಾವಿರ ಜೀವಂತ ಜನನಗಳಲ್ಲಿ ಶಿಶು ಮರಣದ ಪ್ರಮಾಣವನ್ನು 38 ಕ್ಕೆ ಮತ್ತು ಒಂದು ಲಕ್ಷ ಜೀವಂತ ಜನನಗಳಲ್ಲಿ ತಾಯಂದಿರ ಮರಣದ ಪ್ರಮಾಣವನ್ನು 178 ಕ್ಕೆ ತಗ್ಗಿಸಲು ನೆರವಾಗಿದೆ. ಈ ಮಾನದಂಡಗಳ ರಾಷ್ಟ್ರೀಯ ಸರಾಸರಿ ಅನುಕ್ರಮವಾಗಿ 47 ಮತ್ತು 212.

105) ಶಿಶು ಮರಣದ ಪ್ರಮಾಣವು ಅತಿ ಸಂವೇದನಾ ಸೂಚಕವಾಗಿದ್ದು, ಅದು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದ ಜನರ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಪ್ರತಿಬಿಂಬಿಸುತ್ತದೆ. ನಿರ್ದಿಷ್ಟ ವರದಿ ಮಾಡುವ ಆಶಾ ಕಾರ್ಯಕರ್ತೆಯರಿಗೆ ಪ್ರತಿಯೊಂದು ಪ್ರಕರಣಕ್ಕೆ 500 ರೂ.ಗಳನ್ನು ನೀಡಲಾಗುವುದು.

106) ಕಬ್ಬಿಣ ಮತ್ತು ಅಯೋಡಿನ್ ಅಂಶಗಳ ಕೊರತೆಯ ಸಮಸ್ಯೆಯನ್ನು ತಗ್ಗಿಸುವ ದೃಷ್ಟಿಯಿಂದ, ಗರ್ಭಿಣಿಯರಿಗೆ ಮತ್ತು ಹಾಲುಣಿಸುವ ತಾಯಂದಿರಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ದುಪ್ಪಟ್ಟು ಶಕ್ತಿವರ್ಧಕ ಉಪ್ಪನ್ನು ಉಚಿತವಾಗಿ ಒದಗಿಸಲಾಗುವುದು. ಐ.ಸಿ.ಡಿ.ಎಸ್. ಮತ್ತು ಶಾಲೆಗಳಲ್ಲಿನ ಮಧ್ಯಾಹ್ನದ ಬಿಸಿಯೂಟ ಮುಂತಾದ ರಾಜ್ಯ ಸರ್ಕಾರದ ಎಲ್ಲಾ ಆಹಾರ ಮತ್ತು ಪೌಷ್ಟಿಕಾಂಶ ಕಾರ್ಯಕ್ರಮಗಳಲ್ಲಿ ಈ ದುಪ್ಪಟ್ಟು ಶಕ್ತಿವರ್ಧಕ ಉಪ್ಪನ್ನು ಬಳಸಲಾಗುವುದು.

107) ಮಲೇರಿಯಾ, ಡೆಂಗ್ಯೂ, ಚಿಕನ್‌ಗುನ್ಯಾಗಳಂತ ಸೂಕ್ಷ್ಮ ಜೀವಿಗಳಿಂದ ಹರಡುವ ರೋಗಗಳು ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈಗ ಗಣನೀಯವಾಗಿ ಕಡಿಮೆಯಾಗಿದೆ. 2011ನೇ ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಮಲೇರಿಯಾ ಕಾರಣದಿಂದಾಗಿ ಯಾವುದೇ ಸಾವು ಸಂಭವಿಸಿದ ಬಗ್ಗೆ ವರದಿಯಾಗಿಲ್ಲ.

108) ಗುಲ್ಬರ್ಗಾ ಮತ್ತು ಬೆಳಗಾವಿ ರೆವಿನ್ಯೂ ವಿಭಾಗಗಳ 13 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿರುವ ವಾಜಪೇಯಿ ಆರೋಗ್ಯಶ್ರೀ ಯೋಜನೆಗೆ ಸಾರ್ವಜನಿಕರಿಂದ ವ್ಯಾಪಕವಾದ ಪ್ರಶಂಸೆ ವ್ಯಕ್ತವಾಗಿದೆ. ಇದುವರೆಗೆ ಫಲಾನುಭವಿಗಳಿಗೆ 102 ಕೋಟಿ ರೂ.ಗಳ ವೆಚ್ಚದಲ್ಲಿ ಚಿಕಿತ್ಸೆ ನೀಡಲಾಗಿದೆ. 2012-13ನೇ ಸಾಲಿನಲ್ಲಿ, ಈ ಯೋಜನೆಯನ್ನು ಇಡಿ ರಾಜ್ಯಕ್ಕೆ ಅನ್ವಯವಾಗುವಂತೆ ಇತರ ಎರಡು ರೆವಿನ್ಯೂ ವಿಭಾಗಗಳಿಗೂ ವಿಸ್ತರಿಸ ಲಾಗುವುದು.

109) 2012-13ನೇ ಸಾಲಿನಲ್ಲಿ ಆರೋಗ್ಯ ಮಾಹಿತಿ ಸಹಾಯವಾಣಿ ಕೇಂದ್ರವನ್ನು (ಎಚ್.ಐ.ಎಚ್.ಎಲ್.) ಸ್ಥಾಪಿಸಲಾಗುವುದು. ವೈದ್ಯಕೀಯ ಸಲಹೆ ಅಥವಾ ಆರೋಗ್ಯಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಪಡೆಯಲು ಇಚ್ಛಿಸುವ ಯಾವುದೇ ವ್ಯಕ್ತಿಯು ಉಚಿತ ದೂರವಾಣಿ ಸಂಖ್ಯೆಗೆ ಕರೆ ಮಾಡಬಹುದಾಗಿದೆ.

110) ಎಂ.ಬಿ.ಬಿ.ಎಸ್. ಸ್ನಾತಕಪೂರ್ವ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರರು, ಅವರ ಕೋರ್ಸ್‌ನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ತರುವಾಯ, ಕೂಡಲೇ ಗ್ರಾಮೀಣ ಪ್ರದೇಶಗಳಲ್ಲಿ ಒಂದು ವರ್ಷ ಸೇವೆ ಸಲ್ಲಿಸುವುದನ್ನು ಕಡ್ಡಾಯಗೊಳಿಸುವ ಒಂದು ಶಾಸನವನ್ನು ರಚಿಸಲಿದೆ.

ಆ ತರುವಾಯ ಮಾತ್ರವೇ ಅವರು ಕರ್ನಾಟಕ ವೈದ್ಯಕೀಯ ಪರಿಷತ್‌ನಲ್ಲಿ ಖಾಯಂ ನೋಂದಣಿ ಆಗುವುದಕ್ಕೆ ಅರ್ಹರಾಗುತ್ತಾರೆ.

111) ಸರ್ಕಾರಿ ಕಾಲೇಜುಗಳಲ್ಲಿ ರಿಯಾಯಿತಿ ಸೀಟುಗಳನ್ನು ಮತ್ತು ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಸೀಟುಗಳನ್ನು ಪಡೆದಿರುವ ಎಂ.ಬಿ.ಬಿ.ಎಸ್. ಮತ್ತು ಸ್ನಾತಕೋತ್ತರ ಅಭ್ಯರ್ಥಿಗಳು ಸಂಬಂಧಪಟ್ಟ ನಿಯಮಗಳಲ್ಲಿ ಗೊತ್ತುಪಡಿಸಲಾದಂತೆ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ತರುವಾಯ ಸರ್ಕಾರಿ ಸೇವೆ ನಿರ್ವಹಿಸಲು ತಪ್ಪಿದರೆ ಅವರಿಗೆ ವಿಧಿಸಲಾಗುವ ದಂಡದ ದರಗಳನ್ನು ಹೆಚ್ಚಿಸಲೂ ಸಹ ಪ್ರಸ್ತಾಪಿಸಲಾಗಿದೆ.

112) ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಹಂತ ಹಂತವಾಗಿ ಆಯುಷ್ ಘಟಕಗಳನ್ನು ಸ್ಥಾಪಿಸಲಾಗುವುದು. 2012-13ನೇ ಸಾಲಿನ ಅವಧಿಯಲ್ಲಿ 15 ಅಂತಹ ಘಟಕಗಳನ್ನು ಪ್ರಾರಂಭಿಸಲಾಗುವುದು. ಆಯುಷ್ ಔಷಧಗಳ ಉತ್ಪಾದನೆಗಾಗಿ ಹೊಸ ಘಟಕಗಳನ್ನು ಸ್ಥಾಪಿಸಲು ಒಂದು ಬಾರಿಯ ಬಂಡವಾಳ ಹೂಡಿಕೆ ಪ್ರೋತ್ಸಾಹವನ್ನು ನೀಡಲಾಗುವುದು.

113) ಔಷಧಿ ವಿಷಯದ ಅಭಿವೃದ್ಧಿಗಾಗಿ ಒಂದು ಪ್ರತ್ಯೇಕವಾದ ಸಮಗ್ರ ನೀತಿಯನ್ನು ರೂಪಿಸಲಾಗುವುದು.

114) ಎಚ್.ಐ.ವಿ. ಯೊಂದಿಗೆ ಬದುಕುತ್ತಿರುವ ಸುಮಾರು 65,000 ಜನರು ಪ್ರತಿ ತಿಂಗಳು ಉಚಿತವಾಗಿ ಎ.ಆರ್.ಟಿ. ವೈದ್ಯಕೀಯ ಸೇವೆಗಳ ಪ್ರಯೋಜನ ಪಡೆಯುತ್ತಿದ್ದಾರೆ. ಅವರಲ್ಲಿ ಪ್ರಯಾಣ ವೆಚ್ಚಗಳನ್ನು ಭರಿಸಲಾಗದ ಅನೇಕ ಬಡ ರೋಗಿಗಳು ಈ ಸೌಲಭ್ಯಗಳನ್ನು ಪಡೆಯಲಾಗದೆ, ಏಡ್ಸ್‌ನ ಗಂಭೀರ ಸ್ಥಿತಿಗೆ ತಲುಪುತ್ತಾರೆ. ರಾಜ್ಯ ಸರ್ಕಾರವು ಇನ್ನು ಮುಂದೆ ಅವರ ಪ್ರಯಾಣ ವೆಚ್ಚಗಳನ್ನು ಭರಿಸಲಿದೆ.

115) ಎನ್.ಎ.ಸಿ.ಒ. ಮಾರ್ಗಸೂಚಿಯ ಅಡಿಯಲ್ಲಿ ಜಾಗತಿಕ ಸಂಸ್ಥೆಗಳ ಪಾಲನೆ ಮತ್ತು ಬೆಂಬಲ ವ್ಯವಸ್ಥೆಯನ್ನು ಬಲಪಡಿಸಲು ಹದಿಮೂರು ಜಿಲ್ಲೆಗಳಲ್ಲಿ 'ಸಂಪರ್ಕ ಕಾರ್ಯಕರ್ತ ಯೋಜನೆ' ಯನ್ನು ಕೈಗೊಳ್ಳಲಾಗಿದ್ದು, ಈ ಯೋಜನೆ ಮಾರ್ಚ್ 2012ರಲ್ಲಿ ಕೊನೆಗೊಳ್ಳುತ್ತದೆ. ನ್ಯಾಕೊ ಸಂಸ್ಥೆಯು ಹಂತ ಹಂತವಾಗಿ ವಹಿಸಿಕೊಳ್ಳುವವರೆಗೆ ರಾಜ್ಯ ಸರ್ಕಾರವು ಈ ಕಾರ್ಯಕ್ರಮವನ್ನು ಬೆಂಬಲಿಸುವುದು.

116) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವಲಯದ ವೆಚ್ಚವನ್ನು 3391 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗುತ್ತಿದೆ.

ವೈದ್ಯಕೀಯ ಶಿಕ್ಷಣ

117) ಸರ್ಕಾರಿ ವೈದ್ಯಕಿಯ ಕಾಲೇಜುಗಳಲ್ಲಿನ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಲು ರಾಜ್ಯ ಸರ್ಕಾರವು ಭಾರತ ಸರ್ಕಾರದ ಅನುಮೋದನೆಯನ್ನು ಕೋರಿದೆ. ಗುರುತಿಸಲ್ಪಟ್ಟ ರಾಜ್ಯ ಮಟ್ಟದ ಸ್ವಾಯತ್ತ ಸಂಸ್ಥೆಗಳನ್ನು ರಾಷ್ಟ್ರ ಮಟ್ಟದ ಸಂಸ್ಥೆಗಳಾಗಿ ಉನ್ನತೀಕರಿಸುವಂತೆ ಕೊರಲಾಗಿದೆ. ಇದಕ್ಕೆ 2012-13ನೇ ಸಾಲಿನಲ್ಲಿ ಅನುಮೋದನೆ ದೊರೆಯುವುದೆಂಬ ವಿಶ್ವಾಸವಿದೆ. ಈ ಕಾಲೇಜುಗಳು ಮತ್ತು ಸಂಸ್ಥೆಗಳಲ್ಲಿನ ಮೂಲ ಸೌಲಭ್ಯಗಳನ್ನು ಉನ್ನತೀ ಕರಿಸುವ ಹಾಗೂ ಇನ್ನಿತರ ವೆಚ್ಚಗಳ ರಾಜ್ಯದ ಪಾಲನ್ನು ಒದಗಿಸಲಾಗುವುದು.

118) ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಸಂಪೂರ್ಣ ಸುಸಜ್ಜಿತ ಘಟಕವನ್ನು ಮೈಸೂರಿನಲ್ಲಿ ಸ್ಥಾಪಿಸಲಾಗುವುದು. ಈ ಕಾರ್ಯವನ್ನು ಪ್ರಾರಂಭಿಸಲು 5 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತಿದೆ.

ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ

119) ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ 4.5 ಲಕ್ಷ ನಿರುದ್ಯೋಗಿ ಯುವಕರಿಗೆ 2012-13ರಲ್ಲಿ ಕೌಶಲ್ಯ ಆಧಾರಿತ ತರಬೇತಿ ನೀಡುವ ಮೂಲಕ ಅವರನ್ನು ಉದ್ಯಮಶೀಲರು ಹಾಗೂ ಉದ್ಯೋಗಾರ್ಹರನ್ನಾಗಿ ಮಾಡುವ ಗುರಿಯನ್ನು ರಾಜ್ಯ ಸರ್ಕಾರವು ಹೊಂದಿದೆ.

120) ಜರ್ಮನ್ ಸರ್ಕಾರಿ ಸಂಸ್ಥೆಯಾದ ಜಿಐಝಡ್-ಐಎಸ್‌ನ ತಾಂತ್ರಿಕ ನೆರವಿನೊಂದಿಗೆ ಮತ್ತು ಭಾರತ ಸರ್ಕಾರದ ಅಂಶಿಕ ನೆರವಿನೊಂದಿಗೆ 84 ಕೋಟಿ ರೂ.ಗಳ ವೆಚ್ಚದಲ್ಲಿ ಉನ್ನತ ತಂತ್ರಜ್ಞಾನ ಬಹುವಿಧ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಬೆಂಗಳೂರು ಮತ್ತು ಗುಲ್ಬರ್ಗಾಗಳಲ್ಲಿ ಸ್ಥಾಪಿಸಲಾಗುತ್ತಿದ್ದು, ಇವುಗಳನ್ನು 2012-13ನೇ ಸಾಲಿನಲ್ಲಿ ಸಂಪೂರ್ಣವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು. ಕರ್ನಾಟಕದ ಮಂಗಳೂರು ಮತ್ತು ಬೆಳಗಾವಿಯಲ್ಲಿ ಮತ್ತೆರಡು ಕೇಂದ್ರಗಳನ್ನು ಮಂಜೂರು ಮಾಡಿ ಅಂಶಿಕ ಅನುದಾನವನ್ನು ನೀಡುವಂತೆ ಭಾರತ ಸರ್ಕಾರವನ್ನು ಮತ್ತು ಜರ್ಮನ್ ಸಂಸ್ಥೆಯನ್ನು ಕೋರಲಾಗುವುದು.

121) ವಾರ್ಷಿಕ 1062 ತರಬೇತಿ ನಿರತರಿಗೆ ಪ್ರವೇಶ ಕಲ್ಪಿಸುವ ಸರ್ಕಾರಿ ಸಾಧನ ಕೊಠಡಿ ಮತ್ತು ತರಬೇತಿ ಕೇಂದ್ರಗಳು (Government Tool Rooms and Training Centres), ರಾಜ್ಯದಲ್ಲಿನ ಉತ್ಪಾದನೆ ಆಧಾರಿತ ಉದ್ದಿಮೆಗಳಿಗೆ ಶ್ರೇಷ್ಠ ಕುಶಲಕರ್ಮಿಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಇಂತಹ 17 ಕೇಂದ್ರಗಳಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ಅಳವಡಿಸುವುದರೊಡನೆ ಈ ಕೇಂದ್ರಗಳಲ್ಲಿನ ಮೂಲ ಸೌಲಭ್ಯಗಳನ್ನು ಉನ್ನತ ಶ್ರೇಣಿಗೇರಿಸುವ 80 ಕೋಟಿ ರೂ.ಗಳ ಯೋಜನೆಯು 2012-13ನೇ ಸಾಲಿನಲ್ಲಿ ಪೂರ್ಣ ಗೊಳ್ಳಲಿದೆ.

122) ಎನ್.ಪಿ.ಎಸ್. ಲೈಟ್ ಸ್ವಾವಲಂಬನೆ ಪಿಂಚಣಿ ಸೌಲಭ್ಯ ಯೋಜನೆಯನ್ನು ಈಗಾಗಲೇ ಇರುವ 7 ಅಸಂಘಟಿತ ವಲಯಗಳೊಡನೆ ಮೀನುಗಾರರು, ಬೀಡಿ ಕಾರ್ಮಿಕರು, ನೈರ್ಮಲ್ಯ ಕೆಲಸಗಾರರು, ನಾಪಿತರು, ಭದ್ರತಾ ಕೆಲಸಗಾರರು, ಬೀದಿ ವ್ಯಾಪರಿಗಳು, ರೇಷ್ಮೆ ಕೆಲಸಗಾರರು ಮತ್ತಿತರ 32 ಅಸಂಘಟಿತ ವಲಯಗಳ ಕಾರ್ಮಿಕರಿಗೂ ವಿಸ್ತರಿಸಲಾಗುವುದು.

123) ಅಸಂಘಟಿತ ವಲಯದ 20 ಲಕ್ಷ ಕಾರ್ಮಿಕರನ್ನು ಜನಶ್ರೀ ವಿಮಾ ಯೋಜನೆಯಲ್ಲಿ ತೊಡಗಿಸಿ ಸಹಜ ಹಾಗೂ ಆಕಸ್ಮಿಕ ಮರಣ, ಅಪಘಾತದಿಂದ ಉಂಟಾಗುವ ಶಾಶ್ವತ ಅಂಗವಿಕಲತೆ ಇಂತಹ ಸಂದರ್ಭ ಗಳಲ್ಲಿ ಅವರುಗಳಿಗೆ ಉಚಿತ ವಿಮಾ ಸೌಲಭ್ಯವನ್ನು ಕಲ್ಪಿಸುವ ಹಾಗೂ ಶೈಕ್ಷಣಿಕ ವಿದ್ಯಾರ್ಥಿವೇತನವನ್ನು ಒದಗಿಸುವ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಸಹಯೋಗದೊಂದಿಗೆ ಕೈಗೊಳ್ಳಲಾಗುವುದು. ಇದರಲ್ಲಿ ತೊಡಗಿಸಬೇಕಾದ ಪ್ರತಿ ಫಲಾನುಭವಿಯ ಪ್ರೀಮಿಯಂ ಮೊತ್ತ 100 ರೂ.ಗಳ ವೆಚ್ಚವನ್ನು ಸರ್ಕಾರವೇ ಭರಿಸಲಿದೆ. ಈ ಯೋಜನೆಯನ್ನು ಜಾರಿಗೊಳಿಸಲು 20 ಕೋಟಿ ರೂ.ಗಳನ್ನು ಒಂಚಿಕೆ ಮಾಡಲಾಗುವುದು.

124) ಕಾರ್ಮಿಕ ಇಲಾಖೆ ಹಾಗೂ ಕಾರ್ಖಾನೆಗಳು ಮತ್ತು ಬಾಯ್ಲರುಗಳ ಇಲಾಖೆ ಜಾರಿಗೊಳಿಸಿದ 10 ಪ್ರಮುಖ ಕಾನೂನುಗಳ ಅಡಿಯಲ್ಲಿನ ಸೇವೆಗಳನ್ನು ಪಡೆದುಕೊಳ್ಳುವುದಕ್ಕಾಗಿ ನಾಗರೀಕ ಸಮಯ, ಹಣ ಮತ್ತು ಪ್ರಯತ್ನಗಳನ್ನು ಕಡಿಮೆಗೊಳಿಸಲು ಈ ಕಾನೂನುಗಳನ್ನು ಆನ್‌ಲೈನ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗುವುದು. ಈ 'ಕಾರ್ಮಿಕ'

ಗಣಕೀಕೃತ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕಾಗಿ 5 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

125) ಕೌಶಲ್ಯ ಅಭಿವೃದ್ಧಿ ಮತ್ತು ಕಾರ್ಮಿಕ ಕಲ್ಯಾಣಕ್ಕಾಗಿ ಒಟ್ಟು 554 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುವುದು.

ಸಮಾಜ ಕಲ್ಯಾಣ

126) ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಒಟ್ಟು ವೆಚ್ಚವನ್ನು ರೂ.7200 ಕೋಟಿಗಳಿಗೆ ಹೆಚ್ಚಿಸಲಾಗಿದೆ. ಈ ಒಟ್ಟು ವೆಚ್ಚದಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಶಕ್ಕೆ ನೀಡುವ ರಾಶಿ ಮೊತ್ತವನ್ನು 1250 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

127) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮಗಳು 2005–06ನೇ ಸಾಲಿನವರೆಗೆ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳಿಗೆ ಒದಗಿಸಿರುವ ಹಾಗೂ ಇದುವರೆವಿಗೆ ಮರುಪಾವತಿಯಾಗದೇ ಉಳಿದಿರುವ 25000 ರೂ. ವರೆಗಿನ ಸಾಲ ಹಾಗೂ ಬಡ್ಡಿಯನ್ನು ಮನ್ನಾ ಮಾಡಲಾಗುವುದು. ಕೃಷಿಯೇತರ ಉದ್ದೇಶಗಳಿಗೆ 2005–06ನೇ ಸಾಲಿನವರೆಗೆ ಒದಗಿಸಲಾದ ಸಾಲದ ಬಾಕಿ ಅಸಲನ್ನು ಒಂದು ವರ್ಷದೊಳಗಾಗಿ ಮರುಪಾವತಿ ಮಾಡಿದಲ್ಲಿ, ಬಡ್ಡಿಯನ್ನು ಮನ್ನಾ ಮಾಡಲಾಗುವುದು.

128) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗಾಗಿ ಖರೀದಿಸಲಾಗುವ ಜಮೀನಿನ ಆರ್ಥಿಕ ಮಿತಿಯನ್ನು 5 ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

129) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮಕ್ಕಳ ಶಿಕ್ಷಣಕ್ಕೆ ಅಟಲ್ ಬಿಹಾರಿ ವಾಜಪೇಯಿ ಮಾದರಿ ವಸತಿ ಶಾಲೆಯನ್ನು ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಎರಡರಂತೆ 8 ಶಾಲೆಗಳನ್ನು ಪ್ರತಿ ಶಾಲೆಗೆ 10 ಕೋಟಿ ರೂ.ಗಳ ಅನುದಾನದೊಂದಿಗೆ ಆರಂಭಿಸಲಾಗುವುದು.

130) ಸಫಾಯಿ ಕರ್ಮಚಾರಿಗಳ ಸಮಗ್ರ ಅಭಿವೃದ್ಧಿಗಾಗಿ ಸಫಾಯಿ ಕರ್ಮಚಾರಿ ಆಯೋಗ ರಚನೆ ಮಾಡಲಾಗುವುದು.

131) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳ ಕಾರ್ಯಕ್ಷಮತೆಯನ್ನು ಉತ್ತಮ ಪಡಿಸಲು ಮತ್ತು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಸಂಬಂಧಿಸಿದ ಸರ್ಕಾರದ ಯೋಜನೆ ಮತ್ತು ಕಾರ್ಯಕ್ರಮಗಳ ಸಾಮರ್ಥ್ಯವನ್ನು ಹೆಚ್ಚು ಮಾಡುವ ಬಗ್ಗೆ ಆರು ತಿಂಗಳೊಳಗೆ ವರದಿ ನೀಡಲು ಒಂದು ತಜ್ಞರ ಸಮಿತಿಯನ್ನು ರಚಿಸಲಾಗುವುದು.

132) ಪರಿಶಿಷ್ಟ ಜಾತಿ ಪಂಗಡಗಳ ಅಭಿವೃದ್ಧಿಗೆ ಅನುದಾನ: ಶ್ರೀ ಚಲವಾದಿ, ಶ್ರೀ ಆದಿಜಾಂಬವ, ಶ್ರೀ ಮಹರ್ಷಿ ವಾಲ್ಮೀಕಿ, ಶ್ರೀ ಮಾದಾರ ಚೆನ್ನಯ್ಯ, ಶ್ರೀ ಸಿದ್ಧರಾಮೇಶ್ವರ ಸ್ವಾಮಿ ಭೋವಿ, ಶ್ರೀ ಕೇತೇಶ್ವರ ಮೇದಾರ ಇತ್ಯಾದಿ ಸಮುದಾಯಗಳ ಕ್ಷೇಮಾಭಿವೃದ್ಧಿ ಮತ್ತು ಗುರುಪೀಠಗಳ ಶೈಕ್ಷಣಿಕ ಮೂಲಭೂತ ಸೌಕರ್ಯ ಒದಗಿಸಲು 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಹಿಂದುಳಿದ ವರ್ಗಗಳ ಅಭಿವೃದ್ಧಿ

133) ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ 2011-12ನೇ ಸಾಲಿನಲ್ಲಿ ನಿಗದಿಪಡಿಸಲಾಗಿದ್ದ 760 ಕೋಟಿ ರೂ.ಗಳ ಒಟ್ಟು ವೆಚ್ಚವನ್ನು 2012-13ನೇ ಸಾಲಿನಲ್ಲಿ 1000 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಇಷ್ಟು ಬೃಹತ್ ಮೊತ್ತವನ್ನು ನಿಗದಿಪಡಿಸಿರುವುದು ಇದು ಮೊದಲನೇ ಬಾರಿಯಾಗಿದೆ.

134) ಹಿಂದುಳಿದ ವರ್ಗಗಳ ಗಂಗಾಕಲ್ಯಾಣ ಯೋಜನೆಗಾಗಿ 95 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಈಗಾಗಲೇ ಕೊರೆಯಲಾಗಿರುವ 7290 ಬೋರ್‌ವೆಲ್‌ಗಳ ವಿದ್ಯುದ್ದೀಕರಣಕ್ಕೆ ಒತ್ತು ನೀಡಲಾಗುವುದು.

135) ಈ ಸಾಲಿನಲ್ಲಿ 80 ಕೋಟಿ ರೂ.ಗಳ ಹೂಡಿಕೆಯೊಂದಿಗೆ 80 ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳನ್ನು ಪೂರ್ಣಗೊಳಿಸಲಾಗುವುದು.

136) ತಲಾ 100 ವಿದ್ಯಾರ್ಥಿಗಳ ಸಾಮರ್ಥ್ಯವುಳ್ಳ 50 ನೂತನ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಾಗುವುದು ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಾಸ್ಟೆಲ್‌ಗಳ ಒಟ್ಟು ಸಾಮರ್ಥ್ಯವನ್ನು ಇನ್ನು 5000 ವಿದ್ಯಾರ್ಥಿಗಳಿಗೆ ಅವಕಾಶವಾಗುವಂತೆ ಹೆಚ್ಚಿಸಲಾಗುವುದು. ಈ ಕ್ರಮದಿಂದ ಒಟ್ಟು 10,000 ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸೌಲಭ್ಯಗಳನ್ನು ಒದಗಿಸಿದಂತಾಗುತ್ತದೆ.

137) ಈಗ ನಿರ್ಮಾಣ ಹಂತದಲ್ಲಿರುವ 35 ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 15 ಮಂಜೂರಾದ ಶಾಲೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹಿಂದುಳಿದ ವರ್ಗಗಳಿಗಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ಮಾಣಕ್ಕಾಗಿ ಅನುದಾನವನ್ನು 100 ಕೋಟಿ ರೂ.ಗಳಿಗೆ ಹೆಚ್ಚಿಸಲಾಗುವುದು.

138) ಹಿಂದುಳಿದ ವರ್ಗದ ವಿದ್ಯಾರ್ಥಿ ನಿಲಯಗಳ ಕ್ಷೇಮಾಭಿ ವೃದ್ಧಿಗಾಗಿ ವಿಶೇಷವಾಗಿ ನಾಲ್ಕು ಅಟಲ್ ಬಿಹಾರಿ ವಾಜಪೇಯಿ ಮಾದರಿ ವಸತಿ ಶಾಲೆಗಳನ್ನು ಪ್ರತಿ ಕಂದಾಯ ವಿಭಾಗಗಳಲ್ಲಿ ಆರಂಭಿಸಲಾಗುವುದು.

139) ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು 5 ರಿಂದ 7ನೇ ತರಗತಿಯವರೆಗೆ 75 ರೂ.ಗಳಿಂದ 25 ರೂ.ಗಳಿಗೆ ಹಾಗೂ 8 ರಿಂದ 10ನೇ ತರಗತಿಯವರೆಗೆ 100 ರೂ.ಗಳಿಂದ 500 ರೂ.ಗಳಿಗೆ ಹೆಚ್ಚಿಸಲಾಗಿದೆ. ಬಾಲಕಿಯರಿಗೆ ವಾರ್ಷಿಕ ವಿದ್ಯಾರ್ಥಿ ವೇತನವನ್ನು 100 ರೂ.ಗಳಿಂದ 600 ರೂ.ಗಳಿಗೆ ಹೆಚ್ಚಿಸಲಾಗಿದೆ. ಈ ವಿದ್ಯಾರ್ಥಿ ವೇತನ ಪಡೆಯಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು 44,500 ರೂ.ಗಳಿಗೆ ನಿಗದಿಪಡಿಸಲಾಗಿದೆ.

140) ಹಿಂದುಳಿದ ವರ್ಗಗಳಿಗೆ ಅನುದಾನ : ಹಿಂದುಳಿದ ವರ್ಗಗಳ ಸಮುದಾಯಗಳಾದ ಕಮ್ಮಾರ, ಸವಿತಾ ಸಮಾಜ, ಗಾಣಿಗ ಸಮಾಜ, ಮಡಿವಾಳ ಸಮಾಜ (ಅಗಸ), ನೇಕಾರ, ಕುಂಬಾರ, ಬಡಗಿ ವಿಶ್ವಕರ್ಮ, ದರ್ಜಿ, ಕುರುಬ, ಉಪ್ಪಾರ, ಬಲಿಜ (ಕೈವಾರ ಶ್ರೀ ತಾತಯ್ಯ ಕ್ಷೇತ್ರ), ದೇವಾಂಗ, ವಹ್ನಿಕುಲ, ವೇಮನ(ರೆಡ್ಡಿ) ಸಂಸ್ಥಾನ, ಆರ್ಯ ಈಡಿಗ, ರಾಜು ಕ್ಷತ್ರಿಯ, ಮರಾಠ ಕ್ಷತ್ರಿಯ, ತೊಗಟವೀರ, ಪದ್ಮಸಾಲಿ, ಗಂಗಾಮತಸ್ಥರು, ಕುಂಚಟಿಗ, ಹೆಳವ, ಯಾದವ (ಗೊಲ್ಲ), ಇತ್ಯಾದಿ ಸಮುದಾಯಗಳ ವಿಶೇಷ ಅಭಿವೃದ್ಧಿಗೆ ಹಾಗೂ ಗುರುಪೀಠಗಳ ಶೈಕ್ಷಣಿಕ ಮೂಲಭೂತ ಸೌಕರ್ಯಕ್ಕಾಗಿ 75 ಕೋಟಿ ರೂ.ಗಳನ್ನು ನೀಡಲಾಗುವುದು. (ಅನುದಾನದ ವಿವರಗಳನ್ನು ಅನುಬಂಧ-2 ರಲ್ಲಿ ನೋಡಬಹುದು)

141) ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಕಾಲೋನಿಗಳ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸಲು 50 ಕೋಟಿ ರೂ.ಗಳ ಅನುದಾನವನ್ನು ಬಳಸಿಕೊಳ್ಳಲಾಗುವುದು.

142) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗಾಗಿ ವಾರ್ಷಿಕ 50 ಕೋಟಿ ರೂ.ಗಳನ್ನು ಒದಗಿಸಲಾಗುವುದು.

143) ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನಕ್ಕೆ 10 ಕೋಟಿ ರೂ.ಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

ಅಲ್ಪಸಂಖ್ಯಾತರ ಕಲ್ಯಾಣ

144) ಅಲ್ಪಸಂಖ್ಯಾತರ ಕಲ್ಯಾಣ ಚಟುವಟಿಕೆಗಳಿಗಾಗಿ ಒಟ್ಟು 235 ಕೋಟಿ ರೂ.ಗಳ ಅನುದಾನವನ್ನು ಕಲ್ಪಿಸಲಾಗಿದೆ.

145) ಕ್ರಿಶ್ಚಿಯನ್ ಸಮುದಾಯದ ಕಲ್ಯಾಣ ಕಾರ್ಯಕ್ರಮಗಳ ಉತ್ತೇಜನಕ್ಕಾಗಿಯೇ 50 ಕೋಟಿ ರೂ.ಗಳನ್ನು ಪ್ರತ್ಯೇಕವಾಗಿ ಒದಗಿಸ ಲಾಗುತ್ತಿದೆ.

146) ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಯಾತ್ರಾ ಸ್ಥಳಗಳಲ್ಲಿ ಮೂಲ ಸೌಲಭ್ಯಗಳನ್ನು ಉತ್ತಮಗೊಳಿಸುವುದಕ್ಕಾಗಿ 5 ಕೋಟಿ ರೂ.ಗಳ ಅನುದಾನ ವನ್ನು ಕಲ್ಪಿಸಲಾಗಿದೆ.

147) ಶಾದಿ ಮಹಲ್ ಮತ್ತು ಸಮುದಾಯ ಭವನಗಳಿಗಾಗಿ 15 ಕೋಟಿ ರೂ.ಗಳನ್ನು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಟ್ಟಡಕ್ಕಾಗಿ 55 ಕೋಟಿ ರೂ.ಗಳನ್ನು ಹಾಗೂ ಕೌಶಲ್ಯ ಅಭಿವೃದ್ಧಿಗಾಗಿ 10 ಕೋಟಿ ರೂ.ಗಳ ಅನುದಾನವನ್ನು ಕಲ್ಪಿಸಲಾಗಿದೆ.

148) ಹಜ್ ಘರ್ ನಿರ್ಮಾಣಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ

149) ಸಮಗ್ರ ಆಯವ್ಯಯದ ಭಾಗವಾಗಿ ಒಟ್ಟು 38845 ಕೋಟಿ ರೂ.ಗಳ ವೆಚ್ಚದ ಲಿಂಗಾಧಾರಿತ ಆಯವ್ಯಯವನ್ನು ಮಂಡಿಸಲಾಗುತ್ತಿದೆ. ಈ ವೆಚ್ಚವು 2012-13ನೇ ಸಾಲಿನಲ್ಲಿ ಮಹಿಳೆಯರ ಅಭಿವೃದ್ಧಿಗಾಗಿ ಯೋಜಿ ಸಲಾದ ನೇರ ಮತ್ತು ಪರೋಕ್ಷ ಫಲಗಳನ್ನು ಸೂಚಿಸುತ್ತದೆ.

150) ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕಾಗಿ 500 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

151) ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಒದಗಿಸುವ ಪೌಷ್ಠಿಕ ಆಹಾರದ ವೆಚ್ಚವನ್ನು ಏಪ್ರಿಲ್ 2012 ರಿಂದ ಶೇಕಡ 15 ರಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ. ಅಲ್ಲದೆ ಪೌಷ್ಠಿಕತೆ ಕಾರ್ಯಕ್ರಮಕ್ಕೆ ಒದಗಿಸಲಾಗುವ 795 ಕೋಟಿ ರೂ.ಗಳ ವೆಚ್ಚವು ಯುಕ್ತವಾಗಿ ಮತ್ತು ಸಮರ್ಥವಾಗಿ ಬಳಕೆಯಾಗುವಂತೆ ನೋಡಿಕೊಳ್ಳಲು ನಿರ್ದಿಷ್ಟ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು.

152) 1795 ಹೊಸ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ 75 ಕೋಟಿ ರೂ.ಗಳ ಹಾಗೂ ಹಾಲಿ ಇರುವ ಕೇಂದ್ರಗಳ ನಿರ್ವಹಣೆಗಾಗಿ 15 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

153) ಒಂದು ಲಕ್ಷಕ್ಕೂ ಅಧಿಕ ಅಂಗನವಾಡಿ ಕಾರ್ಯಕರ್ತರು ಹಾಗೂ ಸಹಾಯಕರು ಎನ್.ಪಿ.ಎಸ್.–ಲೈಟ್ ಯೋಜನೆಯ ವ್ಯಾಪ್ತಿಯಲ್ಲಿದ್ದು, ಅವರಿಗೆ ಹೆಚ್ಚು ಅಗತ್ಯವಾದ ಸಾಮಾಜಿಕ ಭದ್ರತೆಯನ್ನು ಒದಗಿಸಲಾಗುತ್ತಿದೆ ಎಂಬುದನ್ನು ಘೋಷಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ರಾಜ್ಯ ಸರ್ಕಾರವು ತನ್ನ ಸಹ ವಂತಿಗೆಯಾಗಿ 2012–13ನೇ ಸಾಲಿನಲ್ಲಿ 16.5 ಕೋಟಿ ರೂ.ಗಳನ್ನು ಒದಗಿಸುತ್ತದೆ.

154) ದೈಹಿಕ ಅಂಗವಿಕಲತೆಯನ್ನು ಹೊಂದಿರುವ ವ್ಯಕ್ತಿಗಳಿಗಾಗಿ ಉದ್ಯೋಗ ನಿಯೋಜನೆ ಘಟಕವನ್ನು ಸ್ಥಾಪಿಸಲಾಗುವುದು.

155) ದೈಹಿಕ ಅಂಗವಿಕಲತೆ ಹೊಂದಿರುವ ಮಕ್ಕಳಿಗಾಗಿ ವಿಶೇಷ ಶಾಲೆಗಳನ್ನು ನಡೆಸುವ ಸರ್ಕಾರೇತರ ಸಂಘ ಸಂಸ್ಥೆಗಳಿಗೆ ನೆರವು ನೀಡುವುದಕ್ಕಾಗಿ 8 ಕೋಟಿ ರೂ.ಗಳನ್ನು ಹಂಚಿಕೆ ಮಾಡಲಾಗಿದೆ.

156) ಮಹಿಳೆಯರು ಮತ್ತು ಅನಾಥ ಮಕ್ಕಳ ಪಾಲನೆ ಪೋಷಣೆಯ ಜವಾಬ್ದಾರಿಯನ್ನು ಹಾಗೂ ಸೇವಾ ಮನೋಭಾವವನ್ನು ಹೊಂದಿರುವ ಬೆಂಗಳೂರಿನಲ್ಲಿರುವ ಸುಮಂಗಲಿ ಸೇವಾಶ್ರಮಕ್ಕೆ 50 ಲಕ್ಷ ರೂ.ಗಳ ಅನುದಾನ ನೀಡಲಾಗುವುದು.

157) ಬಾಲ ಭವನದ ಕಾರ್ಯ ಚಟುವಟಿಕೆಗಳಿಗೆ ನೀಡುತ್ತಿದ್ದ ಅನುದಾನವನ್ನು 5 ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ. ಅದರಲ್ಲಿ ಜಿಲ್ಲಾ ಮಟ್ಟದ ಕಾರ್ಯಕ್ರಮಗಳಿಗಾಗಿ 3 ಕೋಟಿ ರೂ.ಗಳನ್ನು ಒದಗಿಸಲಾಗುವುದು.

158) ಸ್ತ್ರೀಶಕ್ತಿ ಗುಂಪುಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ಸಂಚಾರಿ ವ್ಯಾನ್‌ಗಳ ಸೌಲಭ್ಯಗಳನ್ನು ಒದಗಿಸುವುದೂ ಸೇರಿದಂತೆ, ಆ ಗುಂಪುಗಳ ಕಾರ್ಯಚಟುವಟಿಕೆಗಲನ್ನು ಉತ್ತೇಜಿಸಲು 12.5 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

159) ಲೈಂಗಿಕ ಅಲ್ಪಸಂಖ್ಯಾತರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವುದಕ್ಕೆ ಯೋಜನೆಯೊಂದನ್ನು ಪ್ರಾರಂಭಿಸಲಾಗುವುದು.

ಸಾಮಾಜಿಕ ಭದ್ರತಾ ವೇತನಗಳು

160) 65 ರಿಂದ 80ರ ವಯೋಮಾನದಲ್ಲಿರುವ ಅರ್ಹ ವ್ಯಕ್ತಿಗಳಿಗೆ ನೀಡಲಾಗುವ ಸಾಮಾಜಿಕ ಭದ್ರತಾ ವೇತನವನ್ನು ಏಪ್ರಿಲ್ 2012ರ ತರುವಾಯದಿಂದ ಮಾಸಿಕ 500 ರೂ.ಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಇದರಿಂದ ಸುಮಾರು 30 ಲಕ್ಷ ಫಲಾನುಭವಿಗಳು ಈ ಹೆಚ್ಚಳದ ಸೌಲಭ್ಯ ಪಡೆಯಲಿದ್ದಾರೆ. ಈ ಉದ್ದೇಶಕ್ಕಾಗಿ 2310 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

161) 2011-12ರ ಅವಧಿಯಲ್ಲಿ ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿದ್ದ ಸಾಮಾಜಿಕ ಭದ್ರತಾ ವೃದ್ಧಾಪ್ಯ ವೇತನದಾರರ ವಾಸ್ತವಿಕ ಪರಿಶೀಲನೆ ಯನ್ನು ಕೈಗೊಳ್ಳಲಾಯಿತು. ಸುಮಾರು 8 ಲಕ್ಷದಷ್ಟು ಪುನರಾವರ್ತಿತ, ಅಸ್ತಿತ್ವದಲ್ಲೇ ಇಲ್ಲದ ಹಾಗೂ ಅನರ್ಹ ಪಿಂಚಣಿದಾರರು ವೃದ್ಧಾಪ್ಯ ವೇತನ ಪಡೆಯುತ್ತಿದ್ದ ಪ್ರಕರಣಗಳು ಬೆಳಕಿಗೆ ಬಂದವು ಹಾಗೂ ಅವರಿಗೆ ವೃದ್ಧಾಪ್ಯ ವೇತನ ನೀಡುವುದನ್ನು ನಿಲ್ಲಿಸಲಾಯಿತು.

ವಸತಿ

162) ವಸತಿ ವಲಯಕ್ಕೆ ಒಟ್ಟು 1439 ಕೋಟಿ ರೂಪಾಯಿಗಳ ಮೊತ್ತದ ಅನುದಾನ ಒದಗಿಸಲಾಗಿದೆ.

163) ರಾಜ್ಯದಲ್ಲಿ ವಸತಿ ಯೋಜನೆಗಳಡಿಯಲ್ಲಿ ನೀಡುವ ಸಹಾಯ ಧನವನ್ನು 50,000 ರೂ.ಗಳಿಂದ 75,000 ರೂ.ಗಳಿಗೆ ಹೆಚ್ಚಿಸಲಾಗುವುದು. ಮನೆಯ ನಿರ್ಮಾಣ ವೆಚ್ಚದ ದರವನ್ನು ರೂ.1 ಲಕ್ಷಕ್ಕೆ ಏರಿಸಲಾಗುವುದು.

164) ಈ ಮೇಲ್ಕಂಡ ಸೌಲಭ್ಯವನ್ನು 2012–13ನೇ ಸಾಲಿನಲ್ಲಿ ಮನೆ ನಿರ್ಮಾಣ ಮಾಡಲು ಪ್ರಾರಂಭ ಮಾಡಲಾಗುವ ಫಲಾನುಭವಿಗಳಿಗೆ ನೀಡಲಾಗುವುದು.

165) ರಾಜ್ಯದ ಕೊಳಗೇರಿ ಪ್ರದೇಶಗಲ್ಲಿ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಈ ಸಾಲಿನಲ್ಲಿ 75 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

166) ಕರ್ನಾಟಕ ಗೃಹ ಮಂಡಳಿಯು ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕದಾದ್ಯಂತ ಎಲ್ಲಾ ನಗರ ಪ್ರದೇಶದ ಕಡಿಮೆ, ಮಧ್ಯಮ ಮತ್ತು ಹೆಚ್ಚಿನ ಆದಾಯದ ಜನರಿಗೆ ಧಾರಣೀಯ ವಸತಿ ಸೌಲಭ್ಯವನ್ನು ಒದಗಿಸುತ್ತಿದೆ. ವಸತಿ ಲಭ್ಯತೆಯನ್ನು ಮತ್ತಷ್ಟು ಹೆಚ್ಚಿಸುವ ಹಾಗೂ ಧಾರಣೀಯ ವಸತಿ ವಿಭಾಗಗಳಲ್ಲಿ ಖಾಸಗಿ ಹೂಡಿಕೆಯ ಸಾಧ್ಯತೆಯನ್ನು ಪರೀಕ್ಷಿಸುವ ಸಲುವಾಗಿ ಕರ್ನಾಟಕ ಗೃಹ ಮಂಡಳಿಯ ಜಂಟಿ ಉದ್ಯಮ ನೀತಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಲು ಸರ್ಕಾರವು ಉದ್ದೇಶಿಸಿದೆ. ಇದರಿಂದಾಗಿ ಕರ್ನಾಟಕ ಗೃಹ ಮಂಡಳಿಯ ಸಹಯೋಗದೊಡನೆ ಕೈಗೆಟಕುವ ಬೆಲೆಯಲ್ಲಿ ಮನೆಗಳನ್ನು ನಿರ್ಮಿಸುವ ಸಲುವಾಗಿ ಜಮೀನನ್ನು ಪಡೆಯಲು ಖಾಸಗಿ ಹೂಡಿಕೆದಾರರಿಗೆ ಸಹಾಯವಾಗುತ್ತದೆ.

167) ಕರ್ನಾಟಕವನ್ನು ಕೊಳಚೆ ಪ್ರದೇಶದಿಂದ ವಿಮುಕ್ತಿಗೊಳಿಸಲು ಸರ್ಕಾರ ಕಾಳಜಿ ಹೊಂದಿದೆ. ಈ ದಿಸೆಯಲ್ಲಿ ನಾವು ರಾಜ್ಯಕ್ಕೆ ಕರ್ನಾಟಕ ಕೊಳಚೆ ಪ್ರದೇಶ ಮರು ಅಭಿವೃದ್ಧಿ ನೀತಿಯನ್ನು ಘೋಷಿಸಿದ್ದೇವೆ. ಅದರಿಂದ ಕೊಳಚೆ ಪ್ರದೇಶವನ್ನು ಸಕ್ರಮಗೊಳಿಸಲು ಹಾಗೂ ಮರು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಕರ್ನಾಟಕ ಕೊಳಚೆ ಪ್ರದೇಶ ಅಭಿವೃದ್ಧಿ ಮಂಡಳಿಯು 2011–12ನೇ ಸಾಲಿನಲ್ಲಿ ಐ.ಎಚ್.ಎಸ್.ಡಿ.ಪಿ. ಮತ್ತು ಬಿ.ಎಸ್.ಯು.ಪಿ. ಅಡಿಯಲ್ಲಿ 24562 ವಸತಿಯನ್ನು ಪೂರ್ಣಗೊಳಿಸಿದೆ. ಅದರೊಡನೆ 17183 ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು, ಡಿಸೆಂಬರ್ 2012ರ ವೇಳೆಗೆ ಪೂರ್ಣಗೊಳ್ಳಲಿದೆ.

168) ಪ್ರಪ್ರಥಮ ಬಾರಿಗೆ ಸರ್ಕಾರವು ಫಲಾನುಭವಿಗಳು ನಿವೇಶನ ಹೊಂದದೇ ಇರುವ ಸಂದರ್ಭದಲ್ಲಿ ತನ್ನದೆ ಆದ ಕೃಷಿ/ಸಾಗುವಳಿ ಭೂಮಿಯಲ್ಲಿ ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿ ಈ ಸಂಬಂಧ ಭೂಪರಿವರ್ತನೆಯನ್ನು ಮಾಡಲು ತಹಶೀಲ್ದಾರ್‌ರವರಿಗೆ ಅಧಿಕಾರ ನೀಡಿದೆ.

169) ಸರ್ಕಾರವು ಕಡಿಮೆ ಆದಾಯದವರಿಗಾಗಿ "ನನ್ನ ಮನೆ ಯೋಜನೆ" (ಸುಲಭ ದರದ ವಸತಿ ಯೋಜನೆ) ಎಂಬ ಹೊಸ ಯೋಜನೆಯಡಿ ಬೆಂಗಳೂರು ಸುತ್ತಮುತ್ತ ನಾಲ್ಕು ಸ್ಥಳಗಳಲ್ಲಿ ಈಗಾಗಲೇ 1500 ಫ್ಲಾಟ್‌ಗಳನ್ನು ಕೈಗೆಟುಕುವ ದರದಲ್ಲಿ ಹಂಚಿಕೆ ಮಾಡಿದ್ದು, ಇದನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇನ್ನು ಕೆಲವು ಸ್ಥಳಗಳಿಗೆ ವಿಸ್ತರಿಸಲು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಕೈಗಾರಿಕಾಭಿವೃದ್ಧಿ

170) ಕರ್ನಾಟಕವನ್ನು ದೇಶದಲ್ಲಿ ಬಂಡವಾಳ ಹೂಡಿಕೆಗಳಿಗೆ ನೆಚ್ಚಿನ ತಾಣವನ್ನಾಗಿ ಮಾಡಲು ಸರ್ಕಾರವು ಬದ್ಧವಾಗಿದೆ. ಕರ್ನಾಟಕದ ರಾಜ್ಯ ಆಂತರಿಕ ಉತ್ಪನ್ನವನ್ನು ದ್ವಿಗುಣಗೊಳಿಸಿ ಹೆಚ್ಚುವರಿಯಾಗಿ 10 ಲಕ್ಷ ಜನರಿಗೆ ಉದ್ಯೋಗ ಒದಗಿಸುವ ಗುರಿಯನ್ನು ಹೊಂದಲಾಗಿದೆ. 3.92 ಲಕ್ಷ ಕೋಟಿ ರೂ. ಹೂಡಿಕೆ ಬದ್ಧತೆಯೊಂದಿಗೆ ಜಾಗತಿಕ ಹೂಡಿಕೆದಾರರ ಸಮಾವೇಶ 2010ರಲ್ಲಿ ಸಹಿ ಹಾಕಿದ 389 ಒಡಂಬಡಿಕೆ ಪತ್ರಗಳ (ಎಂ.ಓ.ಯು.ಗಳು) ಪೈಕಿ 36 ಯೋಜನೆಗಳು ಈಗಾಗಲೇ ಪೂರ್ಣಗೊಂಡಿದೆ. ಹಾಗೂ 287 ಪೂರ್ಣಗೊಳ್ಳುವ ವಿವಿಧ ಹಂತಗಳಲ್ಲಿವೆ.

171) ಆಟೋಮೊಬೈಲ್ಸ್, ಏರೋಸ್ಪೇಸ್, ಮೂಲಸೌಲಭ್ಯ, ವಿದ್ಯುತ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಜವಳಿ ಸೇರಿದಂತೆ ಹದಿನಾರು ವಲಯಗಳಲ್ಲಿ ಹೂಡಿಕೆ ಅವಕಾಶಗಳನ್ನು ಪ್ರತಿಬಿಂಬಿಸುವ ಮುಂದಿನ ಜಾಗತಿಕ ಹೂಡಿಕೆದಾರರ ಸಮಾವೇಶವು ಜೂನ್ 2012ರಲ್ಲಿ ನಡೆಯಲಿದೆ. ಸರ್ಕಾರ 5 ಲಕ್ಷ ಕೋಟಿ ರೂ. ವರೆಗಿನ ಹೂಡಿಕೆಯನ್ನು ಆಕರ್ಷಿಸುವ ನಿರೀಕ್ಷೆಯಿದೆ. ರಾಜ್ಯದ ಯೋಜನೆಗಳ ತ್ವರಿತ ಅನುಮೋದನೆ ಮತ್ತು ಸುಲಭ ಅನುಷ್ಠಾನಕ್ಕೆ ಆದ್ಯತೆ ನೀಡಲು ಕರ್ನಾಟಕ ಕೈಗಾರಿಕಾ ಸೌಲಭ್ಯ ಅಧಿನಿಯಮ 2002ಕ್ಕೆ ತಿದ್ದುಪಡಿ ತರಲಾಗುತ್ತಿದೆ.

172) ಸರ್ ಎಂ. ವಿಶ್ವೇಶ್ವರಯ್ಯ ಅವರ ಸ್ಮರಣಾರ್ಥ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಒಂದು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿ ಪಡಿಸಲಾಗುವುದು.

173) ಆಹಾರ, ರತ್ನಗಳು, ಆಭರಣಗಳು, ಮೋಟಾರು ವಾಹನ ಬಿಡಿಭಾಗಗಳು, ಯಂತ್ರ ಸಾಮಗ್ರಿ ಮತ್ತು ಔಷಧ ತಯಾರಿಕೆಗಳ ಮೇಲೆ

ಕೇಂದ್ರೀಕೃತವಾಗಿರುವ ಹನ್ನೊಂದು ವಲಯ ನಿರ್ದಿಷ್ಟ ಪಾರ್ಕುಗಳನ್ನು ವಿವಿಧ ಪ್ರದೇಶಗಳಲ್ಲಿ ಒಟ್ಟು 70 ಕೋಟಿ ರೂ.ಗಳ ವೆಚ್ಚದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿ ವತಿಯಿಂದ ರಚಿಸಲಾಗುವುದು. ಈ ಮಂಡಳಿ ವತಿಯಿಂದ 2000 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಯೊಂದಿಗೆ ರಾಜ್ಯಾದ್ಯಂತ ಭೂ ಬ್ಯಾಂಕ್‌ನ್ನು ಸ್ಥಾಪಿಸಲಾಗುವುದು.

174) 2.5 ದಶಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿರುವ ಸಣ್ಣ ಪ್ರಮಾಣದ ಕೈಗಾರಿಕಾ ವಲಯವು ನಮ್ಮ ರಾಜ್ಯದಲ್ಲಿ ಸ್ಪಂದನಶೀಲವಾಗಿದೆ. ಈ ಘಟಕಗಳಿಗೆ ಬಹು ದಿನಗಳಿಂದ ಬಾಕಿಯಿರುವ 160 ಕೋಟಿ ಬಂಡವಾಳ ಹೂಡಿಕೆ ಪ್ರೋತ್ಸಾಹಕಗಳನ್ನು 2 ವರ್ಷಗಳ ಅವಧಿಯೊಳಗಾಗಿ ಬಿಡುಗಡೆ ಮಾಡಲಾಗುವುದು.

175) ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಮತ್ತು ಈ ಸಂಸ್ಥೆಗಳಲ್ಲಿ ದುಡಿಯುವ ಸುಮಾರು 32,000 ಕೆಲಸಗಾರರಿಗೆ ಅವರ ಕೆಲಸಕ್ಕೆ ತಕ್ಕಂತೆ ಸಾಕಷ್ಟು ಪರಿಹಾರ ಸಿಗುವಂತೆ ನೋಡಿಕೊಳ್ಳಲು ಈ ಸಂಸ್ಥೆಗಳಿಗೆ ನೀಡುವ ಹಣಕಾಸು ನೆರವಿನ ಮಟ್ಟವನ್ನು ಹೆಚ್ಚಿಸಲು 7 ಕೋಟಿ ರೂ.ಗಳನ್ನು ಒದಗಿಸಲಾಗುವುದು.

176) ರಾಷ್ಟ್ರ ಧ್ವಜ ತಯಾರಿಕೆಯ ಶ್ರೇಷ್ಠ ಸೇವೆಯನ್ನು ಕೈಗೊಳ್ಳು ತ್ತಿರುವ ಹುಬ್ಬಳ್ಳಿಯಲ್ಲಿ ಇರುವ ಕರ್ನಾಟಕ ಖಾದಿ ಗ್ರಾಮೋದಯ ಸಂಯುಕ್ತ ಸಂಘಕ್ಕೆ 1 ಕೋಟಿ ರೂ.ಗಳ ಹಣಕಾಸಿನ ನೆರವು ನೀಡಲಾಗುವುದು.

ಜವಳಿ

177) ನೇಕಾರರಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳಿಗಾಗಿ ಒಟ್ಟು ರೂ.138 ಕೋಟಿ ಅವಕಾಶ ಮಾಡಲಾಗಿದೆ.

178) ಜವಳಿ ಇಲಾಖೆಯು ಅನುಷ್ಠಾನಗೊಳಿಸಲಿರುವ ನೇಕಾರರ ಪ್ಯಾಕೇಜ್‌ಗಾಗಿ 60 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ. ಇದರ ಜೊತೆಗೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಲಿರುವ ನೇಕಾರರ ಪ್ಯಾಕೇಜ್‌ಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

179) ಕೈಮಗ್ಗದಿಂದ ವಿದ್ಯುತ್ ಮಗ್ಗಕ್ಕೆ ಪರಿವರ್ತಿಸಿಕೊಳ್ಳಲಿರುವ ನೇಕಾರರಿಗೆ ನೆರವು ನೀಡಲು 10 ಕೋಟಿ ರೂ.ಗಳ ಅವಕಾಶ ಕಲ್ಪಿಸಲಾ

ಗುತ್ತಿದೆ. ವಾಸದ ಮತ್ತು ಕಾರ್ಯಾಗಾರ ಶೆಡ್‌ಗಳಿಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುವುದು.

180) ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಸಿದ್ಧ ಉಡುಪು ತಯಾರಿಕಾ ತರಬೇತಿ ಕೇಂದ್ರವನ್ನು ಕೋಲಾರದಲ್ಲಿ ಪ್ರಾರಂಭಿಸಲಾಗುವುದು.

181) ಜವಳಿ ನೀತಿಯ ಅನುಷ್ಠಾನದ ವೆಚ್ಚಕ್ಕಾಗಿ 40 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ.

182) ಇದರ ಜೊತೆಗೆ ನೇಕಾರರು ಮತ್ತು ಅವರ ಮಕ್ಕಳ ಅನುಕೂಲಕ್ಕಾಗಿ ವಸತಿ ನಿಲಯಗಳ ನಿರ್ಮಾಣ, ಸಮುದಾಯ ಭವನ ನಿರ್ಮಾಣದಂತಹ ಕಲ್ಯಾಣ ಕಾರ್ಯಕ್ರಮಗಳಿಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

ಪ್ರವಾಸೋದ್ಯಮ

183) 2011ರಲ್ಲಿ ಕರ್ನಾಟಕಕ್ಕೆ 8.46 ಕೋಟಿ ಪ್ರವಾಸಿಗರು ಭೇಟಿ ನೀಡಿದ್ದು, ಅಂತರರಾಷ್ಟ್ರೀಯ ಪ್ರವಾಸಿಗರ ಸಂಖ್ಯೆಯಲ್ಲಿ ಶೇಕಡಾ 70 ರಷ್ಟು ವೃದ್ಧಿಯಾಗಿದೆ. ಪ್ರವಾಸೋದ್ಯಮ ಮೂಲಸೌಕರ್ಯ ವರ್ಧನೆಗಾಗಿ 100 ಕೋಟಿ ರೂ.ಗಳ ಅನುದಾನವನ್ನು ಕಲ್ಪಿಸಲಾಗಿದೆಯಲ್ಲದೆ, ಪ್ರವಾಸಿ ಚಟುವಟಿಕೆಗಳಿಗೆ ಸಹಕಾರಿಯಾಗುವಂತೆ ರಸ್ತೆಗಳ ಅಭಿವೃದ್ಧಿಗಾಗಿ 50 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಸರ್ಕಾರಿ-ಖಾಸಗಿ ಸಹಭಾಗಿತ್ವದ ಆಧಾರದಲ್ಲಿ ಅಭಿವೃದ್ಧಿಪಡಿಸುವ ಪ್ರವಾಸೋದ್ಯಮ ಯೋಜನೆಗಳಿಗಾಗಿ ಸರ್ಕಾರವು ಜಮೀನನ್ನು ಒದಗಿಸಲಿದೆ.

184) ಅತಿಥಿ ಸತ್ಕಾರ ಕ್ಷೇತ್ರದಲ್ಲಿರುವ ಕುಶಲ ಮಾನವ ಸಂಪನ್ಮೂಲದ ಅಗತ್ಯ ಮತ್ತು ಪೂರೈಕೆ ನಡುವೆ ಇರುವ ಬೃಹತ್ ಕಂದಕವನ್ನು ಸರಿಪಡಿಸುವ ಉದ್ದೇಶದಿಂದ ಕೌಶಲ್ಯ ಮತ್ತು ಸಾಮರ್ಥ್ಯ ಅಭಿವೃದ್ಧಿಗೆ ಒತ್ತನ್ನು ನೀಡಲಾಗುವುದು. ಬಳ್ಳಾರಿ ಮತ್ತು ಮಂಗಳೂರಿನಲ್ಲಿ ಎರಡು ಹೋಟೆಲ್ ಮ್ಯಾನೇಜ್‌ಮೆಂಟ್ ಸಂಸ್ಥೆಗಳನ್ನು ಪ್ರಾರಂಭಿಸ ಲಾಗುವುದು. ಬೇಲೂರಿನಲ್ಲಿ ಆಹಾರ ನೈಪುಣ್ಯತೆಯ ಸಂಸ್ಥೆಯನ್ನು ಸ್ಥಾಪಿಸ ಲಾಗುವುದು. ಅತಿಥಿ ಸತ್ಕಾರ/ ಪ್ರವಾಸೋದ್ಯಮ ಕೌಶಲ್ಯ ಅಭಿವೃದ್ಧಿಗಾಗಿ ಅಲ್ಪಾವಧಿ ವೃತ್ತಿಪರ ಕೋರ್ಸ್‌ಗಳನ್ನು ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ನಡೆಸಲು ಪ್ರೋತ್ಸಾಹ ನೀಡಲಾಗುವುದು.

185) ಸೇವೆಗಳಲ್ಲಿ ಏಕರೂಪತೆಯನ್ನು ತರಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಧಿನಿಯಮವನ್ನು ಜಾರಿಗೊಳಿಸಲಾಗುವುದು.

186) ದೇಶಿ ಮತ್ತು ವಿದೇಸಿ ಪ್ರವಾಸಿಗರನ್ನು ರಾಜ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು ಕರ್ನಾಟಕದ ಸಾಮರ್ಥ್ಯವಾದ ಪರಂಪರೆ ಪ್ರವಾಸೋದ್ಯಮ ಹಾಗೂ ಧಾರ್ಮಿಕ ಪ್ರವಾಸೋದ್ಯಮಗಳನ್ನು ಬಳಸಿಕೊಳ್ಳಲಾಗುವುದು. ಕರಾವಳಿ ಸಂಚಾರ ಪಥವನ್ನು ಸಹ ಅಭಿವೃದ್ಧಿಪಡಿಸಲಾಗುವುದು. ಹಂಪಿಯಿಂದ ಬಿಜಾಪುರಕ್ಕೆ ಪಾರಂಪರಿಕ ಸಂಚಾರ ಪಥ (ಸರ್ಕೀಟ್), ಶ್ರವಣಬೆಳಗೊಳದಿಂದ ಕಾರ್ಕಳಕ್ಕೆ ಜೈನ ಸಂಚಾರಪಥ, ಗುಲ್ಬರ್ಗಾ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಾರಂಪರಿಕ ಮತ್ತು ಬೌದ್ಧ ಸಂಚಾರ ಪಥಗಳನ್ನು ಅಭಿವೃದ್ಧಿಪಡಿಸಲಾಗುವುದು. ಬೆಂಗಳೂರು ಮತ್ತು ಮೈಸೂರುಗಳನ್ನು ಒಳಗೊಂಡಂತೆ ಆರೋಗ್ಯ ಪಥವನ್ನು ಉತ್ತೇಜಿಸಲಾಗುವುದು. ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಹೆಸರಘಟ್ಟದಲ್ಲಿ ಒಂದು ಥೀಮ್ ಪಾರ್ಕನ್ನು ಸ್ಥಾಪಿಸಲಾಗುವುದು.

187) ಮಂಗಳೂರಿನ ಪಿಳಕುಳ ನಿಸರ್ಗಧಾಮದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಜಾನಪದ ಲೋಕವನ್ನು ನಿರ್ಮಾಣ ಮಾಡಲಾಗುವುದು.

188) ಸ್ವಾಮಿ ವಿವೇಕಾನಂದರ 150ನೇ ವರ್ಷದ ಜನ್ಮದಿನೋತ್ಸವ ಅಂಗವಾಗಿ ಮೈಸೂರಿನಲ್ಲಿ ಹೈದರಾಬಾದ್‌ನ ಲುಂಬಿನಿ ಉದ್ಯಾನವನ ಮಾದರಿಯಲ್ಲಿ 7 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಲೇಸರ್ ತಂತ್ರಜ್ಞಾನದ ಮೂಲಕ ಕಾರಂಜಿ ಪ್ರದರ್ಶನ ಮಾಡಲಾಗುವುದು.

189) ಪ್ರವಾಸೋದ್ಯಮ ವಲಯಕ್ಕಾಗಿ 247 ಕೋಟಿ ರೂ.ಗಳ ಹಂಚಿಕೆಯನ್ನು ಮಾಡಲಾಗಿದೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ

190) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಚಟುವಟಿಕೆಗಳನ್ನು ಉತ್ತೇಜಿಸುವ ಸಲುವಾಗಿ 126 ಕೋಟಿ ರೂ.ಗಳ ಒಟ್ಟು ಅನುದಾನವನ್ನು ಒದಗಿಸಲಾಗಿದೆ.

191) ಭಾರತೀಯ ವಿಜ್ಞಾನ ಸಂಸ್ಥೆಯ ಚಳ್ಳಕೆರೆ ಕ್ಯಾಂಪಸ್‌ನಲ್ಲಿ ಸೌರಶಕ್ತಿ ಉತ್ಪಾದನೆ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆಗೆ 10 ಕೋಟಿ

ರೂ.ಗಳ ನೆರವನ್ನು ಒದಗಿಸಲಾಗುವುದು. K-FIST ಚಟುವಟಿಕೆಗಳಿಗಾಗಿ 5 ಕೋಟಿ ರೂ.ಗಳನ್ನು ಅನುದಾನವಾಗಿ ಕಲ್ಪಿಸಲಾಗಿದೆ.

ಅರಣ್ಯ

192) ವಿವಿಧ ನೆಡುತೋಪು ಚಟುವಟಿಕೆಗಳಿಗಾಗಿ 180 ಕೋಟಿ ರೂ.ಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. 2012-13ನೇ ಸಾಲಿನಲ್ಲಿ ರೈತರು ಮತ್ತು ಸಾರ್ವಜನಿಕರಿಗೆ ವಿತರಿಸುವ ಸಲುವಾಗಿ 70,000 ಹೆಕ್ಟೇರ್‌ನಲ್ಲಿ 600 ಲಕ್ಷ ನೆಡುತೋಪುಗಳನ್ನು ಮತ್ತು 175 ಲಕ್ಷ ಸಸಿಗಳನ್ನು ಬೆಳೆಸುವ ಗುರಿ ಹೊಂದಲಾಗಿದೆ.

193) ಮಂಚೂಣಿಯಲ್ಲಿರುವ ಸಿಬ್ಬಂದಿಗಳಿಗೆ ವಸತಿಗೃಹ ಒದಗಿಸಲು 20 ಕೋಟಿ ರೂ. ಗಳ ಮತ್ತು ಈಗ ಅಸ್ತಿತ್ವದಲ್ಲಿರುವ ವಸತಿಗೃಹಗಳ ದುರಸ್ತಿ ಮತ್ತು ನಿರ್ವಹಣೆಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುವುದು.

194) ಅರಣ್ಯ ಪಡೆಯ ಆಧುನೀಕರಣ ಮತ್ತು ಬಲಪಡಿಸುವಿಕೆ : ಕರ್ನಾಟಕದ ಅರಣ್ಯಗಳು ಅದರಲ್ಲಿಯೂ ಪಶ್ಚಿಮ ಘಟ್ಟ ಅರಣ್ಯಗಳು ಜಗತ್ತಿನಲ್ಲಿಯೇ ಅಪರೂಪದ ಜೀವಿ ವೈವಿಧ್ಯ ಮತ್ತು ಸಸ್ಯ ವೈವಿಧ್ಯ ಪ್ರಭೇಧ ಗಳಿಂದ ಕೂಡಿದ ಅರಣ್ಯಗಳಾಗಿರುತ್ತವೆ. ಅರಣ್ಯ ಇಲಾಖೆಯ ಸಿಬ್ಬಂದಿಯ ಕಾರ್ಯದಕ್ಷತೆಯನ್ನು ಉತ್ತಮಪಡಿಸುವ ಜೊತೆಗೆ ಆಡಳಿತಾತ್ಮಕವಾಗಿ ಅಗತ್ಯ ವಿರುವ ವಾಹನಗಳನ್ನು ಮತ್ತು ಆಧುನಿಕ ಬೆಂಕಿ ರಕ್ಷಣಾ ಸಾಮಗ್ರಿಗಳನ್ನು, ಜಿ.ಐ.ಎಸ್. ಹಾಗೂ ಸಿಬ್ಬಂದಿಗಳಿಗೆ ತರಬೇತಿ, ಅರಣ್ಯ ಸಂಶೋಧನೆ ಮತ್ತು ಅರಣ್ಯ ಇಲಾಖೆಯ ಕಾರ್ಯವೈಖರಿಯನ್ನು ಗಣಕೀಕರಣಗೊಳಿಸುವ ಸಲುವಾಗಿ ಮಾಹಿತಿ ಸಂವಹನ ತಂತ್ರಜ್ಞಾನವನ್ನು (ಇ-ಆಡಳಿತ) ಅಳವಡಿಸಿ ಇಲಾಖೆಯನ್ನು ಬಲಪಡಿಸಬೇಕಾಗಿದೆ. ಇದಕ್ಕಾಗಿ 20 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

195) ವನ್ಯಪ್ರಾಣಿಗಳು ಮತ್ತು ಮಾನವ ನಡುವೆ ಸಂಘರ್ಷಗಳ ನಿಯಂತ್ರಣ : ಇತ್ತೀಚಿನ ದಿನಗಳಲ್ಲಿ ಕಾಡಾನೆ ಮತ್ತು ವನ್ಯಪ್ರಾಣಿಗಳ – ಮಾನವ ಸಂಘರ್ಷ ಹೆಚ್ಚಾಗಿದೆ. ಇದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದು ಮತ್ತು ಬಗೆಹರಿಸುವುದು ಸರ್ಕಾರಕ್ಕೆ ಒಂದು ಸವಾಲಿನ ಕೆಲಸವಾಗಿದೆ. ಈ ನಿಟ್ಟಿನಲ್ಲಿ ಕಾಡಾನೆಗಳು ಕೃಷಿ ಮತ್ತು ಜನವಸತಿ ಪ್ರದೇಶ ಗಳಿಗೆ ಬರುವುದನ್ನು ಪ್ರತಿಬಂಧಿಸಲು ತೀರಾ ಅಗತ್ಯವಿರುವ ಕಡೆ ಹೊಸದಾಗಿ

ಆನೆ ತಡೆ ಕಂದಕ, ಸೌರ ವಿದ್ಯುತ್ ಬೇಲಿಗಳನ್ನು ನಿರ್ಮಿಸಬೇಕಾಗಿದೆ ಹಾಗೂ ಇತರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ.

196) ಅರಣ್ಯ ಪ್ರದೇಶಗಳಲ್ಲಿರುವ ಕುಟುಂಬಗಳ ಪುನರ್ವಸತಿ : ರಾಷ್ಟ್ರೀಯ ಉದ್ಯಾನವನಗಳು, ವನ್ಯಧಾಮಗಳು ಮತ್ತು ಇನ್ನಿತರೆ ಅರಣ್ಯ ಪ್ರದೇಶಗಳಲ್ಲಿರುವ ಕುಟುಂಬಗಳನ್ನು ವನ್ಯಪ್ರಾಣಿಗಳ ಹಾವಳಿಯಿಂದ ರಕ್ಷಿಸಲು ಸ್ವಇಚ್ಛೆ ಮೇರೆಗೆ ಸ್ಥಳಾಂತರಗೊಳಿಸಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತಹ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆಯ ಒಟ್ಟುಗೂಡಿಸಿದ ಹಣದಿಂದ ಅನುಷ್ಠಾನಗೊಳಿಸಲು 10 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಹಾಸನ ಮತ್ತು ಸಕಲೇಶಪುರದಲ್ಲಿ ಈ ಕಾರ್ಯವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

197) ಪಶ್ಚಿಮಘಟ್ಟ ಕಾರ್ಯಪಡೆ : ಪಶ್ಚಿಮಘಟ್ಟ ಕಾರ್ಯಪಡೆ ಅರಣ್ಯ ಇಲಾಖೆಯ ಮೂಲಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತದೆ. ಅರಣ್ಯ ಜೀವವೈವಿಧ್ಯ, ಪರಿಸರ, ಜಲ ಸಂರಕ್ಷಣೆ, ದೇವರಕಾಡು, ಗ್ರಾಮ ಅರಣ್ಯ ಸಮಿತಿ, ಹೀಗೆ ಹಲವು ಯೋಜನೆಗಳನ್ನು ಅದು ನಿರ್ವಹಿಸುತ್ತಿದೆ. ಅರಣ್ಯ ಇಲಾಖೆ ಮತ್ತು ಹಲವು ಸಂಸ್ಥೆಗಳ ಮೂಲಕ ಪಶ್ಚಿಮಘಟ್ಟ ಸಂರಕ್ಷಣೆಗೆ ಪ್ರಯತ್ನ ನಡೆಸುತ್ತಿದೆ. 2012–13ರ ಸಾಲಿನಲ್ಲಿ ಪಶ್ಚಿಮಘಟ್ಟ ಕಾರ್ಯಪಡೆ ಕಾರ್ಯಕ್ರಮಗಳ ಸಲುವಾಗಿ ಒಟ್ಟು 4 ಕೋಟಿ ರೂ.ಗಳನ್ನು ನೀಡಲಾಗುವುದು.

ಯುವಜನ ಸೇವೆಗಳು

ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮಸುಳುವ ಮುನ್ನ,
ಉತ್ಸಾಹಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು, – ರಸದ
ಬೀಡೊಂದನು

198) ಗೋಪಾಲಕೃಷ್ಣ ಅಡಿಗರ ಈ ಕಾವ್ಯದ ಸಾಲುಗಳು ಯುವ ಜನರ ಅದಮ್ಯ ಉತ್ಸಾಹ ಮತ್ತು ಶಕ್ತಿಯನ್ನು ಬಿಂಬಿಸುತ್ತವೆ. ಹೊಸ ನಾಡು ಕಟ್ಟುವ ಕಾಯಕದಲ್ಲಿ ಯುವ ಜನರ ಈ ಅದಮ್ಯ ಉತ್ಸಾಹ ಮತ್ತು ಶಕ್ತಿಯನ್ನು ರಚನಾತ್ಮಕವಾಗಿ ಬಳಸಿಕೊಳ್ಳಲು ನಮ್ಮ ಸರ್ಕಾರ ಸಂಕಲ್ಪ ಮಾಡಿದೆ. ಯುವಜನ ಸೇವೆ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಪ್ರಸಕ್ತ ಆಯವ್ಯಯದಲ್ಲಿ ಹೆಚ್ಚಿನ ಒತ್ತಾಸೆ ನೀಡಲಾಗಿದೆ.

199) ವಿವಿಧ ವಲಯಗಳಲ್ಲಿ ಯುವಜನರಿಗೆ ಸಂಬಂಧಪಟ್ಟ ಚಟುವಟಿಕೆಗಳಿಗೆ ನಿಗದಿಪಡಿಸಿದ ಅಂದಾಜು ಒಟ್ಟು 4534 ಕೋಟಿ ರೂ. ಆಗಿರುತ್ತದೆ. ರಾಜ್ಯದ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಬಹುತೇಕ ಅದು ಹೇಗೆ ಬೌದ್ಧಿಕ ಬಂಡವಾಳವನ್ನು ಮತ್ತು ಯುವ ಮಾನವ ಸಂಪನ್ಮೂಲ ಗಳನ್ನು ಬಳಕೆ ಮಾಡಿಕೊಳ್ಳುತ್ತದೆ ಎಂಬುದನ್ನು ಅವಲಂಬಿಸಿದೆ. ಯುವ ಜನರನ್ನು ಉದ್ಯೋಗಗಳಲ್ಲಿ ತೊಡಗಿಸುವುದು ಮತ್ತು ಅವರಲ್ಲಿರುವ ಕೌಶಲ್ಯವನ್ನು ಹೆಚ್ಚಿಸುವುದು ಕರ್ನಾಟಕದ ಅಭಿವೃದ್ಧಿಗೆ ಪ್ರಮುಖವಾಗಿರುತ್ತದೆ. ಯುವ ಶಕ್ತಿಯನ್ನು ಒಂದು "ಜನಾಂಗ ಸ್ಥಿತಿ ಪ್ರಯೋಜನ" ವನ್ನಾಗಿ ಮಾಡಲು ಮತ್ತು ಅವರನ್ನು ವ್ಯವಸ್ಥಿತವಾಗಿ ಸಬಲೀಕರಣಗೊಳಿಸಲು ಒಂದು ಯುವಜನ ಕಾರ್ಯನೀತಿಯನ್ನು ರೂಪಿಸಲಾಗುವುದು. ಈ ನೀತಿಯು ಅಂತರವಲಯ ಮಾರ್ಗದೊಂದಿಗೆ ಪ್ರಮುಖ ಸಂಸ್ಥೆಗಳನ್ನು ಮತ್ತು ಇಲಾಖೆಗಳನ್ನು ಒಟ್ಟುಗೂಡಿ ಕೆಲಸ ಮಾಡಲು, ಸಂಪನ್ಮೂಲ ಹಂಚಿಕೊಳ್ಳಲು, ಪುನರಾವರ್ತನೆ ತಪ್ಪಿಸಲು, ಸಾಮರ್ಥ್ಯ ಹೆಚ್ಚಿಸಲು ಮತ್ತು ಯುವಜನರು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಎಲ್ಲಾ ವಲಯಗಳಿಗೆ ಪ್ರೇರಣೆ ನೀಡಲು ಉತ್ತೇಜಿಸುವುದು. ಯುವಜನ ಕಾರ್ಯನೀತಿಯ ಅನುಷ್ಠಾನಕ್ಕಾಗಿ 25 ಕೋಟಿ ರೂಪಾಯಿಗಳ ಅನುದಾನದ ಅವಕಾಶವನ್ನು ಮಾಡಲಾಗಿದೆ.

200) ಸ್ವಾಮಿ ವಿವೇಕಾನಂದರ 150ನೇ ಜನ್ಮಾಚರಣೆ ಸಂದರ್ಭದಲ್ಲಿ ಯುವ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲು ಮತ್ತು ಯುವ ಜನರನ್ನು ಯುವ ಸಬಲೀಕರಣ ಚಟುವಟಿಕೆಗಳಲ್ಲಿ ತೊಡಗಿಸಲು ಉದ್ದೇಶಿಸಲಾಗಿದೆ.

ಕನ್ನಡ ಮತ್ತು ಸಂಸ್ಕೃತಿ

201) ಕನ್ನಡ ಭಾಷೆ, ಸಂಸ್ಕೃತಿ ಕಲೆ ಹಾಗೂ ಸಾಹಿತ್ಯ, ನೆಲ-ಜಲದ ಸಂರಕ್ಷಣೆ ಪವಿತ್ರ ಕರ್ತವ್ಯವೆಂದು ನಮ್ಮ ಸರ್ಕಾರ ಭಾವಿಸಿದೆ. ಅದರಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯೋಜನೆಗಳಿಗೆ ವಿಶೇಷ ಪ್ರೋತ್ಸಾಹ ಮತ್ತು ಹಣಕಾಸಿನ ನೆರವು ನೀಡಲು ಬದ್ಧವಾಗಿದೆ.

202) ಪ್ರತಿ ವರ್ಷ ನವೆಂಬರ್ 1 ರಂದು ಸರ್ಕಾರಿ ಕಛೇರಿಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ಕನ್ನಡ ಧ್ವಜಾರೋಹಣ ಕಡ್ಡಾಯಗೊಳಿಸಲಾಗುವುದು.

203) ಕನ್ನಡ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು 269 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗುವುದು.

204) ಮೈಸೂರು ಅರಮನೆಯು 100 ವರ್ಷ ಪೂರ್ಣಗೊಳಿಸಿರುವ ಈ ಸಂದರ್ಭದಲ್ಲಿ ಅರಮನೆಯ ಪಾರಂಪರಿಕ ಹಿನ್ನೆಲೆಯ ಹಾಗೂ ಅನನ್ಯತೆಯಿಂದ ಕೂಡಿದ ಕಲೆ, ವಾಸ್ತುಶಿಲ್ಪಗಳನ್ನು ನವೀಕರಿಸಲಿ ಹಾಗೂ ಅರಮನೆಯ ಉದ್ಯಾನವನಗಳನ್ನು ಉನ್ನತ ದರ್ಜೆಗೇರಿಸಲು ಹಾಗೂ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲ ಒದಗಿಸಲು 25 ಕೋಟಿ ರೂ.ಗಳನ್ನು ಒದಗಿಸಲಾಗುವುದು. ಅರಮನೆ ವ್ಯವಸ್ಥಾಪನಾ ಮಂಡಳಿಯು ಸಹ ಉತ್ಸವಾಚರಣೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

205) ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ 5 ಕೋಟಿ ರೂ.ಗಳ ಅನುದಾನವನ್ನು ನೀಡಲಾಗಿದೆ.

206) ಬೆಂಗಳೂರಿನ ಜಿಗಣಿಯ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನದಲ್ಲಿ ಸಾಂಸ್ಕೃತಿಕ ಕೇಂದ್ರ ನಿರ್ಮಾಣ ಮತ್ತು ಇತರೆ ಮೂಲ ಸೌಕರ್ಯಗಳನ್ನು ಒದಗಿಸಲು 2 ಕೋಟಿ ರೂ.ಗಳ ನೆರವು ನೀಡಲಾಗುವುದು.

207) ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಕಂಬಳ ಉತ್ಸವವನ್ನು ಆಚರಿಸಲು 1 ಕೋಟಿ ರೂ.ಗಳ ಹಣಕಾಸು ನೀಡಲಾಗುವುದು. ಈ ಕಾರ್ಯಕ್ರಮವನ್ನು ಸಾಂಸ್ಕೃತಿಕ ಕಾರ್ಯಕ್ರಮವನ್ನಾಗಿ ದಾಖಲಿಸಲಾಗುವುದು.

208) ಕರ್ನಾಟಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ದೇವಸ್ಥಾನ ಶಿಲ್ಪ ಕಲೆಯ ಬಗ್ಗೆ ಶಿಲ್ಪಿಗಳಿಗೆ ತರಬೇತಿಯನ್ನು ಶಿಲ್ಪಕಲಾ ಅಕಾಡೆಮಿ

ಮೂಲಕ ಆಯೋಜಿಸುವ ಸಲುವಾಗಿ 3 ಕೋಟಿ ರೂ.ಗಳ ಅನುದಾನವನ್ನು ಒದಗಿಸಲಾಗುವುದು.

209) ಸರ್ಕಾರವು ಈಗಾಗಲೇ ಘೋಷಿಸಿರುವ 6 ಪಾರಂಪರಿಕ ಪ್ರದೇಶಗಳ ಜೊತೆಗೆ 14 ಹೊಸ ಪ್ರದೇಶಗಳನ್ನು ಪಾರಂಪರಿಕ ನಗರಗಳೆಂದು ಘೋಷಿಸುವ ಕುರಿತು 1 ಕೋಟಿ ರೂ.ಗಳ ಅನುದಾನ ಒದಗಿಸಲಾಗುವುದು.

210) ಕುವೆಂಪು ಪ್ರತಿಷ್ಠಾನವು ಕುಪ್ಪಳ್ಳಿಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು 5 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

211) ದಕ್ಷಿಣ ಕನ್ನಡದ ಉಳ್ಳಾಲದಲ್ಲಿ 2 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ರಾಣಿ ಅಬ್ಬಕ್ಕ ಭವನ ನಿರ್ಮಿಸಲಾಗುವುದು.

212) ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಸಂಘ, ಕಾಸರಗೋಡು ಇವರಿಗೆ 50 ಲಕ್ಷ ರೂ. ಗಳ ಅನುದಾನ ನೀಡಲಾಗುವುದು.

ವಾರ್ತಾ ಇಲಾಖೆ

213) ಹಿರಿಯ ಪತ್ರಕರ್ತರಿಗೆ ನೀಡುತ್ತಿರುವ ಮಾಸಿಕ ಗೌರವ ಧನವನ್ನು 3000 ರೂ.ಗಳಿಗೆ ಹೆಚ್ಚಿಸಲಾಗುವುದು. ಅವರ ಕುಟುಂಬ ಪಿಂಚಣಿಯ ಮೊತ್ತವನ್ನು 1000 ರೂ.ಗಳಿಗೆ ಹೆಚ್ಚಿಸಲಾಗುವುದು. ಸ್ಥಳೀಯ, ಜಿಲ್ಲಾ ಮಟ್ಟದ ಮತ್ತು ಇತರ ಸಣ್ಣ ಪತ್ರಿಕೆಗಳನ್ನು ಜಾಹೀರಾತು ಬಿಡುಗಡೆ ಪರಿಗಣಿಸುವ ಸಲುವಾಗಿ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕವೇ ಜಾಹೀರಾತುಗಳನ್ನು ಬಿಡುಗಡೆ ಮಾಡಲು ಸರ್ಕಾರಿ ಇಲಾಖೆಗಳಿಗೆ ತಿಳಿಸಲಾಗುವುದು.

214) ಪತ್ರಕರ್ತರಿಗೆ ಸಂಬಂಧಿಸಿದ ವಿವಿಧ ಕಲ್ಯಾಣ ಚಟುವಟಿಕೆ ಗಳಿಗಾಗಿ ಒಂದು ಕೋಟಿ ರೂಪಾಯಿಗಳ ಅವಕಾಶವನ್ನು ಮಾಡಲಾಗುವುದು.

215) ಮಕ್ಕಳ ಚಲನಚಿತ್ರಗಳಿಗೆ ನೀಡುವ ವಿಶೇಷ ಸಹಾಯ ಧನವನ್ನು ಈಗಿರುವ 2 ಲಕ್ಷದಿಂದ 4 ಲಕ್ಷ ರೂಪಾಯಿಗಳಿಗೆ ಹೆಚ್ಚಿಸ ಲಾಗುವುದು.

216) ಮಂಡ್ಯದಲ್ಲಿ ಅಂಕೇಗೌಡ ವಾಚನಾಲಯಕ್ಕೆ 50 ಲಕ್ಷ ರೂ. ಅನುದಾನ ನೀಡಲಾಗುವುದು.

217) 2012–13ನೇ ಸಾಲಿನಲ್ಲಿ ಬೆಂಗಳೂರಿನ ಟೆಲಿವಿಜನ್ ಕಲ್ಚರಲ್ ಮತ್ತು ಸ್ಪೋರ್ಟ್ಸ್‌ಕ್ಲಬ್ ಕಟ್ಟಡ ನಿರ್ಮಾಣಕ್ಕೆ 1 ಕೋಟಿ ರೂ. ಅನುದಾನವನ್ನು ನೀಡಲಾಗುವುದು.

ಕಂದಾಯ ಮತ್ತು ಮುಜರಾಯಿ

218) ನಾಲ್ಕು ನಗರಗಳಲ್ಲಿ ನಗರ ಸ್ವತ್ತು ಮಾಲೀಕತ್ವದ ದಾಖಲೆಗಳ ಕ್ರಾಂತಿಕಾರಿ ಉಪಕ್ರಮ ಅನುಷ್ಠಾನವನ್ನು ಸ್ವಾಮ್ಯ ವಿಚಾರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರೊಂದಿಗೆ ಮುಂದಿನ 6–9 ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದೆಂದು ನಿರೀಕ್ಷಿಸಲಾಗಿದೆ. ಈ ಉಪಕ್ರಮವನ್ನು 2012–13ನೇ ಸಾಲಿನಲ್ಲಿ ಬೆಂಗಳೂರು ನಗರದ 50 ವಾರ್ಡುಗಳಲ್ಲಿ ಮೊದಲ ಹಂತದಲ್ಲಿ ಕೈಗೆತ್ತಿಕೊಳ್ಳಲಾಗುವುದು.

219) ಭೂಮಿ ಮತ್ತು ಕಾವೇರಿಯನ್ನು (ನೋಂದಣಿ ವ್ಯವಸ್ಥೆ) 2011–12ನೇ ಸಾಲಿನ ಮುಂಗಡ ಪತ್ರದ ಭಾಷಣದಲ್ಲಿ ಘೋಷಿಸಿದಂತೆ ಈಗ ಬಹುತೇಕ ತಾಲ್ಲೂಕುಗಳಲ್ಲಿ ಬಲವಾದ ಸಂಪರ್ಕ ಕಲ್ಪಿಸುವುದರ ಮೂಲಕ ಅನುಷ್ಠಾನಗೊಳಿಸಲಾಗಿದೆ. ಇಡೀ ದೇಶದಲ್ಲಿ ವಿಶಿಷ್ಟ ಕ್ರಮವೆನಿಸಿದ ಈ ಸಂಯೋಜನೆಯು ಭೂ ವ್ಯವಹಾರಗಳಲ್ಲಿ ಕ್ರಮಬದ್ಧತೆಯನ್ನು ತರಲಿದೆ.

220) ಯಾವ ಪ್ರದೇಶದಲ್ಲಾದರೂ ನೋಂದಣಿ ಮಾಡಿಸುವ ಪದ್ಧತಿಯನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಜಾರಿಗೆ ತರಲಾಗಿದೆ. ನಾಗರಿಕರಿಗೆ ಭೂಮಿ ಇರುವಂಥ ಪ್ರದೇಶದ ಯಾವ ಭಾಗದಲ್ಲಿಯಾದರೂ ನೋಂದಣಿ ಮಾಡಿಸುವ ಸ್ವಾತಂತ್ರ್ಯವನ್ನು ಕಲ್ಪಿಸಲು ಎಲ್ಲಾ ಜಿಲ್ಲೆಗಳಲ್ಲಿಯೂ ಈ ಸುಲಭ ಸೌಲಭ್ಯವನ್ನು ವಿಸ್ತರಿಸಲು ಉದ್ದೇಶಿಸಲಾಗಿದೆ. 2012–13ನೇ ಸಾಲಿನಲ್ಲಿ ನೋಂದಣಿ ಮಾಡಿಸುವ ಪ್ರತಿ ದಸ್ತಾವೇಜಿನ ಭಾಗವಾಗಿ ಏಕರೀತಿ ಇಂಡೆಕ್ಸ್ ಹಾಳೆಯನ್ನು ಕಡ್ಡಾಯಗೊಳಿಸುವುದರ ಮೂಲಕ ನೋಂದಣಿ ಪ್ರಕ್ರಿಯೆಯಲ್ಲಿ ಮತ್ತಷ್ಟು ಸುಧಾರಣೆಗಳನ್ನು ತರಲಾಗುವುದು.

221) ಆಡಳಿತ ಸುಧಾರಣೆಗಳ ಆಯೋಗದ ಶಿಫಾರಸ್ಸಿನ ಅನುಸಾರ ಭೂಮಿಯಲ್ಲಿ ಮ್ಯುಟೇಷನ್ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಸಾಕಷ್ಟು ಸುರಕ್ಷತಾ ಕ್ರಮಗಳೊಂದಿಗೆ ಭಾವಿತ ಮ್ಯುಟೇಷನ್ ಪರಿಕಲ್ಪನೆಯನ್ನು ಅನುಷ್ಠಾನಗೊಳಿಸಲಾಗುವುದು. ಕಂದಾಯ ಇಲಾಖೆ ಅಧಿಕಾರಿಗಳ ನಿಗದಿತ ಕಾಲಮಿತಿಯೊಳಗೆ ಮನವಿ ಬಗ್ಗೆ ನಿರ್ಧರಿಸಲು ವಿಫಲವಾದರೆ ಭೂಮಿ

ವ್ಯವಸ್ಥೆಯು ನಿಗದಿತ ಅವಧಿಯ ತರುವಾಯ ಈ ಪರಿಕಲ್ಪನೆ ಮೇರೆಗೆ ಮ್ಯುಟೇಷನನ್ನು ತಾನಾಗಿಯೇ ಅನುಮೋದಿಸಲ್ಪಡುತ್ತದೆ.

222) ಭೂಮಿ ಮತ್ತು ಕಾವೇರಿ ವ್ಯವಸ್ಥೆಯ ನಡುವಿನ ವಿದ್ಯುನ್ಮಾನ ಸಂಯೋಜನೆ ಮತ್ತು ಪರಿಚ್ಛಿನ್ನತೆಯನ್ನು ಬಹುಪಾಲು ಪೂರ್ಣಗೊಳಿಸಲಾಗಿದೆ. 2012-13ನೇ ಸಾಲಿನಲ್ಲಿ ಒಟ್ಟು ಭೂ ನಿರ್ವಹಣೆಯಲ್ಲಿ ಮುಂದಿನ ಕ್ರಮವನ್ನು ಭೂಮಿ, ಕಾವೇರಿ ಮತ್ತು ಮೋಜಣಿ ವ್ಯವಸ್ಥೆಗಳ ನಡುವೆ ಸಂಪೂರ್ಣ ವಿದ್ಯುನ್ಮಾನ ಸಂಯೋಜನೆಯನ್ನು ಸ್ಥಾಪಿಸುವುದರ ಮೂಲಕ ಕೈಗೊಳ್ಳಲಾಗುವುದು. ಭೂ ನಿರ್ವಹಣೆ ವ್ಯವಸ್ಥೆಗಳಲ್ಲಿ ಇದು ಇಡೀ ದೇಶದಲ್ಲಿಯೇ ಮತ್ತೊಂದು ಪ್ರಥಮ ಕ್ರಮವೆನಿಸಲಿದೆ.

223) ಸರ್ಕಾರಿ ಭೂಮಿಗಳನ್ನು ರಕ್ಷಿಸಲು ಕರ್ನಾಟಕ ಸಾರ್ವಜನಿಕ ಭೂಮಿ ನಿಗಮಕ್ಕೆ 10 ಕೋಟಿ ರೂ. ಗಳನ್ನು ಒದಗಿಸಲಾಗುತ್ತಿದೆ.

224) ರಾಜ್ಯದಲ್ಲಿ ಅನೇಕ ಜನರು ಸರ್ಕಾರಿ ಜಮೀನುಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಿಕೊಂಡು ವಾಸ ಮಾಡುತ್ತಿದ್ದಾರೆ. ಇವರಲ್ಲಿ ಅನೇಕ ಜನ ಬಡವರು, ಹಿಂದುಳಿದ ವರ್ಗದವರಿದ್ದು ಇವರಲ್ಲಿ ಅರ್ಹರಾದವರಿಗೆ ಮನೆಗಳ ಮೇಲಿನ ಹಕ್ಕುಗಳನ್ನು ನೀಡುವ ಹಿತದೃಷ್ಟಿಯಿಂದ ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94-ಸಿ ಅಡಿಯಲ್ಲಿ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸುವ ಸಲುವಾಗಿ ತಿದ್ದುಪಡಿ ತರಲು ಸರ್ಕಾರವು ಉದ್ದೇಶಿಸಿದೆ. ಈ ತಿದ್ದುಪಡಿಯನ್ನು ತರುವಾಗ ಕೆಲವೊಂದು ಷರತ್ತುಗಳನ್ನು ವಿಧಿಸಿ ಈಗಾಗಲೇ ಮನೆ ಅಥವಾ ನಿವೇಶನಗಳನ್ನು ಹೊಂದಿರುವವರಿಗೆ ಹೊಸದಾಗಿ ಜಮೀನು ಮಂಜೂರು ಮಾಡದೇ ಅವಶ್ಯಕತೆಗೆ ಅನುಸಾರವಾಗಿ ಅರ್ಹರಿಗೆ ಮಾತ್ರ ಅವರ ವಾಸದ ಮನೆಯಡಿ ಸ್ಥಳವನ್ನು ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗುವುದು. ಇದಲ್ಲದೆ ಯಾವುದೇ ಕಾರಣಕ್ಕೂ ಅರಣ್ಯ ಭೂಮಿ, ಕೆರೆ ಅಂಗಳ, ನೀರು ಕಾಲುವೆಗಳು, ಉದ್ಯಾನವನ ಸರ್ಕಾರಕ್ಕೆ ಉಪಯೋಗವಾಗುವಂತಹ ಜಮೀನುಗಳು ಇತ್ಯಾದಿ ಪ್ರಕರಣಗಳನ್ನು ಪರಿಗಣಿಸಬಾರದೆಂಬ ನಿಬಂಧನೆಗಳನ್ನು ವಿಧಿಸಲಾಗುವುದು.

225) ಕೊಪ್ಪಳ ನಗರದ ಗವಿಸಿದ್ದೇಶ್ವರ ಮಠಕ್ಕೆ 50 ಲಕ್ಷ ರೂ.ಗಳ ಅನುದಾನ ಒದಗಿಸಲಾಗುವುದು.

226) ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠಕ್ಕೆ 2 ಕೋಟಿ ರೂ.ಗಳ ಅನುದಾನ ನೀಡಲಾಗುವುದು. ತಿಪಟೂರು ತಾಲ್ಲೂಕಿನ ಶ್ರೀ ಕಾಡಸಿದ್ದೇಶ್ವರ ಶ್ರೀ ಮಠಕ್ಕೆ 1 ಕೋಟಿ ರೂ.ಗಳ ಅನುದಾನವನ್ನು ನೀಡಲಾಗುವುದು.

227) ಬೆಂಗಳೂರಿನ ಕೆಂಗೇರಿ ಬಳಿ ಇರುವ ರಾಮೋಹಳ್ಳಿಯಲ್ಲಿ ಸ್ಥಾಪಿಸಲಿರುವ ತರಬೇತಿ ಹಾಗೂ ಸಂಶೋಧನಾ ಕೇಂದ್ರಕ್ಕಾಗಿ ಶ್ರೀ ಸಿದ್ಧಾರೂಢ ಮಿಷನ್‌ಗೆ 1 ಕೋಟಿ ರೂ.ಗಳ ಅನುದಾನ ನೀಡಲಾಗುವುದು.

228) ಹೊರರಾಜ್ಯದ ಛತ್ರಗಳ ನಿರ್ವಹಣೆಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

229) ರುದ್ರಭೂಮಿ ನಿರ್ವಹಣೆಗಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಒಳಾಡಳಿತ

230) ಸರ್ಕಾರದ ಅತ್ಯಂತ ಹೆಚ್ಚಿನ ಆದ್ಯತೆಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆಯೂ ಒಂದು. ಈ ಜವಾಬ್ದಾರಿಯನ್ನು ನಿರ್ವಹಿಸಲು ಪೊಲೀಸ್ ಇಲಾಖೆಗೆ ಅಗತ್ಯ ಬೆಂಬಲವನ್ನು ಒದಗಿಸಲಾಗುತ್ತಿದೆ.

231) ಬೆಂಗಳೂರಿನಲ್ಲಿ 3 ಸಂಚಾರಿ ಪೊಲೀಸ್ ಠಾಣೆಗಳೂ ಸೇರಿದಂತೆ 10 ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗುತ್ತದೆ. ಸಂಚಾರಿ ಪೊಲೀಸರಿಗಾಗಿ 20 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

232) ಹಾಲಿ ಇರುವ ಮನೆಗಳ ನಿರ್ವಹಣೆ ಮತ್ತು ದುರಸ್ತಿಗಾಗಿ 50 ಕೋಟಿ ರೂ.ಗಳನ್ನು ಒದಗಿಸುವುದರ ಜೊತೆಗೆ ಪೊಲೀಸ್ ಸಿಬ್ಬಂದಿಗಳಿಗೆ ಹೆಚ್ಚಿನ ವಸತಿ ಗೃಹಗಳನ್ನು ನಿರ್ಮಿಸುವುದಕ್ಕಾಗಿ 50 ಕೋಟಿ ರೂ.ಗಳನ್ನು ಒದಗಿಸಲಾಗುತ್ತಿದೆ.

233) ಪೊಲೀಸ್ ಸಿಬ್ಬಂದಿಗಳಿಗೆ ಹಾಲಿ ನೀಡುತ್ತಿರುವ ಸಮವಸ್ತ್ರದೊಂದಿಗೆ ಮತ್ತೊಂದು ಜೊತೆ ಸಮವಸ್ತ್ರವನ್ನು ಒದಗಿಸಲಾಗುವುದು.

234) ಅಗ್ನಿಶಾಮಕ ಕಟ್ಟಡಗಳ ನಿರ್ಮಾಣ ಮತ್ತು ಸಾಧನ ಸಾಮಗ್ರಿಗಳಿಗಾಗಿ 25 ಕೋಟಿ ರೂ.ಗಳನ್ನು ಒದಗಿಸಲಾಗಿದೆ. 2012-13ನೇ ಸಾಲಿನಲ್ಲಿ 3 ಹೊಸ ಅಗ್ನಿಶಾಮಕ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

235) ಬಂದೀಖಾನೆಗಳ ಆಧುನೀಕರಣಕ್ಕಾಗಿ 10 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ನ್ಯಾಯಾಂಗ ಮೂಲ ಸೌಕರ್ಯ

236) ನ್ಯಾಯಾಂಗ ಆಡಳಿತಕ್ಕೆ ಸಾಕಷ್ಟು ಮೂಲ ಸೌಕರ್ಯ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. 43 ನೂತನ ನ್ಯಾಯಾಲಯ ಕಟ್ಟಡಗಳು, 193 ನೂತನ ವಸತಿ ಗೃಹಗಳು, ಉನ್ನತ ನ್ಯಾಯಾಂಗ ಅಧಿಕಾರಿಗಳಿಗಾಗಿ 15 ಗೃಹಗಳು ಮತ್ತು ಬೆಂಗಳೂರಿನಲ್ಲಿ ಒಂದು ಅತಿಥಿ ಗೃಹ. ಇವಿಷ್ಟನ್ನು 280 ರೂ.ಗಳ ಒಟ್ಟು ಮೂಲ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಅನುಮೋದನೆ ನೀಡಲಾಗಿದೆ. 2011-12ನೇ ಸಾಲಿನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಿಗೆ ಡೀಸೆಲ್ ಜನರೇಟರ್‌ಗಳನ್ನು ಒದಗಿಸುವುದು ಒಳಗೊಂಡಂತೆ ನ್ಯಾಯಾಂಗ ಮೂಲ ಸೌಕರ್ಯಕ್ಕಾಗಿ 142 ಕೋಟಿ ರೂ.ಗಳಷ್ಟು ವೆಚ್ಚವಾಗಲಿದೆ. 2012-13ನೇ ಸಾಲಿನಲ್ಲಿ ಇದಕ್ಕಾಗಿ 155 ಕೋಟಿ ರೂ.ಗಳ ಅನುದಾನವನ್ನು ಕಲ್ಪಿಸಲಾಗಿದೆ.

237) 13ನೇ ಹಣಕಾಸು ಆಯೋಗ ಅನುದಾನದಿಂದ ಒದಗಿಸಲಾಗುವ 269 ಕೋಟಿ ರೂ.ಗಳ ಒಟ್ಟು ವೆಚ್ಚದಲ್ಲಿ ಮುಂದಿನ ಐದು ವರ್ಷಗಳ ಕಾಲಾವಧಿಯಲ್ಲಿ ನ್ಯಾಯ ಪ್ರದಾನವನ್ನು ಉತ್ತಮಪಡಿಸಲು ವಿಸ್ತೃತ ಮುನ್ನೋಟ ಮತ್ತು ಕಾರ್ಯ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ಸಾರಿಗೆ

238) ಸರಕು ಸಾಗಣೆ ವಾಹನಗಳಲ್ಲಿ ನಿಗದಿತ ತೂಕಕ್ಕಿಂತ ಹೆಚ್ಚು ಹೊರೆಯನ್ನು ಹೇರುವುದನ್ನು ನಿಯಂತ್ರಿಸುವ ಸಲುವಾಗಿ, ಕೋಗ್ನಳ್ಳಿ ಮತ್ತು ಹುಮ್ನಾಬಾದ್ ಗಡಿಯಲ್ಲಿರುವ ಚೆಕ್‌ಪೋಸ್ಟುಗಳಲ್ಲಿ ತೂಕ ಹಾಕಿ ಮುಂದೆ ಸಾಗುವ (weigh in motion) ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು.

239) ತ್ವರಿತ ಸೇವೆಯನ್ನು ಸಲ್ಲಿಸುವುದಕ್ಕಾಗಿ ಅಧಿಕೃತ ವ್ಯಾಪಾರಿಗಳಿಂದ ವಾಹನ ನೋಂದಣಿ ದತ್ತಾಂಶವನ್ನು ಆನ್‌ಲೈನ್‌ನಲ್ಲಿ ಸಂಗ್ರಹಿಸುವ ಪದ್ಧತಿಯನ್ನು ಜಾರಿಗೊಳಿಸಲಾಗುವುದು.

240) ಚಾಲಕರಿಗೆ ವಾಹನ ಚಾಲನೆ ಪರವಾನಗಿಯನ್ನು ನೀಡುವುದಕ್ಕೆ ಮೊದಲು ಅವರ ಚಲನ ಕೌಶಲತೆಯನ್ನು ವೈಜ್ಞಾನಿಕವಾಗಿ ಮತ್ತು ಕರಾರುವಾಕ್ಕಾಗಿ ಪರೀಕ್ಷಿಸುವುದಕ್ಕಾಗಿ ಹಾಸನ, ಗುಲ್ಬರ್ಗಾ ಮತ್ತು ಬೆಂಗಳೂರಿನ (ಎಲೆಕ್ಟ್ರಾನಿಕ್ ಸಿಟಿ) ಪ್ರಾದೇಶಿಕ ಸಾರಿಗೆ ಅಧಿಕಾರಿ ಕಚೇರಿಗಳ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ವಾಹನ ಪರೀಕ್ಷಾ ಪಥಗಳನ್ನು ಸ್ಥಾಪಿಸಲಾಗುವುದು.

241) ಮೈಸೂರು ಮತ್ತು ಧಾರವಾಡ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ವ್ಯಾಪ್ತಿಯಲ್ಲಿ ವಾಹನ ತಪಾಸಣೆ ಮತ್ತು ಪ್ರಮಾಣೀಕರಣ ಕೇಂದ್ರವನ್ನು ಪ್ರಾರಂಭಿಸಲಾಗುವುದು.

242) ಈ ಉಪಕ್ರಮಗಳಿಗಾಗಿ 30 ಕೋಟಿ ರೂಫಾಯಿಗಳನ್ನು ಒದಗಿಸಲಾಗುತ್ತಿದೆ.

243) ಪ್ರಮುಖ ಸ್ಥಳಗಳಲ್ಲಿ ರಸ್ತೆಬದಿ ಸೌಲಭ್ಯಗಳನ್ನು ಒದಗಿಸಲಾಗುವುದು.

244) ಟ್ರಕ್ ಟರ್ಮಿನಲ್‌ಗಳನ್ನು ಸ್ಥಾಪಿಸುವುದಕ್ಕಾಗಿ 30 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತಿದೆ.

ಆಹಾರ ಮತ್ತು ನಾಗರಿಕ ಸರಬರಾಜು

245) ಸಾಗಾಣಿಕೆ ಜವಾಬ್ದಾರಿಯನ್ನು ಗುತ್ತಿಗೆದಾರರಿಂದ ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ವಹಿಸುವುದೂ ಸೇರಿದಂತೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆಯನ್ನು ಸುಧಾರಿಸಲು ವಿಶೇಷ ಆದ್ಯತೆಯನ್ನು ನೀಡಲಾಗಿದೆ. 2012–13ನೇ ಸಾಲಿನಲ್ಲಿ, ಪ್ರಾಯೋಗಿಕ (pilot) ಆಧಾರದ ಮೇಲೆ ಸ್ವತಃ ಸರ್ಕಾರಿ ಏಜೆನ್ಸಿಗಳೇ ಸಾಗಾಣಿಕೆಯ ಜವಾಬ್ದಾರಿಯನ್ನು ತೆಗೆದು ಕೊಳ್ಳುತ್ತವೆ.

246) ಸರ್ಕಾರವು ವಿವರವಾದ ಮಾಹಿತಿ ತಂತ್ರಜ್ಞಾನ ಆಧಾರಿತ ಪದ್ಧತಿಯನ್ನು ಜಾರಿಗೆ ತಂದಿದ್ದರಿಂದಾಗಿ ಸುಮಾರು 40 ಲಕ್ಷದಷ್ಟು ನಕಲಿ ಅಥವಾ ಪುನರಾವರ್ತಿತ ಪಡಿತರ ಚೀಟಿಗಳನ್ನು ರದ್ದುಪಡಿಸಲಾಯಿತು.

ಯೋಜನೆ

247) ಭಾರತ ಸರ್ಕಾರವು ರೂಪಿಸಿದ ಫಲಿತಾಂಶ ಆಧಾರಿತ ಮೇಲ್ವಿಚಾರಣೆಯನ್ನು (Results Framework documents) ಪ್ರಾರಂಭಿಸಿದ ಕೆಲವೇ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಒಂದಾಗಿದೆ. ಸಾರ್ವಜನಿಕ ವೆಚ್ಚದ ಸಾಮರ್ಥ್ಯವನ್ನು ಹೆಚ್ಚಿಸಲು ಪರಿಣಾಮಕಾರಿ ಫಲಿತಾಂಶ ಮಾಪನ ಮತ್ತು ಇತರ ರಾಷ್ಟ್ರಗಳ ಉತ್ತಮ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಕಾರ್ಯಸಾಧನೆಯನ್ನು ಮಾಡಲಿ ಇಲಾಖೆಗಳ ಸಾಂಸ್ಥಿಕ ಸಾಮರ್ಥ್ಯವನ್ನು ಸುಧಾರಿಸಲು ವಿಶ್ವಬ್ಯಾಂಕಿನ ನೆರವಿನೊಂದಿಗೆ ಒಂದು ಹೊಸ ಪ್ರಾಯೋಗಿಕ (ಪೈಲಟ್) ಯೋಜನೆಯನ್ನು ರೂಪಿಸಲಾಗಿದೆ.

248) ಕರ್ನಾಟಕ ಮಾನವ ಅಭಿವೃದ್ಧಿ ವರದಿ ಹಾಗೂ ಎಲ್ಲಾ ಜಿಲ್ಲೆಗಳ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹೊರತರಲಾಗುವುದು. ಜಿಲ್ಲಾ ಮತ್ತು ಪ್ರಾದೇಶಿಕ ನಿರ್ದಿಷ್ಟಿತ ವಿಷಯಗಳನ್ನು ಗುರುತಿಸಿ, ಚಾಲ್ತಿಯಲ್ಲಿರುವ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಗಳನ್ನು ಅಳೆದು ಅತ್ಯುತ್ತಮ ಫಲಿತಾಂಶಕ್ಕಾಗಿ ಅಳವಡಿಸಿ ಕೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಈ ವರದಿಗಳಲ್ಲಿ ಸಲಹೆಗಳನ್ನು ಒಳಗೊಂಡಿರುತ್ತವೆ.

249) ಪಾರದರ್ಶಕ ಸಂಪನ್ಮೂಲ ಹಂಚಿಕೆ, ಅತ್ಯುತ್ತಮ ವಿಕೇಂದ್ರೀಕೃತ ಮೇಲ್ವಿಚಾರಣೆ ಮತ್ತು ಎಲ್ಲಾ ಯೋಜನೆ ಮತ್ತು ಕಾರ್ಯ ಕ್ರಮಗಳ ಸುಧಾರಿತ ಅನುಷ್ಠಾನಕ್ಕಾಗಿ ಸಮಗ್ರ ಸಂಯೋಜಿತ ನಿರ್ಣಯ ಬೆಂಬಲ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು.

250) ಸಾಕ್ಷ್ಯ ಆಧಾರಿತ ಕಾರ್ಯನೀತಿ ರಚನೆ ಹಾಗೂ ಕಾರ್ಯಕ್ರಮ ಅಭಿವೃದ್ಧಿಗಾಗಿ ಫಲಿತಾಂಶ ಕೇಂದ್ರಿತ ಮತ್ತು ಪ್ರತಿಫಲ ಆಧಾರಿತ ಮೌಲ್ಯಮಾಪನಕ್ಕಾಗಿ 2011–12ನೇ ಸಾಲಿನಲ್ಲಿ ಸ್ಥಾಪಿಸಲಾದ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು ಬಲಪಡಿಸಲಾಗುವುದು.

ಇ-ಆಡಳಿತ

251) ಫಲಾನುಭವಿ ಕೇಂದ್ರಿತ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವಾಗ ಇದುವರೆವಿಗೆ ಅದರ ಲಾಭವನ್ನು ಪಡೆಯದೇ ಇರುವ ಅರ್ಹ ವ್ಯಕ್ತಿಗಳಿಗೆ ಅದನ್ನು ತಲುಪಿಸುವುದು ಹಾಗೂ ಕೆಲವೇ ವ್ಯಕ್ತಿಗಳು ಹಲವು ಲಾಭಗಳನ್ನು ಪಡೆಯುವುದರಿಂದ ಆಗುವ ಸೋರುವಿಕೆಯನ್ನು ತಡೆಯುವುದು ಎದುರಿಸಬೇಕಾಗುವ ಪ್ರಮುಖ ಸವಾಲಾಗಿದೆ. ಈ ಸವಾಲುಗಳನ್ನು ಎದುರಿಸಲು ಹಾಗೂ ರಾಜ್ಯದ ನಿವಾಸಿಗಳಿಗೆ ಈ ಕಾರ್ಯಕ್ರಮಗಳ ಲಾಭ ವಿತರಣೆಯ ನಿರ್ವಹಿಸುವಿಕೆಯನ್ನು ಉತ್ತಮ ಪಡಿಸಲು ಮುಂದಿನ 9 ತಿಂಗಳಲ್ಲಿ ಕರ್ನಾಟಕ ರೆಸಿಡೆಂಟ್ ಡಾಟಾ ಹಬ್‌ನ್ನು ಸ್ಥಾಪಿಸಲಾಗುವುದು. ಈ ಹಬ್ ಪ್ರತಿ ವ್ಯಕ್ತಿಯನ್ನು ವಿಶಿಷ್ಟ ರೀತಿಯಲ್ಲಿ ಗುರುತಿಸುತ್ತದೆ, ಹಾಗೂ ರಾಜ್ಯದ ನಿವಾಸಿಗಳಿಗೆ ಒದಗಿಸಲಾದ ಲಾಭಗಳ ವಿವರಗಳನ್ನು ಒಳಗೊಂಡಿರುತ್ತದೆ.

252) ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿನ ಶೇಕಡ 95 ರಷ್ಟು ನಿವಾಸಿಗಳನ್ನು ಒಳಗೊಂಡಂತೆ ರಾಜ್ಯದ 1.4 ಕೋಟಿ ನಿವಾಸಿಗಳು ವಿಶಿಷ್ಟ ಗುರುತಿನ ಚೀಟಿ (ಯು.ಐ.ಡಿ) ಆಧರಿಸಿ ಪ್ರಮುಖ ಫಲಾನುಭವಿ ಕೇಂದ್ರಿತ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಪೈಲಟ್ ಯೋಜನೆಯನ್ನು ಪ್ರಾರಂಭಿಸಿ, ಬಳಿಕ ಅದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಗುವುದು.

ಸರ್ಕಾರಿ ನೌಕರರು

253) 2011-12ನೇ ಸಾಲಿನ ಮುಂಗಡ ಪತ್ರದಲ್ಲಿ ಘೋಷಿಸಿರುವಂತೆ ಸರ್ಕಾರಿ ನೌಕರರ ಮತ್ತು ನಿವೃತ್ತಿದಾರರ ಮನವಿಗಳನ್ನು ಪರಿಗಣಿಸಲು ಸರ್ಕಾರವು ಅಧಿಕಾರಿಗಳ ವೇತನ ಸಮಿತಿಯನ್ನು ರಚಿಸಿತ್ತು. ಸರ್ಕಾರವು ಪ್ರತಿ 6 ರಿಂದ 8 ವರ್ಷಗಳಿಗೆ ವೇತನ ಮತ್ತು ನಿವೃತ್ತಿ ವೇತನವನ್ನು ಪರಿಷ್ಕರಿಸುತ್ತಿದೆ. ಕಳೆದ ಪರಿಷ್ಕರಣೆಯನ್ನು 2006ರಲ್ಲಿ ಮಾಡಲಾಗಿತ್ತು.

254) ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅಧಿಕಾರಿಗಳ ವೇತನ ಸಮಿತಿಯು ವೇತನ ಮತ್ತು ಭತ್ಯೆಗಳ ಬಗ್ಗೆ ನೀಡಿರುವ ಶಿಫಾರಸ್ಸುಗಳ ಅಂಗೀಕಾರವನ್ನು ಘೋಷಿಸಲು ನನಗೆ ಸಂತಸವೆನಿಸುತ್ತಿದೆ. ಇದನ್ನು 1.4.2012 ದಿನಾಂಕದಿಂದ ಜಾರಿಗೆ ತರಲಾಗುವುದು. ವೇತನ ಮತ್ತು

ಇತರ ಭತ್ಯೆಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಶಿಫಾರಸ್ಸುಗಳನ್ನು ಅಂಗೀಕರಿಸುವ ದೃಷ್ಟಿಯಿಂದ ಪ್ರಸ್ತುತ ಇರುವ ತುಟ್ಟಿಭತ್ಯೆಯನ್ನು ಮತ್ತು 1ನೇ ಜನವರಿ 2012 ರಂದು ಬಾಕಿಯಿರುವ ತುಟ್ಟಿಭತ್ಯೆ ಕಂತನ್ನು ಹೆಚ್ಚಳ ವಾಗಿರುವ ಶೇಕಡ 22.5 ಪ್ರಮಾಣದೊಂದಿಗೆ ಮೂಲವೇತನ ಮತ್ತು ನಿವೃತ್ತಿ ವೇತನದಲ್ಲಿ ವಿಲೀನಗೊಳಿಸಲಾಗುವುದು. ಈ ಹೆಚ್ಚಳದಲ್ಲಿ ಈಗಾಗಲೇ 1ನೇ ನವೆಂಬರ್ 2011 ರಿಂದ ಜಾರಿಗೆ ಬರುವಂತೆ ಮಂಜೂರು ಮಾಡಿರುವ ಮಧ್ಯಂತರ ಪರಿಹಾರವು ಒಳಗೊಂಡಿರುತ್ತದೆ. ವೇತನ ನಿವೃತ್ತಿ ವೇತನದ ಪರಿಷ್ಕರಣೆಯ ಕಾರಣದಿಂದಾಗಿ ಒಟ್ಟು ಹೆಚ್ಚುವರಿ ವಾರ್ಷಿಕ ವೆಚ್ಚ 4450 ಕೋಟಿ ರೂ. ಗಳಾಗುತ್ತದೆ.

255) ಈ ತೀರ್ಮಾನಕ್ಕೆ ಬರುವಲ್ಲಿ, ಸರ್ಕಾರವು ತನ್ನ ಶಾಸನ ಬದ್ಧ ಜವಾಬ್ದಾರಿಗಳಿಗಾಗಿನ ಆರ್ಥಿಕ ಅಗತ್ಯತೆಗಳು ಮತ್ತು ಅಭಿವೃದ್ಧಿ ಬದ್ಧತೆಗಳು ಹಾಗೂ ಜವಾಬ್ದಾರಿಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸುವುದಕ್ಕಾಗಿ ಸಾಧನವಾಗಿರುವ ನೌಕರರಿಗೆ ಸೂಕ್ತ ವೇತನ ನೀಡುವ ಅಗತ್ಯ ಇವುಗಳ ನಡುವೆ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸಿದೆ.

256) ದಿನಗೂಲಿ ನೌಕರರ ಸಂಭಾವನೆಯನ್ನು ಪ್ರತಿ ತಿಂಗಳಿಗೆ 1000 ರೂ. ಗಳಷ್ಟು ಹೆಚ್ಚಿಸಲಾಗುವುದು.

ವೆಚ್ಚ ಸುಧಾರಣೆ

257) ವೆಚ್ಚ ಸುಧಾರಣಾ ಆಯೋಗವು ತನ್ನ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ್ದು, ಒಟ್ಟು 4 ವರದಿಗಳನ್ನು ನೀಡಿದೆ. ಅನೇಕ ಇಲಾಖೆಗಳ ವ್ಯಾಪ್ತಿಯನ್ನು ಒಳಗೊಂಡಂತೆ ಹಾಗೂ ಕೆಲವು ಇಲಾಖೆಗಳಿಗೆ ವಿಶಿಷ್ಟವಾದ ಶಿಫಾರಸ್ಸುಗಳನ್ನು ಆಯೋಗ ನೀಡಿದೆ. ಈ ಶಿಫಾರಸ್ಸುಗಳಿಗೆ ಅಂತರ ಇಲಾಖೆ ಸಮಾಲೋಚನೆ ಕೂಡ ಅಗತ್ಯವಿರುತ್ತದೆ. ಇನ್ನು ಕೆಲವು ಪ್ರಕರಣಗಳನ್ನು ಆರ್ಥಿಕ ಹಾಗೂ ಯೋಜನಾ ಇಲಾಖೆಗಳು ಪ್ರಸ್ತಾಪಿಸಿವೆ ಅಥವಾ ಈಗಾಗಲೇ ಕ್ರಮ ಜರುಗಿಸಿರುತ್ತವೆ. ಕೆಲವು ಪ್ರಕರಣಗಳಲ್ಲಿ ಆಡಳಿತ ಇಲಾಖೆಗಳು ಕ್ರಮ ತೆಗೆದುಕೊಳ್ಳುತ್ತಿವೆ.

258) ಈ ಶಿಫಾರಸ್ಸುಗಳಲ್ಲಿ ಇನ್ನಿತರ ವಿಷಯಗಳಲ್ಲದೇ, ಯೋಜನೆ ಜಾರಿ, ಯೋಜನೆ ಗಾತ್ರ. ಯೋಜನೆಗಳ ಮುಕ್ತಾಯದ ನಿಬಂಧನೆ, ಯೋಜನಾ ಆದ್ಯತೆ ಬದಲಾವಣೆ, ವಿಷಯ ಸೇರ್ಪಡೆ, ಬಂಡವಾಳ ಹೂಡಿಕೆ

ಹೆಚ್ಚಳ, ಪೂರ್ವಭಾವಿ ಮೌಲ್ಯಮಾಪನ ಹಾಗೂ ಯೋಜನೆಗಳ ಗುಣ ವಿಮರ್ಶೆ, ಯೋಜನೆಗಳ ಕಾರ್ಯನಿರ್ವಹಣಾ ತಂತ್ರದ ಅಳವಡಿಕೆ, ಯೋಜನೆಗಳ ಸ್ವತಂತ್ರ ಮೌಲ್ಯಮಾಪನ, ಸಹಾಯಧನ ಅಲ್ಲದೆ ಪ್ರಾಂತೀಯ ಅಸಮತೋಲನದ ಪರಿಣಾಮಗಳ ಅಧ್ಯಯನಗಳನ್ನು ಒಳಗೊಂಡಿದೆ.

259) ಬಹುತೇಕ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಸಮಾಲೋಚನಾ ಪ್ರಕ್ರಿಯೆಯನ್ನು ಮುಗಿಸಿ 6 ತಿಂಗಳ ಅವಧಿಯೊಳಗೆ ಒಂದು ನಿರ್ಧಾರಕ್ಕೆ ಬರಲು ಸರ್ಕಾರ ಯೋಜಿಸಿದೆ.

ವಿತ್ತೀಯ ಕಾರ್ಯನೀತಿ ಸಂಸ್ಥೆ

260) ಸರ್ಕಾರಿ ನೌಕರರ ಸಾಮರ್ಥ್ಯ ವರ್ಧನೆ ಹಾಗೂ ಸೇವಾ ಸಲ್ಲಿಕೆ ವ್ಯವಸ್ಥೆಯನ್ನು ಉತ್ತಮಗೊಳಿಸುವುದು, ಕ್ರಿಯಾಶೀಲ ವಿತ್ತೀಯ ಪರಿಸರ ಹಾಗೂ ಆರ್ಥಿಕ ಅಭಿವೃದ್ಧಿ ಸವಾಲನ್ನು ಸಮರ್ಥವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ. ಈ ದಿಸೆಯಲ್ಲಿ ಯೋಜನಾ ಆಯೋಗದ ನೆರವಿನಿಂದ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಕೆಂಗೇರಿ ಯಲ್ಲಿನ ಹೊಸ ಕ್ಯಾಂಪಸ್‌ನಲ್ಲಿ ಮುಂದಿನ ಆರು ತಿಂಗಳೊಳಗೆ ಪೂರ್ಣ ಪ್ರಮಾಣದ ಕಾರ್ಯಾಚರಣೆ ಪ್ರಾರಂಭವಾಗುತ್ತದೆ.

ತೆರಿಗೆ ಪ್ರಸ್ತಾವನೆಗಳು

ವಾಣಿಜ್ಯ ತೆರಿಗೆಗಳು

261) 2011–12ರ ಆಯವ್ಯಯ ಅಂದಾಜಿನಲ್ಲಿ ನಿಗದಿಪಡಿಸಿದ ತೆರಿಗೆ ಸಂಗ್ರಹಣೆ ಗುರಿಯನ್ನು ಪ್ರಸ್ತುತ ವರ್ಷದಲ್ಲೂ ಕೂಡ ವಾಣಿಜ್ಯ ತೆರಿಗೆ ಇಲಾಖೆ ಗುರಿ ಮೀರಿ ಸಾಧನೆ ಮಾಡುವ ಸಾಧ್ಯತೆ ಇದೆ. ಪ್ರಸ್ತುತ ವರ್ಷಕ್ಕೆ 26,700 ಕೋಟಿ ರೂಪಾಯಿಗಳ ತೆರಿಗೆ ಸಂಗ್ರಹಣೆ ಗುರಿಯಿದ್ದು ಅದಕ್ಕಿಂತ ಕನಿಷ್ಠ 500 ಕೋಟಿ ರೂಪಾಯಿಗಳ ಹೆಚ್ಚಿನ ತೆರಿಗೆ ಸಂಗ್ರಹಣೆ ಆಗುವ ನಿರೀಕ್ಷೆ ಇದೆ. ಇದಕ್ಕಾಗಿ ಕರ್ನಾಟಕದ ತೆರಿಗೆದಾರರಿಗೆ ಧನ್ಯವಾದಗಳನ್ನು ಅರ್ಪಿಸಲು ನಾನು ಇಚ್ಛಿಸುತ್ತೇನೆ. ಇ–ಆಡಳಿತದಲ್ಲಿ ಇಲಾಖೆಯು ಗಮನಾರ್ಹ ಅಭಿವೃದ್ಧಿ ಸಾಧಿಸಿದೆ. ಇದು ಒಂದೆಡೆ ತೆರಿಗೆದಾರರಿಗೆ ತೆರಿಗೆ ಆಡಳಿತವನ್ನು ಅನುಕೂಲವಾಗಿರುವಂತೆ ಮಾಡಿದ್ದು, ಇನ್ನೊಂದೆಡೆ ಇಲಾಖೆಯ ಆಂತರಿಕ ದಕ್ಷತೆಯನ್ನು ಸುಧಾರಿಸುವಲ್ಲಿ ಸಹಕಾರಿಯಾಗಿರುತ್ತದೆ.

ಪ್ರಸ್ತುತ, ತೆರಿಗೆದಾರರು ಮತ್ತು ಇಲಾಖೆಯ ಬಹುತೇಕ ಎಲ್ಲಾ ವಿಷಯ ಗಳಲ್ಲಿನ ಸಂಪರ್ಕಗಳನ್ನು ವಿದ್ಯುನ್ಮಾನ ವಿಧಾನದಲ್ಲಿರುವಂತೆ ಮಾಡಲಾಗಿದೆ. ಕಳೆದ ವರ್ಷ ಆರಂಭಿಸಲಾದ ಇ–ಪಾವತಿ ಪದ್ಧತಿಯನ್ನು ಎಲ್ಲರೂ ಸ್ವಾಗತಿಸಿದ್ದು, ಈ ವಿಧಾನದಲ್ಲಿ ಶೇ.80 ಕ್ಕಿಂತಲೂ ಮಿಗಿಲಾಗಿ ತೆರಿಗೆ ಸಂಗ್ರಹಣೆಯಾಗುತ್ತಿದೆ. ಮುಂದಿನ ವರ್ಷದಲ್ಲಿ ಇಲಾಖೆಯು ಶೇ.100 ರಷ್ಟು ತೆರಿಗೆ ಪಾವತಿಯನ್ನು ಇ–ಪದ್ಧತಿ ಮೂಲಕ ಸಾಧಿಸಲು ಪ್ರಯತ್ನ ಮಾಡುತ್ತದೆ.

ಮೌಲ್ಯವರ್ಧಿತ ತೆರಿಗೆ

262) ತೆರಿಗೆ ಪರಿಹಾರಗಳನ್ನಲ್ಲದೆ ತೆರಿಗೆ ಅನುಸರಣೆಯನ್ನು ಸರಳವಾಗಿಸಲು ಕಾಯ್ದೆ ಮತ್ತು ನಿಯಮಗಳಲ್ಲಿ ಮಾರ್ಪಾಡುಗಳನ್ನು ಕೋರುವ ಹಲವಾರು ಮನವಿಗಳು ಮತ್ತು ಸಲಹೆಗಳನ್ನು ವಾಣಿಜ್ಯೋದ್ಯಮಗಳು ಸಲ್ಲಿಸಿವೆ. ನಾನು ಅವುಗಳನ್ನು ಪರಿಶೀಲಿಸಿದ್ದೇನೆ ಹಾಗೂ ವಿಶೇಷವಾಗಿ ಜನಸಾಮಾನ್ಯರಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಅವರ ಬಹುತೇಕ ಕೋರಿಕೆ ಮತ್ತು ಸಲಹೆಗಳನ್ನು ಅಂಗೀಕರಿಸಲು ಪ್ರಯತ್ನಿಸಿರುತ್ತೇನೆ. ವ್ಯಾಪಾರ ಪಲ್ಲಟವನ್ನು ತಡೆಯಲು ಮತ್ತು ಕಾರ್ಯವಿಧಾನವನ್ನು ಸರಳೀಕರಿಸಲು ಮಾಡಿದಂತಹ ಸಲಹೆಗಳನ್ನು ಸಹ ನಾನು ಪರಿಗಣಿಸಿರುತ್ತೇನೆ.

ಪರಿಹಾರಗಳು :

263) ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ನಾನು ಮುಂದಿನ ಪರಿಹಾರ ಕ್ರಮಗಳನ್ನು ಪ್ರಸ್ತಾವಿಸುತ್ತೇನೆ.

(1) ಭತ್ತ, ಅಕ್ಕಿ, ಗೋಧಿ, ಬೇಳೆಕಾಳುಗಳು ಹಾಗೂ ಅಕ್ಕಿ ಮತ್ತು ಗೋಧಿಯ ಪದಾರ್ಥಗಳ ಮೇಲಿನ ತೆರಿಗೆ ವಿನಾಯಿತಿಯನ್ನು 2012ರ ಏಪ್ರಿಲ್‌ನಿಂದ ಮತ್ತೊಂದು ವರ್ಷದವರೆಗೆ ಮುಂದುವರಿಸಲಾಗುವುದು.

(2) ಬೇಯಿಸಲು ತಯಾರಿಸುವ ಚಪಾತಿ ಮತ್ತು ಪರೋಟಗಳ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5 ಕ್ಕೆ ಇಳಿಸಲಾಗುವುದು.

(3) ಕಚ್ಚಾ ಹತ್ತಿ ಮೇಲಿನ ತೆರಿಗೆಯನ್ನು ಶೇ. 5 ರಿಂದ ಶೇ. 2ಕ್ಕೆ ಇಳಿಸಲಾಗುವುದು.

(4) ಒಣಮೆಣಸಿನಕಾಯಿ ಮೇಲಿನ ತೆರಿಗೆಯನ್ನು ಶೇ.5 ರಿಂದ ಶೇ.2 ಕ್ಕೆ ಇಳಿಸಲಾಗುವುದು. ಇದಲ್ಲದೆ, ಅವುಗಳ ಅಂತರ ರಾಜ್ಯ ಮಾರಾಟ ಮೇಲಿನ ಕೇಂದ್ರ ಮಾರಾಟ ತೆರಿಗೆಯನ್ನು ಶೇ.1 ರಿಂದ ಶೇ. 2 ಕ್ಕೆ ಪರಿಷ್ಕರಿಸಲಾಗುವುದು.

(5) ಸರ್ಜಿಕಲ್ ಪಾದರಕ್ಷೆಗಳ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5ಕ್ಕೆ ಇಳಿಸಲಾಗುವುದು.

(6) ಬ್ರೇಲ್ ಕೈಗಡಿಯಾರಗಳನ್ನು ತೆರಿಗೆಯಿಂದ ವಿನಾಯಿತಿಗೊಳಿಸಲಾಗುವುದು.

(7) ಕಪ್ಪು ಹಲಗೆಗಳ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5ಕ್ಕೆ ಇಳಿಸಲಾಗುವುದು.

(8) ಬಂಗಾರ ಮತ್ತಿತರೆ ಬೆಲೆಬಾಳುವ ಲೋಹಗಳ ಆಭರಣಗಳು ಮತ್ತು ವಸ್ತುಗಳು ಹಾಗೂ ಅಮೂಲ್ಯ ಮತ್ತು ಅರೆ-ಅಮೂಲ್ಯ ಹರಳುಗಳ ಮೇಲಿನ ತೆರಿಗೆಯನ್ನು ಶೇ.2 ರಿಂದ ಶೇ.1ಕ್ಕೆ ಇಳಿಸಲಾಗುವುದು.

(9) ಸಿದ್ಧಪಡಿಸಿದ ಉಡುಪುಗಳ ತಯಾರಿಕೆ ಮತ್ತು ಕಸೂತಿ ಕೆಲಸಗಳ ಗುತ್ತಿಗೆ ಕಾಮಗಾರಿಗಳ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5 ಕ್ಕೆ ಇಳಿಸಲಾಗುವುದು.

(10) ಹೊರದೇಶಕ್ಕೆ ಪ್ರಯಾಣ ಮಾಡುವ ಹಡಗುಗಳಿಗೆ ಮಾರಾಟ ಮಾಡುವ ಫರ್ನೇಸ್ ಆಯಿಲ್ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5ಕ್ಕೆ ಇಳಿಸಲಾಗುವುದು.

(11) ನಾಪ್ತಾ ಮೇಲಿನ ತೆರಿಗೆಯನ್ನು ಶೇ.14 ರಿಂದ ಶೇ.5ಕ್ಕೆ ಇಳಿಸಲಾಗುವುದು.

ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

264) ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳ ವೆಚ್ಚವನ್ನು ಭರಿಸಲು, ತೆರಿಗೆ ದರಗಳನ್ನು ಏರಿಸುವ ಬದಲಾಗಿ, ಇನ್ನು ಹೆಚ್ಚು ಪರಿಣಾಮಕಾರಿಯಾದ ತೆರಿಗೆ ಆಡಳಿತದ ಮೂಲಕ ಸುಧಾರಿತ ತೆರಿಗೆ ಅನುಸರಣೆ ತರುವುದರೊಂದಿಗೆ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸಲು ನಾನು ಪ್ರಸ್ತಾವಿಸುತ್ತೇನೆ. ಅದೇ ವೇಳೆಯಲ್ಲಿ ಸಮಾಜದ ಹಿತದೃಷ್ಟಿಯಿಂದ ಕೆಲವು ಸರಕುಗಳ ಬಳಕೆಯನ್ನು ಕಡಿಮೆ ಮಾಡಲು ಅವುಗಳ ಮೇಲಿನ ತೆರಿಗೆಯನ್ನು ಏರಿಸಲು ಹಾಗೂ ಪ್ರಸ್ತುತ ತೆರಿಗೆ ವಿನಾಯಿತಿಯ ದುರುಪಯೋಗದಿಂದ ಕೆಲವು ಸರಕುಗಳಲ್ಲಿ ಆಗುತ್ತಿರುವ ತೆರಿಗೆ ವಂಚನೆಯನ್ನು ಹತ್ತಿಕ್ಕಲು ಅವುಗಳ ಮೇಲೆ ತೆರಿಗೆ ವಿಧಿಸಲು ನಾನು ಪ್ರಸ್ತಾಪಿಸುತ್ತೇನೆ.

(1) ಬೀಡಿಗಳ ಮೇಲೆ ಶೇ.5ರ ಮೌಲ್ಯವರ್ಧಿತ ತೆರಿಗೆ ವಿಧಿಸಲಾಗುವುದು.

(2) ಸಿಗರೇಟುಗಳು ಮತ್ತು ಇತರೆ ತಂಬಾಕು ಉತ್ಪನ್ನಗಳ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.15ರಿಂದ ಶೇ.17ಕ್ಕೆ ಏರಿಸಲಾಗುವುದು.

(3) ಪ್ಲಾಸ್ಟಿಕ್‌ನಿಂದ ನೇಯ್ದು ಬಟ್ಟೆಗಳ ಮೇಲೆ ಶೇ.5ರ ಮೌಲ್ಯವರ್ಧಿತ ತೆರಿಗೆ ವಿಧಿಸಲಾಗುವುದು.

ಕೇಂದ್ರ ಮಾರಾಟ ತೆರಿಗೆ

ಸುಧಾರಣಾ ಕ್ರಮ :

265) ಒಣಮೆಣಸಿನಕಾಯಿ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.5 ರಿಂದ ಶೇ.2ಕ್ಕೆ ಇಳಿಸುವುದರೊಂದಿಗೆ, ಅವುಗಳ ಅಂತರರಾಜ್ಯ ಮಾರಾಟಗಳ ಮೇಲಿನ ಕೇಂದ್ರ ಮಾರಾಟ ತೆರಿಗೆ ದರವನ್ನು ಶೇ.1 ರಿಂದ ಶೇ.2ಕ್ಕೆ ಪರಿಷ್ಕರಿಸಲು ಪ್ರಸ್ತಾವಿಸಲಾಗಿದೆ.

ಮಾರಾಟ ತೆರಿಗೆ :

266) ಡೀಸೆಲ್ ಮೇಲಿನ ತೆರಿಗೆಯನ್ನು ಶೇ.1.25 ರಷ್ಟು ಇಳಿಸಲು ನಾನು ಪ್ರಸ್ತಾವಿಸುತ್ತೇನೆ. ಆದ್ದರಿಂದ ಡೀಸೆಲ್ ಮೇಲಿನ ತೆರಿಗೆ ಶೇ.18 ರಿಂದ ಶೇ.16.7 ಕ್ಕೆ ಇಳಿಯುತ್ತದೆ.

267) ಹೊರದೇಶಗಳಿಗೆ ಪ್ರಮಾಣ ಮಾಡುತ್ತಿರುವ ಹಡಗುಗಳಿಗೆ ಮಾರಾಟ ಮಾಡುವ ಹೈಫ್ಲಾಶ್ ಹೈಸ್ಪೀಡ್ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಶೇ.18 ರಿಂದ ಶೇ.1 ಕ್ಕೆ ಇಳಿಸಲು ನಾನು ಪ್ರಸ್ತಾವಿಸುತ್ತೇನೆ.

ವಿಲಾಸ ತೆರಿಗೆ:

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು :

268) ತಾತ್ಕಾಲಿಕ ಶೆಡ್‌ಗಳಲ್ಲಿ ನಡೆಸಲಾಗುತ್ತಿರುವ ಕಲ್ಯಾಣ ಮಂಟಪಗಳ ಮೇಲೆ ಶೇ.10 ರಷ್ಟು ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

269) ವಿಚಾರ ಸಂಕಿರಣ ಸಭಾಂಗಣ, ಸಮ್ಮೇಳನ ಸಭಾಂಗಣ ಮತ್ತು ಅಂತಹವುಗಳ ಮೇಲೆ ಶೇ.10 ರಷ್ಟು ತೆರಿಗೆ ವಿಧಿಸಲು ನಾನು ಪ್ರಸ್ತಾವಿಸುತ್ತೇನೆ.

ಕೃಷಿ ವರಮಾನ ತೆರಿಗೆ :

ಪರಿಹಾರ:

270) ಪಾಲುದಾರಿಕೆ ಸಂಸ್ಥೆಗಳನ್ನು ಕೃಷಿ ವರಮಾನ ತೆರಿಗೆಯಿಂದ ವಿನಾಯಿತಿಗೊಳಿಸಲು ನಾನು ಪ್ರಸ್ತಾವಿಸುತ್ತೇನೆ.

ಜೂಜು ತೆರಿಗೆಯಡಿಯಲ್ಲಿ ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮ :

271) ಬೆಂಗಳೂರು ಮತ್ತು ಮೈಸೂರುಗಳಲ್ಲಿ ವ್ಯವಹಾರ ಮಾಡುತ್ತಿರುವ ಖಾಸಗಿ ಬುಕ್‌ಮೇಕರ್‌ಗಳು ಸಂದಾಯ ಮಾಡಬೇಕಾದ ಒಟ್ಟು ಮೊತ್ತದ ತೆರಿಗೆಯನ್ನು ಅನುಬಂಧ–3(ಎ) ನಲ್ಲಿರುವಂತೆ ಏರಿಸಲು ನಾನು ಪ್ರಸ್ತಾವಿಸುತ್ತೇನೆ.

ಸುಧಾರಣಾ ಮತ್ತು ಸರಳೀಕರಣ ಕ್ರಮಗಳು

272) ವಾಣಿಜ್ಯ ತೆರಿಗೆಗಳ ಆಡಳಿತವನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹಲವಾರು ಸುಧಾರಣಾ ಮತ್ತು ಸರಳೀಕರಣ ಕ್ರಮಗಳನ್ನು ಕೈಗೊಳ್ಳಲಾಗುವುದು. ಅವುಗಳ ವಿವರಗಳು ಅನುಬಂಧ–3(ಬಿ) ನಂತಿರುತ್ತವೆ.

ಅಬಕಾರಿ

273) 2011–12ನೇ ಸಾಲಿಗೆ ಅಬಕಾರಿ ಇಲಾಖೆಗೆ 9,200 ಕೋಟಿ ರೂ.ಗಳ ಆದಾಯ ಕ್ರೋಢೀಕರಣ ಗುರಿಯನ್ನು ನಿಗದಿಪಡಿಸಲಾಗಿತ್ತು. ಈ ಗುರಿಯನ್ನು ಮೀರಿ ಸುಮಾರು 300 ಕೋಟಿ ಅಂದರೆ 9,500 ಕೋಟಿ ರೂ.ಗಳ ಗುರಿಯನ್ನು ಇಲಾಖೆ ತಲುಪಲಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. KSBCL ಲಾಭಾಂಶವನ್ನು ಶೇಕಡಾ 0.5 ಕ್ಕೆ ಕಡಿಮೆಗೊಳಿಸಿ, ವ್ಯತ್ಯಾಸದ ಲಾಭಾಂಶವನ್ನು ಹೆಚ್ಚುವರಿ ಅಬಕಾರಿ ಸುಂಕದ ಜೊತೆಗೆ ವಿಲೀನಗೊಳಿಸಲಾಗುವುದು. ವಿಲೀನಗೊಳಿಸುವುದರ ಜೊತೆಗೆ, 2012–13ನೇ ಸಾಲಿಗೆ ಭಾರತೀಯ ತಯಾರಿಕಾ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ಸುಂಕದ ದರಗಳನ್ನು ಶೇಕಡಾ 7.5 ರಿಂದ ಶೇಕಡಾ 10ರ ವರೆಗೆ ಅನುಬಂಧ 3(c) ರಂತೆ ವಿವಿಧ 17 ಸ್ಲಾಬ್‌ಗಳ ಮೇಲೆ ಹೆಚ್ಚಿಸಲು ಪ್ರಸ್ತಾಪಿಸುತ್ತೇನೆ. 17 ಸ್ಲಾಬ್‌ಗಳ ಘೋಷಿತ ಬೆಲೆಯನ್ನು ರೂ.25/–ರಂತೆ ಹೆಚ್ಚಿಸಿ ಮರುವಿನ್ಯಾಸ ಗೊಳಿಸಲಾಗುವುದು. ಬೀರ್ ಮತ್ತು ಲ್ಯಾಬ್ (ಲೋ ಆಲ್ಕೋಹಾಲ್ ಬೀವರೇಜ್) ಮೇಲೆ ಸಹಾ ಶೇಕಡಾ 7.5 ರಷ್ಟು ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲಾಗುವುದು. ಪರಿಣಾಮಕಾರಿ ಜಾರಿ ಮತ್ತು ತನಿಖಾ ಕ್ರಮಗಳ ಮೂಲಕ ಶೇಕಡಾ 7 ರಷ್ಟು ಮದ್ಯದ ಬಳಕೆ ಪ್ರಮಾಣದಲ್ಲಿ ಹೆಚ್ಚಳವನ್ನು ಸಹಾ ನಿರೀಕ್ಷಿಸಲಾಗಿದ್ದು, 2012–13ನೇ ಸಾಲಿನಲ್ಲಿ 10,775 ಕೋಟಿ ರೂ.ಗಳ ರಾಜಸ್ವವನ್ನು ಸಂಗ್ರಹಿಸುವ ಗುರಿಯನ್ನು ಹೊಂದಲಾಗಿದೆ.

274) 2010–11ನೇ ಸಾಲಿನಿಂದ ಹೊಸದಾಗಿ ರಾಜ್ಯದಲ್ಲಿ ಮೈಕ್ರೋ ಬ್ರೀವರಿ ಸನ್ನದುಗಳನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಮೈಕ್ರೋ ಬ್ರಿವರಿ ಸನ್ನದುಗಳನ್ನು ಪಡೆಯಲು ಬಾರ್ ಸನ್ನದು (ಸಿಎಲ್–9) ಅಥವಾ ಕ್ಲಬ್ ಸನ್ನದು (ಸಿ.ಎಲ್–4) ಅಥವಾ ಹೋಟೆಲ್ ಸನ್ನದು (ಸಿಎಲ್–7) ಅಥವಾ ಸ್ಟಾರ್ ಹೋಟೆಲ್ ಸನ್ನದುಗಳು (ಸಿಎಲ್–6ಎ) ಹೊಂದಿರಬೇಕೆಂಬ ಷರತ್ತನ್ನು ಸಡಿಲಗೊಳಿಸಿ ಸ್ವತಂತ್ರವಾಗಿ ಮೈಕ್ರೋ ಬ್ರೀವರಿ ಸನ್ನದುಗಳನ್ನು ನೀಡುವುದರ ಮೂಲಕ ಕಡಿಮೆ ಮದ್ಯದ ಅಂಶವಿರುವ ಬೀರ್ ತಯಾರಿಕಾ ಮೈಕ್ರೋ ಬ್ರೀವರಿ ಸನ್ನದುಗಳಿಗೆ ಪ್ರೋತ್ಸಾಹ ನೀಡಲಾಗುವುದು.

275) ಬೆಂಗಳೂರು ಸುತ್ತ ಮುತ್ತ ಬೆಳೆಯುವ ನೀಲಿ ದ್ರಾಕ್ಷಿ ಬೆಳೆಗಾರರ ಬೇಡಿಕೆಯಂತೆ Fortified Wine ನ್ನು ಸಹಾ Wine Tavern ಮತ್ತು Wine Boutique ಗಳಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗುವುದು ಮತ್ತು Fortified Wineನ ತೀಕ್ಷ್ಣತೆಯನ್ನು ಶೇಕಡಾ 24 ರಿಂದ ಶೇಕಡಾ 16ಕ್ಕೆ ಇಳಿಸಲಾಗುವುದು ಮತ್ತು Fortified Wine ನಲ್ಲಿ Fruit Wine ನ ಪ್ರಮಾಣವನ್ನು ಶೇಕಡಾ 7 ಕ್ಕೆ ನಿಗದಿಪಡಿಸಲಾಗುವುದು. ಫ್ರೂಟ್ ವೈನ್ ಬಳಕೆಯನ್ನು ಉತ್ತೇಜಿಸಲು ಫ್ರೂಟ್ ವೈನ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಪ್ರಸ್ತುತ ಹೆಚ್ಚುವರಿ ಅಬಕಾರಿ ಸುಂಕದ ದರದ ಮೇಲೆ ಶೇ. 50 ರಷ್ಟು ಕಡಿಮೆ ಮಾಡಲು ಸಹಾ ಪ್ರಸ್ತಾಪಿಸುತ್ತೇನೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

276) 2010–11ನೇ ಆರ್ಥಿಕ ವರ್ಷದ ಫೆಬ್ರವರಿ ಅಂತ್ಯದವರೆಗೆ ಸಂಗ್ರಹಿಸಿದ ರೂ.3,366 ಕೋಟಿಗಳ ರಾಜಸ್ವಕ್ಕೆ ಹೋಲಿಸಿದಲ್ಲಿ, 2011–12ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ರೂ. 4,442 ಕೋಟಿ ರಾಜಸ್ವ ಸಂಗ್ರಹ ವಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ ರೂ. 4,800 ಕೋಟಿಗಳ ರಾಜಸ್ವ ಸಂಗ್ರಹವನ್ನು ನಿರೀಕ್ಷಿಸಿದೆ.

277) ಕ್ರಯದ/ಹಸ್ತಾಂತರದ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕವನ್ನು ಶೇ. 6 ರಿಂದ ಶೇ. 5ಕ್ಕೆ ಇಳಿಸಲು ಉದ್ದೇಶಿಸಿದೆ. ಇದರಿಂದಾಗಿ ನೋಂದಣಿ ಆಸಕ್ತ ಸಾರ್ವಜನಿಕರಿಗೆ ಅನುಕೂಲವಾಗುವುದಲ್ಲದೆ ಕಟ್ಟಡ ನಿರ್ಮಾಣ ಉದ್ಯಮಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಜಂಟಿ ಅಭಿವೃದ್ಧಿ ಕರಾರು ಹಾಗೂ ಈ ಸಂಬಂಧಿತ ಅಧಿಕಾರ ಪತ್ರ ಕುರಿತಂತೆ ಆಸ್ತಿಯ ಮಾರುಕಟ್ಟೆ ಮೌಲ್ಯದ ಮೇಲೆ ಶೇ. 1 ಕ್ಕೆ ಗರಿಷ್ಠ ರೂ. 15 ಲಕ್ಷಗಳು ಮೀರದಂತೆ ಮುದ್ರಾಂಕ ಶುಲ್ಕವನ್ನು ಇಳಿಸಲು ಪ್ರಸ್ತಾಪಿಸಿದೆ. ಇದರಿಂದಾಗಿ ಉತ್ತಮ ಅನುಸರಣೆ ಅವಕಾಶವಾಗುತ್ತದೆ.

278) ಕೆಲವು ಹೊಸ ಕರಗಳನ್ನು ವಿಧಿಸಲು ಹಾಗೂ ಸರಳೀಕರಣ ಸುಧಾರಣೆಯನ್ನು ತರಲು ಉದ್ದೇಶಿಸಿದೆ. ಈ ಮಾರ್ಪಾಡುಗಳಿಂದಾಗಿ ತೆರಿಗೆ ಮೂಲದ ವಿಸ್ತರಣೆಗೆ ಹಾಗೂ ಸಣ್ಣ ವ್ಯಾಪಾರದ ಬೆಳವಣಿಗೆಗೆ ಪರಿಣಾಮ ಕಾರಿಯಾಗುತ್ತದೆ.

(1) ಯಾವುದೇ ಒತ್ತೆ/ಗಿರವಿ ಪತ್ರಗಳಿಗೆ ಸಂಬಂಧಪಟ್ಟಂತೆ ಮುದ್ರಾಂಕ ಶುಲ್ಕವನ್ನು ಶೇಕಡಾ 0.1 ಕ್ಕೆ ಇಳಿಸಲು ಪ್ರಸ್ತಾಪಿಸಿದೆ.

(2) ಬಾಂಡ್‌ಗಳಿಗೆ ಸಂಬಂಧಪಟ್ಟಂತೆ ಮುದ್ರಾಂಕ ಶುಲ್ಕವನ್ನು ಶೇ.05.ಕ್ಕೆ ಇಳಿಸಲು ಪ್ರಸ್ತಾಪಿಸಿದೆ.

(3) ವ್ಯಾಪಾರಾಭಿವೃದ್ಧಿ ಉದ್ದೇಶದಿಂದ ಜಾಹೀರಾತು ನೀಡುವ ಕರಾರು, ಕಾರ್ಯಕ್ರಮಗಳ ಪ್ರಸಾರದ ಏಕಸ್ವಾಮ್ಯ ಹಕ್ಕಿನ ಕರಾರು ಮತ್ತು ಬೌದ್ಧಿಕ ಆಸ್ತಿಗಳ ವರ್ಗಾವಣೆ ಕರಾರಿನ ಮೊತ್ತದ ಮೇಲೆ ಶೇ. 01 ರಂತೆ ಮುದ್ರಾಂಕ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸಿದೆ.

(4) ಕಸ್ಟಮ್ಸ್ ಬಾಂಡ್‌ಗಳಿಗೆ ಹಾಲಿ ವಿಧಿಸಲಾಗುತ್ತಿರುವ ರೂ.100/-ಗಳ ಗರಿಷ್ಟ ಮುದ್ರಾಂಕ ಶುಲ್ಕವನ್ನು ಎಕ್ಸೈಜ್ ಬಾಂಡ್‌ಗಳಿಗೂ ಸಹ ವಿಸ್ತರಿಸಲು ಪ್ರಸ್ತಾಪಿಸಿದೆ.

(5) ಬ್ರೋಕರ್ಸ್ ನೋಟ್‌ಗಳ ವ್ಯಾಪ್ತಿಯಲ್ಲಿ ಹಾಲಿ ಒಳಗೊಂಡಿರುವ ಗೂಡ್ಸ್ ಅಥವಾ ಕಮಾಡಿಟೀಸ್‌ಗಳ ಜೊತೆಗೆ ಕರೆನ್ಸಿ ಸೇರಿಸಲು ಪ್ರಸ್ತಾಪಿಸಿದೆ.

(6) ವರ್ಕ್ಸ್ ಕಾಂಟ್ರಾಕ್ಟ್ ಕರಾರುಗಳಿಗೆ ಪ್ರತಿಫಲದ ಮೊತ್ತಕ್ಕೆ ಶೇ. 0.01 ರಂತೆ ಗರಿಷ್ಟ ಐದು ಲಕ್ಷ ರೂ.ಗಳ ಮುದ್ರಾಂಕ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸಿದೆ.

(7) ಪಾಲುದಾರಿಕೆ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ, ಹಾಲಿ ಇರುವ ಕನಿಷ್ಠ ಬಂಡವಾಳದ ಮೊಬಲಗು ಹಾಗೂ ಇದಕ್ಕೆ ವಿಧಿಸುವ ಮುದ್ರಾಂಕ ಶುಲ್ಕದ ದರವನ್ನು ಹೆಚ್ಚಿಸಲು ಪ್ರಸ್ತಾಪಿಸಿದೆ.

279) ಮೇಲಿನ ಪ್ರಸ್ತಾವನೆಗಳ ವಿವರಗಳು ಅನುಬಂಧ-3(ಡಿ)ನಲ್ಲಿ ಇರುತ್ತವೆ.

ಮೋಟಾರು ವಾಹನ ತೆರಿಗೆಗಳು

280) 2011–12ನೇ ಸಾಲಿನಲ್ಲಿ ಮೋಟಾರು ವಾಹನಗಳ ಮಾರಾಟದಲ್ಲಿ ಗಣನೀಯವಾದ ಬೆಳವಣಿಗೆ ಕಂಡು ಬಂದಿದ್ದು, ಅದರಂತೆ ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆಯಲ್ಲಿ ವೃದ್ಧಿಯಾಗಿರುತ್ತದೆ. ಈ ಕೆಳಕಂಡಂತೆ ಮೋಟಾರ್ ಕ್ಯಾಬ್ ವಾಹನಗಳ ಮೇಲೆ ವಿಧಿಸುತ್ತಿರುವ ತೆರಿಗೆಯನ್ನು ಪರಿಷ್ಕರಿಸಲು ಉದ್ದೇಶಿಸಿದೆ.

- 5+1 ವರೆಗೆ ಆಸನ ಸಾಮರ್ಥ್ಯವಿರುವ ಮೋಟಾರು ಕ್ಯಾಬ್ ವಾಹನಗಳು ತ್ರೈಮಾಸಿಕಕ್ಕೆ ಪ್ರತಿ ಆಸನಕ್ಕೆ ರೂ.100 ರಂತೆ ಮತ್ತು 6+1 ಆಸನ ಸಾಮರ್ಥ್ಯವಿರುವ ಮೋಟಾರು ಕ್ಯಾಬ್ ವಾಹನಗಳು ತ್ರೈಮಾಸಿಕ ಪ್ರತಿ ಚದರ ಮೀಟರ್ ನೆಲ ವಿಸ್ತೀರ್ಣಕ್ಕೆ ರೂ.750/- ತೆರಿಗೆಯನ್ನು ಪಾವತಿಸುತ್ತಿದ್ದು, ಅದಕ್ಕೆ ಬದಲಾಗಿ ರೂ.10 ಲಕ್ಷ ಮೌಲ್ಯಕ್ಕಿಂತಲೂ ಹೆಚ್ಚಾಗಿರುವ ಮೋಟಾರು ಕ್ಯಾಬ್ ವಾಹನಗಳಿಗೆ ಅವುಗಳ ಮೌಲ್ಯದ ಶೇ.15ರಷ್ಟು ಜೀವಾವಧಿ ತೆರಿಗೆ ವಿಧಿಸಲಾಗುವುದು. (ವಿವರಗಳನ್ನು ಅನುಬಂಧ–3(ಇ) ನಲ್ಲಿ ತೋರಿಸಿದೆ)

281) ಮೇಲಿನ ತೆರಿಗೆ ಪರಿಷ್ಕರಣೆಯಿಂದ, 2012–13ನೇ ಸಾಲಿನಲ್ಲಿ 3,350 ಕೋಟಿ ರೂ.ಗಳ ತೆರಿಗೆಯನ್ನು ಸಂಗ್ರಹಿಸುವ ಗುರಿಯನ್ನು ಹೊಂದಿದೆ.

ಮಧ್ಯಮಾವಧಿ ವಿತ್ತೀಯ ಯೋಜನೆ

282) ರಾಜ್ಯ ಸರ್ಕಾರದ ಒಟ್ಟು ಹೊಣೆಗಾರಿಕೆಗಳು ಮತ್ತು ವಿತ್ತೀಯ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದ ನಿರ್ದಿಷ್ಟ ಮೈಲುಗಲ್ಲುಗಳೂ ಸೇರಿದಂತೆ ವಿತ್ತೀಯ ಸುಧಾರಣೆಗಳ ಸಂಬಂಧದಲ್ಲಿ 13ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಲು 'ಕರ್ನಾಟಕ ವಿತ್ತೀಯ ಹೊಣೆಗಾರಿಕೆ' ಅಧಿನಿಯಮಕ್ಕೆ ಮಾರ್ಚ್ 2011ರಲ್ಲಿ ತಿದ್ದುಪಡಿಯನ್ನು ತರಲಾಯಿತೆಂಬುದನ್ನು ಮಾನ್ಯ ಸದಸ್ಯರಿಗೆ ಮತ್ತೊಮ್ಮೆ ನೆನಪಿಸಲು ಇಚ್ಛಿಸುತ್ತೇನೆ. ಕರ್ನಾಟಕ ಸರ್ಕಾರವು ತಿದ್ದುಪಡಿ ಮಾಡಲಾದ ಅಧಿನಿಯಮದ ಅಡಿಯಲ್ಲಿ ರೂಪಿಸಲಾದ ಹೆಚ್ಚು ಕಠಿಣವಾದ ವಿತ್ತೀಯ ಶಿಸ್ತನ್ನು ಪಾಲಿಸುತ್ತದೆಂಬುದನ್ನು ಮಾನ್ಯ ಸದಸ್ಯರಿಗೆ

ತಿಳಿಸಲು ನನಗೆ ಅತೀವ ಸಂತಸವಾಗುತ್ತಿದೆ. ತಿದ್ದುಪಡಿ ಮಾಡಲಾದ ಅಧಿನಿಯಮದ ಅಗತ್ಯತೆಗಳಿಗೆ ಅನುಸಾರವಾದ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಗೌರವಾನ್ವಿತ ಸದನದ ಮುಂದೆ ಆಯವ್ಯಯದೊಂದಿಗೆ ಮಂಡಿಸಲಾಗುತ್ತಿದೆ.

ಪರಿಷ್ಕೃತ ಅಂದಾಜುಗಳು 2011-12

283) ಆಯವ್ಯಯದಲ್ಲಿ ಅಂದಾಜು ಮಾಡಲಾದ ಒಟ್ಟು ಜಮೆಗಳು 83729 ಕೋಟಿ ರೂ.ಗಳಾಗಿದ್ದು, ಪರಿಷ್ಕೃತ ಅಂದಾಜಿನ ಪ್ರಕಾರ ಅದು 78440 ಕೋಟಿ ರೂ.ಗಳಾಗಿದೆ. ರಾಜ್ಯದ ರಾಜಸ್ವ ಕ್ರೋಢೀಕರಣ ಪ್ರಯತ್ನಗಳು ಆಯವ್ಯಯದಲ್ಲಿ ಅಂದಾಜು ಮಾಡಲಾದ 66313 ಕೋಟಿ ರೂಪಾಯಿಗಳಿಗಿಂತ ಅಧಿಕವಾಗಿದ್ದು ರೂ.68398 ಕೋಟಿಗಳಷ್ಟಾಗಿದೆ. ಸಮರ್ಥ ಮತ್ತು ಪರಿಣಾಮಕಾರಿ ಕ್ರಮಗಳ ಮೂಲಕ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯಲ್ಲಿ 45775 ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಕ್ರೋಢೀಕರಣ ವಾಗಿದ್ದು, ಇದು 2010-11ರ ಅವಧಿಯಲ್ಲಿನ ವಾಸ್ತವಿಕ ಸಂಗ್ರಹಣೆಗಿಂತ ಶೇಕಡ 18.98 ರಷ್ಟು ಹೆಚ್ಚಾಗಿದೆ ಮತ್ತು ಆಯವ್ಯಯ ಅಂದಾಜಿಗಿಂತ ಸುಮಾರು 1000 ಕೋಟಿಗಳಷ್ಟು ಅಧಿಕವಾಗಿದೆ. ರಾಜಸ್ವ ಸಂಗ್ರಹಣೆ ಆಯವ್ಯಯದ ಅಂದಾಜಿಗಿಂತ ಉತ್ತಮವಾದ್ದರಿಂದ ರಾಜ್ಯ ಸರ್ಕಾರವು ಆಯವ್ಯಯ ಅಂದಾಜುಗಳಿಗಿಂತ 4124 ಕೋಟಿ ರೂ.ಗಳಷ್ಟು ಸಾಲವನ್ನು ಕಡಿಮೆ ಮಾಡಿದೆ.

284) ಆಯವ್ಯಯದ ಅಂದಾಜಿಸಿದ ವೆಚ್ಚ 85319 ಕೋಟಿ ರೂಪಾಯಿಗಳಿಗೆ ಎದುರಾಗಿ ಪರಿಷ್ಕೃತ ಒಟ್ಟು ವೆಚ್ಚ 84334 ಕೋಟಿ ರೂಪಾಯಿಗಳಾಗಿದೆ.

285) ರಾಜಸ್ವ ಹೆಚ್ಚುವರಿಗಳು 3144 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದೆ. 12673 ಕೋಟಿ ರೂ.ಗಳ ವಿತ್ತೀಯ ಕೊರತೆಯು, ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 2.92 ರಷ್ಟಾಗುತ್ತದೆಂದು ನಿರೀಕ್ಷಿಸಲಾಗಿದೆ. 2011-12ನೇ ಸಾಲಿನ ಕೊನೆಯಲ್ಲಿ 99312 ಕೋಟಿ ರೂಪಾಯಿಗಳಷ್ಟಿದ್ದ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 22.9 ರಷ್ಟಾಗುತ್ತದೆಂದು ನಿರೀಕ್ಷಿಸಲಾಗಿದೆ. ಪರಿಷ್ಕೃತ ಅಂದಾಜುಗಳು ಕರ್ನಾಟಕ

ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಮೂಲಕ ಆದೇಶಿಸಲಾದ ವಿತ್ತೀಯ ಶಿಸ್ತಿಗೆ ಅನುಸಾರವಾಗಿರುವುದನ್ನು ಸೂಚಿಸುತ್ತವೆ.

286) ರಾಜ್ಯ ಸರ್ಕಾರವು 38070 ಕೋಟಿ ರೂ.ಗಳ ರಾಜ್ಯ ಯೋಜನಾ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲು ಸಿದ್ಧವಾಗಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. ಕಳೆದ ವರ್ಷದ ಸಾಧನೆಯಾದ 31154 ಕೋಟಿ ರೂ.ಗಳಿಗೆ ಹೋಲಿಸಿದಲ್ಲಿ ಈ ಸಾಲಿನ ಸಾಧನೆಯು ಸುಮಾರು ಶೇಕಡ 22 ರಷ್ಟು ಹೆಚ್ಚಾಗಲಿದೆ.

ಆಯವ್ಯಯ ಅಂದಾಜುಗಳು 2012–13

ಸನ್ಮಾನ್ಯ ಗೌರವಾನ್ವಿತ ಸಭಾಧ್ಯಕ್ಷರೇ,

287) 2012–13ನೇ ಸಾಲಿನಲ್ಲಿ ಒಟ್ಟು ಜಮೆಗಳು 103369 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ. ಆಯವ್ಯಯ ಅಂದಾಜುಗಳಲ್ಲಿ 81461 ಕೋಟಿ ರೂ.ಗಳ ರಾಜಸ್ವ ಜಮೆಗಳನ್ನು ಮತ್ತು 21908 ಕೋಟಿ ರೂಪಾಯಿಗಳ ಸಾಲಗಳು ಸೇರಿದಂತೆ ಬಂಡವಾಳ ಜಮೆಗಳನ್ನು ನಿರೀಕ್ಷಿಸಲಾಗಿದೆ. ಒಟ್ಟು 80530 ಕೋಟಿ ರೂ.ಗಳ ರಾಜಸ್ವ ವೆಚ್ಚ ಮತ್ತು 16542 ಕೋಟಿ ರೂ.ಗಳ ಬಂಡವಾಳ ವೆಚ್ಚವನ್ನು ಒಳಗೊಂಡು ಒಟ್ಟು ವೆಚ್ಚವು 102742 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ ಮತ್ತು ಸಾಲದ ಮರುಪಾವತಿ ವೆಚ್ಚ ರೂ.5670 ಕೋಟಿ.

288) ರಾಜಸ್ವ ಹೆಚ್ಚುವರಿಯನ್ನು 931 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. ವಿತ್ತೀಯ ಕೊರತೆಯನ್ನು 15312 ಕೋಟಿ ರೂ.ಗಳಾಗುತ್ತದೆಂದು ನಿರೀಕ್ಷಿಸಲಾಗಿದ್ದು, ಅದು ರಾಜ್ಯದ ಆಂತರಿಕ ಉತ್ಪನ್ನದ ಶೇಕಡ 2.94 ರಷ್ಟಾಗಿರುತ್ತದೆ. 2012–13ರ ಕೊನೆಯಲ್ಲಿನ 114744 ಕೋಟಿ ರೂ.ಗಳಲ್ಲಿನ ಒಟ್ಟು ಹೊಣೆಗಾರಿಕೆಗಳು ರಾಜ್ಯದ ಆಂತರಿಕ ಉತ್ಪನ್ನದ 22.03% ರಷ್ಟಾಗುತ್ತದೆಂದು ಅಂದಾಜು ಮಾಡಲಾಗಿದೆ. ಈ ಎಲ್ಲಾ ಮೂರು ವಿತ್ತೀಯ ಪರಿಮಾಣಗಳು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮವು ನಿಗದಿಪಡಿಸಿರುವ ಮಿತಿಯೊಳಗಿರುತ್ತದೆ.

ಸಂಪನ್ಮೂಲಗಳ ಕ್ರೋಢೀಕರಣ

289) ಉದ್ದೇಶಿತ ತೆರಿಗೆ ಪರಿಹಾರಗಳು ಮತ್ತು ಹೆಚ್ಚಳಗಳ ಪರಿಣಾಮವಾಗಿ ಸರ್ಕಾರವು ವರ್ಷಕ್ಕೆ 150 ಕೋಟಿ ರೂ.ಗಳ ರಾಜಸ್ವಗಳನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ತೆರಿಗೆ ಪರಿಹಾರಗಳ ಮೂಲಕ ಉತ್ತೇಜಿಸಲಾದ ಆರ್ಥಿಕ ಚಟುವಟಿಕೆಗಳಲ್ಲಿನ ಚೇತರಿಕೆಯಿಂದ ಈ ನಷ್ಟವನ್ನು ತುಂಬಿಕೊಡಬಹುದೆಂದು ನಿರೀಕ್ಷಿಸಲಾಗಿದೆ. 2012–13ನೇ ಸಾಲಿನ ರಾಜ್ಯದ ಒಟ್ಟು ಸ್ವಂತ ತೆರಿಗೆ ರಾಜಸ್ವವು, 2011–12ನೇ ಸಾಲಿನ ಆಯವ್ಯಯ ಅಂದಾಜನ್ನು ಮೀರಿ ಶೇಕಡಾ 18 ಹೆಚ್ಚಳದೊಂದಿಗೆ 51821 ಕೋಟಿ ರೂ.ಗಳಾಗುತ್ತದೆಂದು ಅಂದಾಜು ಮಾಡಲಾಗಿದೆ.

290) ತೆರಿಗೆಯೇತರ ರಾಜಸ್ವಗಳಿಂದ 3193 ಕೋಟಿ ರೂ.ಗಳನ್ನು ಸಂಗ್ರಹಿಸಬಹುದೆಂದು ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಯ ಪಾಲಿನ ರೂಪದಲ್ಲಿ 13094 ಕೋಟಿ ರೂ.ಗಳನ್ನು ಹಾಗೂ ಭಾರತ ಸರ್ಕಾರದಿಂದ ಬರುವ ಅನುದಾನಗಳಿಗಾಗಿ 13354 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರವು ನಿರೀಕ್ಷಿಸಿದೆ.

291) ಈ ರಾಜಸ್ವ ಜಮೆಗಳ ಜೊತೆಗೆ 21609 ಕೋಟಿ ರೂ. ಸಾಲಗಳ ಋಣೇತರ ಜಮೆಗಳ ಮೂಲಕ 125 ಕೋಟಿ ರೂ. ಮತ್ತು ಸಾಲಗಳ ವಸೂಲಿ ಮಾಡುವ ಮೂಲಕ 174 ಕೋಟಿ ರೂ. ಪೂರಕವಾಗುವುದೆಂದು ಅಂದಾಜು ಮಾಡಲಾಗಿದೆ.

292) ಒಟ್ಟು ಜಮೆಗಳನ್ನು 103369 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

293) ರಾಜ್ಯ ಜಮೆಗಳನ್ನು 103369 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ.

294) ರಾಜ್ಯ ಒಡೆತನದ ವಿವಿಧ ಮಂಡಳಿಗಳು, ನಿಗಮಗಳು ಮತ್ತು ಸ್ಥಳೀಯ ಸಂಸ್ಥೆಗಳು ಆಂತರಿಕ ಸಂಪನ್ಮೂಲ ಸೃಜನೆಯ ಮೂಲಕ ಹಾಗೂ ತಮ್ಮ ಸ್ವಂತ ಹಣಕಾಸು ಸಾಮರ್ಥ್ಯ ಮತ್ತು ಸ್ವಂತ ರಾಜಸ್ವಗಳ ಆಧಾರದ ಮೇಲೆ ಮಾಡಿದ ಸಾಲಗಳ ಮೂಲಕ 6740 ಕೋಟಿ ರೂ.ಗಳನ್ನು ಕ್ರೋಢೀಕರಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ಕಾನೂನು ತಿದ್ದುಪಡಿಗಳು

294) ಉದ್ದೇಶಿತ ತೆರಿಗೆ ಕ್ರಮಗಳು ಮತ್ತು ಪರಿಹಾರಗಳನ್ನು 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರುವಂತೆ ಮಾಡಲಾಗುವುದು. ತೆರಿಗೆ ಮತ್ತು ಪರಿಹಾರಗಳ ಪ್ರಸ್ತಾವನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಸಂಬಂಧಪಟ್ಟ ತೆರಿಗೆ ಕಾನೂನುಗಳಿಗೆ ತಿದ್ದುಪಡಿಗಳನ್ನು ತರಲು ಅಗತ್ಯವಾದ ವಿಧೇಯಕಗಳನ್ನು ಈ ಅಧಿವೇಶನದಲ್ಲಿ ಗೌರವಾನ್ವಿತ ಸದನದ ಮುಂದೆ ಮಂಡಿಸಲಾಗುವುದು.

ಸನ್ಮಾನ್ಯ ಸಭಾಧ್ಯಕ್ಷರೇ,

295) ಸಮಗ್ರ ಕರ್ನಾಟಕದ ಸಮಾನ ಅಭಿವೃದ್ಧಿ ಸಾಧಿಸುವ ದಿಕ್ಕಿನಲ್ಲಿ ನಮ್ಮ ಸರ್ಕಾರ ಹಲವು ನೂತನ ಯೋಜನೆಗಳೊಂದಿಗೆ ದೃಢ ಹೆಜ್ಜೆಗಳನ್ನು ಇರಿಸಿದೆ. ಸಂಪನ್ಮೂಲ ಸಂಗ್ರಹಣೆಯಲ್ಲಿ ಸುಧಾರಣೆ ತಂದು ಸಾರ್ವಜನಿಕ ಹಣಕಾಸಿನ ಸದ್ಬಳಕೆ ಮೂಲಕ ನಾವು ಹಾಕಿಕೊಂಡಿರುವ ಗುರಿ ತಲಪುವ ಪ್ರಾಮಾಣಿಕ ಪ್ರಯತ್ನ ಮಾಡುವ ಭರವಸೆಯನ್ನು ಈ ಸಂದರ್ಭದಲ್ಲಿ ನೀಡುತ್ತೇನೆ. ಈ ಪ್ರಯತ್ನದಲ್ಲಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುನ್ನಡೆಯಲಿದ್ದೇನೆ.

296) ಸಾರ್ವಜನಿಕ ಜೀವನದಲ್ಲಿರುವಾಗ ಬಸವಣ್ಣನವರು ಪ್ರತಿಪಾದಿಸಿದ ರಾಜನೀತಿ ಅನುಕರಣ ಯೋಗ್ಯವಾಗಿದೆ. ರಾಜಧರ್ಮ ಮೀರದೆ ನ್ಯಾಯ ಪರವಾಗಿ ನಿಲ್ಲಲು ವಚನದ ಈ ಸಾಲುಗಳು ಸ್ಫೂರ್ತಿದಾಯಕವಾಗಿವೆ.

"ನ್ಯಾಯನಿಷ್ಠುರಿ, ದಾಕ್ಷಿಣ್ಯ ಪರ ನಾನಲ್ಲ;

ಲೋಕ ವಿರೋಧಿ, ಶರಣನಾರಿಗೂ ಅಂಜುವವನಲ್ಲ"

297) ನಿಲುವಿನಲ್ಲಿ ದಾಕ್ಷಿಣ್ಯಪರ ಪ್ರವೃತ್ತಿ ತೋರದಿದ್ದಾಗ ಹಲವು ಸವಾಲುಗಳು ಮತ್ತು ತಳಮಳದ ಸನ್ನಿವೇಶಗಳು ಎದುರಾಗುವುದು ಸಹಜ. ಅಂತಹ ಸಂದರ್ಭಗಳನ್ನು ಸ್ಥಿತಪ್ರಜ್ಞತೆಯಿಂದ ಎದುರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಡಿ.ವಿ.ಜಿ.ಯವರ ಕಾವ್ಯದ ಈ ಸಾಲುಗಳು ಎದೆಗುಂದದೆ ಗುರಿ ತಲುಪಲು ದಾರಿಸೂಚಕವಾಗಿವೆ.

ಕಳವಳವ ನೀಗಿಬಿಡು, ತಳಮಳ ದೂರವಿಡು,

ಕಳೆ, ತಳ್ಳು ಗಲಭೆ ಗಾಬರಿಯ ಮನದಿಂದ

ಅಲೆದಾಡುತಿರೆ ದೀಪ ಕಣ್ಣಿಗೆ ಗುರಿ ತಪ್ಪುವುದು

ತಿಳಿತಿಳಿವು ಶಾಂತಿಯಲಿ – ಮಂಕುತಿಮ್ಮ

298) ಈಗ ಪ್ರಸಕ್ತ ಸಾಲಿನ ಆಯವ್ಯಯವನ್ನು ಗೌರವಾನ್ವಿತ ಸದನದ ಪರಿಶೀಲನೆಗಾಗಿ ಮಂಡಿಸುತ್ತಾ, ಆಯವ್ಯಯ ಅಂದಾಜುಗಳ ಪ್ರಕಾರ ಜುಲೈ 31, 2012 ರವರೆಗೆ ವೆಚ್ಚವನ್ನು ನಿರ್ವಹಿಸಲು ಲೇಖಾನುದಾನವನ್ನು ಕೋರುತ್ತಿದ್ದೇನೆ.

ಜೈ ಹಿಂದ್

ಜೈ ಕರ್ನಾಟಕ

ಬಜೆಟ್ ವಿಹಂಗಮ

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2011-12	ಪರಿಷ್ಕೃತ ಅಂದಾಜು 2011-12	ಬಜೆಟ್ ಅಂದಾಜು 2012-13
	ಪ್ರಾರಂಭ ಶಿಲ್ಕು	88.47	-657.13	-167.03
ಎ.	ರಾಜಸ್ವ ಲೆಕ್ಕ			
	ಜಮೆ :			
	ರಾಜ್ಯ ತೆರಿಗೆ	43817.10	45775.03	51820.70
	ಕೇಂದ್ರ ತೆರಿಗೆಯಲ್ಲಿ ಪಾಲು	10418.99	11075.04	13093.70
	ಕೇಂದ್ರ ಸರ್ಕಾರದ ಅನುದಾನಗಳು	8402.38	8358.88	13353.53
	ತೆರಿಗೆಯೇತರ ರಾಜಸ್ವ	3674.79	3188.64	3192.82
	ಒಟ್ಟು-ಎ. (೧)	**66313.26**	**68397.59**	**81460.75**
	ವೆಚ್ಚ :			
	ಸಾಮಾಜಿಕ ಸೇವೆ	24878.75	25899.14	30268.28
	ಆರ್ಥಿಕ ಸೇವೆ	17299.35	17470.80	20984.08
	ಸಾಮಾನ್ಯ ಸೇವೆ	18512.87	17493.21	24040.92
	ಸಹಾಯಾನುದಾನ ಮತ್ತು ಅಂಶದಾನ	4343.36	4390.66	5236.70
	ಒಟ್ಟು-ಎ. (೨)	**65034.33**	**65253.81**	**80529.98**
ಎ.	ರಾಜಸ್ವ ಲೆಕ್ಕ ಹೆಚ್ಚುವರಿ / ಕೊರತೆ	1278.94	3143.78	930.77

ವಾರ್ಷಿಕ ವಿತ್ತ ನಿರೂಪಣೆಯ ಅನುಸಾರ

	ಜಮೆಗಳು	**83728.79**	**78439.65**	**103368.77**

ನೋಟ

(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ.	ಬಾಬ್ತು	ಬಜೆಟ್ ಅಂದಾಜು 2011-12	ಪರಿಷ್ಕೃತ ಅಂದಾಜು 2011-12	ಬಜೆಟ್ ಅಂದಾಜು 2012-13
ಬಿ.	ಬಂಡವಾಳ ಲೆಕ್ಕ			
	ಜಮೆ :			
	ಭಾರತ ಸರ್ಕಾರದಿಂದ ಸಾಲ	1738.80	1616.98	2389.24
	ಬಹಿರಂಗ ಮಾರುಕಟ್ಟೆ ಸಾಲ (ನಿವ್ವಳ)	8199.75	6206.45	13837.89
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	2765.00	763.00	1765.00
	ಸಾಲಗಳು ಮತ್ತು ಮುಂಗಡಗಳ ವಸೂಲಿ	61.72	62.08	173.79
	ಸಾರ್ವಜನಿಕ ಲೆಕ್ಕ (ನಿವ್ವಳ) ಇತರೆ	1884.75	6384.75	-507.00
	ಒಟ್ಟು-ಬಿ. (೧)	**14650.02**	**15033.26**	**17658.92**
	ಬಟವಾಡೆ :			
	ಬಂಡವಾಳ ವೆಚ್ಚ (ನಿವ್ವಳ)			
	ಕೇಂದ್ರ ಸಾಲಗಳ ಮರುಸಂದಾಯ	11754.44	13915.14	14330.48
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು	590.51	578.39	640.85
	ಎನ್‌ಸಿಡಿಸಿ ಇತ್ಯಾದಿಗಳಿಗೆ ಸಾಲಗಳ ಮರುಸಂದಾಯ	1221.35	1229.77	1412.12
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	2067.88	1963.64	2086.39
	ಒಟ್ಟು-ಬಿ. (೨)	**15634.18**	**17686.94**	**18469.84**
ಬಿ.	**ಬಂಡವಾಳ ಲೆಕ್ಕ ಹೆಚ್ಚಳ / ಕೊರತೆ**	**-984.16**	**-2653.68**	**-810.92**
ಸಿ.	**ವರ್ಷದ ಒಟ್ಟು ಹೆಚ್ಚಳ / ಕೊರತೆ**	**294.78**	**490.10**	**119.85**
ಡಿ.	**ಮುಕ್ತಾಯ ಶಿಲ್ಕು ಕಳೆದಾಗ**	**383.25**	**-167.03**	**-47.18**
ಸಂಚಿತ ನಿಧಿ				
	ವೆಚ್ಚ	**85318.75**	**84334.30**	**102741.92**

ಅನುಬಂಧ - 1

(ಉಲ್ಲೇಖ: ಕಂಡಿಕೆ 28)

2012-2013ನೇ ಸಾಲಿನ ವಲಯವಾರು ಹಂಚಿಕೆ *

	ವಲಯ	₹ ಕೋಟಿಗಳಲ್ಲಿ
1.	ಕೃಷಿ ಮತ್ತು ತೋಟಗಾರಿಕೆ	4090
2.	ಪಶುಸಂಗೋಪನೆ ಮತ್ತು ಮೀನುಗಾರಿಕೆ	1206
3.	ಒಳಾಡಳಿತ ಮತ್ತು ಸಾರಿಗೆ	4288
4.	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	6896
5.	ಸಮಾಜ ಕಲ್ಯಾಣ	3993
6.	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	2883
7.	ಕಂದಾಯ	3061
8.	ವಸತಿ	1439
9.	ಶಿಕ್ಷಣ	15071
10.	ವಾಣಿಜ್ಯ ಮತ್ತು ಕೈಗಾರಿಕೆ	1508
11.	ನಗರಾಭಿವೃದ್ಧಿ	8797
12.	ಲೋಕೋಪಯೋಗಿ	5110
13.	ಜಲ ಸಂಪನ್ಮೂಲ	8101
14.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	4260
15.	ಇಂಧನ	10289

* ಈ ಹಂಚಿಕೆಯಲ್ಲಿ ಆಂತರಿಕ ಮತ್ತು ಹೆಚ್ಚುವರಿ ಸಂಪನ್ಮೂಲಗಳು ಸೇರಿವೆ

ಅನುಬಂಧ -2

ವಿವಿಧ ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸಹಾಯಾನುದಾನ

(ಉಲ್ಲೇಖ ಕಂಡಿಕೆ 140)

1. ದಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರೀ ಪೀಠದ ಮೂಲ ಸ್ಥಳದಲ್ಲಿ ಜೀರ್ಣೋದ್ಧಾರ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು – 2 ಕೋಟಿ ರೂ.
2. ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾ ಸಂಸ್ಥಾನಂ ಶೃಂಗೇರಿ ಇವರಿಂದ ಮೈಸೂರಿನಲ್ಲಿ ಸಂದೇಶ ಭವನ ನಿರ್ಮಿಸಲು – 2 ಕೋಟಿ ರೂ.
3. ಕುಂಬಾರ ಭವನ ನಿರ್ಮಾಣಕ್ಕೆ – 1 ಕೋಟಿ ರೂ.
4. ಭಾವಸಾರ ಕ್ಷತ್ರಿಯ ಸಮಾಜ ಅಂಬಾಭವಾನಿ ಭವನ ಹಾಗೂ ಶಿವಾಜಿ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ – 2 ಕೋಟಿ ರೂ.
5. ಗಂಗಾ ಮತಸ್ಥರ ನಿಜ ಶರಣರ ಅಂಬಿಗರ ಚೌಡಯ್ಯ ಸ್ಮಾರಕ ಐಕ್ಯ ಸ್ಥಳ, ಹಾವೇರಿ ಜಿಲ್ಲೆ ಅಭಿವೃದ್ಧಿಗಾಗಿ – 1 ಕೋಟಿ ರೂ.
6. ವಿಶ್ವಕರ್ಮ ಸಮಾಜದ ಸಮುದಾಯ ಭವನ ನಿರ್ಮಾಣಕ್ಕೆ – 1 ಕೋಟಿ ರೂ.
7. ವಿಶ್ವ ಗಾಣಿಗರ ಸಮುದಾಯ ಟ್ರಸ್ಟ್ (ರಿ) ಸಮುದಾಯ ಭವನ ಮತ್ತು ವಿದ್ಯಾರ್ಥಿನಿಲಯಕ್ಕೆ – 1 ಕೋಟಿ ರೂ.
8. ಬಲಿಜ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ – 1 ಕೋಟಿ ರೂ.
9. ಹಿಂದುಳಿದ ವರ್ಗಗಳ ಒಕ್ಕೂಟಕ್ಕೆ ದಶಮಾನೋತ್ಸವನ್ನು ಆಚರಿಸಲು – 50 ಲಕ್ಷ ರೂ.
10. ಕಾಗಿನೆಲೆ ಗ್ರಾಮದ ದೊಡ್ಡಕೆರೆ ಅಭಿವೃದ್ಧಿ, ದೈವೀವನ, ಸಂಪರ್ಕ ರಸ್ತೆ, ಹಾಗೂ ಬೆಂಗಳೂರಿನಲ್ಲಿ ಕನಕ ಸ್ಮಾರಕ ಭವನ ನಿರ್ಮಾಣ ಹಾಗೂ ಅಭಿವೃದ್ಧಿ, ಕಾಗಿನೆಲೆ ಪ್ರಾಧಿಕಾರಕ್ಕೆ – 2 ಕೋಟಿ ರೂ.
11. ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ, ಕಾಗಿನೆಲೆರವರಿಗೆ ಶಿವಮೊಗ್ಗ ನಗರ ಸಂಗೊಳ್ಳಿರಾಯಣ್ಣ ಬಡಾವಣೆ, ಕನಕ ಭವನ ನಿರ್ಮಾಣ, ಶಿಕಾರಿಪುರದಲ್ಲಿ ಸಂಚಾರಿ ಕುರಿಗಾರ, ಮಕ್ಕಳ ವಸತಿ ನಿಲಯ ಕಟ್ಟಡ ನಿರ್ಮಾಣ, ರಾಣೇಬೆನ್ನೂರು ತಾಲ್ಲೂಕಿನಲ್ಲಿ ಕನಕ ಭವನ ನಿರ್ಮಾಣ, ಕಾಗಿನೆಲೆ ಜಮಖಂಡಿ ಕನಕ ಸಮುದಾಯ ಭವನ ಜಮಖಂಡಿ – 6 ಕೋಟಿ ರೂ.
12. ಹೇಮ–ವೇಮಾ ಸದ್ಭಾವನ ವಿದ್ಯಾಪೀಠ, ಹಿರೇಹೊಸಳ್ಳಿ, ಹರಿಹರ ತಾ. ಸಮಗ್ರ ಅಭಿವೃದ್ಧಿಗೆ – 2 ಕೋಟಿ ರೂ.
13. ಶ್ರೀ ಶ್ರೀ ಜಗದ್ಗುರು ಮರುಳಶಂಕರ ದೇವರ ಗುರುಪೀಠ, ಜೇವರ್ಗಿ, ಗುಲ್ಬರ್ಗಾ ಜಿಲ್ಲೆ, ಸಮಗ್ರ ಅಭಿವೃದ್ಧಿಗೆ – 1 ಕೋಟಿ ರೂ.
14. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಕನಕ ಅಧ್ಯಯನ ಪೀಠ ಸ್ಥಾಪನೆ, – 1 ಕೋಟಿ ರೂ.

15. ಶ್ರೀ ಸಿದ್ಧಾರೂಢ ಸ್ವಾಮಿ ಸೇವಾ ಟ್ರಸ್ಟ್, ರಾಣೇಬೆನ್ನೂರು, ಹಾವೇರಿ ಜಿಲ್ಲೆ ಸಮಗ್ರ ಅಭಿವೃದ್ಧಿಗೆ – 1 ಕೋಟಿ ರೂ.

16. ಶ್ರೀ ಹಡಪದ ಅಪ್ಪಣ್ಣ ದೇವರ ಮಹಾ ಸಂಸ್ಥಾನ, ತಂಗಡಗಿ, ಗಂಗಾವತಿ ತಾ. ಶ್ರೀ ಶಿವಶರಣರ ಹಡಪದ ಅಪ್ಪಣ್ಣ, ಶಿವಶರಣರ ಹಡಪದ ಲಿಂಗಮ್ಮ ತಾಯಿ ಅಧ್ಯಯನ ಪೀಠ ಸ್ಥಾಪನೆ. ಗುಲ್ಬರ್ಗಾ ವಿಶ್ವವಿದ್ಯಾಲಯಕ್ಕೆ – 1 ಕೋಟಿ ರೂ.

17. ಹೊಸದುರ್ಗ ಶ್ರೀ ಶ್ರೀ ಪುರುಷೋತ್ತಮಾನಂದಪುರ ಉಪ್ಪಾರ ಸಮಾಜದ ಪೀಠ, ಸಮಗ್ರ ಅಭಿವೃದ್ಧಿಗೆ – 1 ಕೋಟಿ ರೂ.

18. ಬೆಂಗಳೂರು ಭಗೀರಥ ಸಮಾಜ ಮಹಾ ಸಂಸ್ಥಾನ ಮಠದ ಸಮಗ್ರ ಅಭಿವೃದ್ಧಿಗಾಗಿ – 1 ಕೋಟಿ ರೂ.

19. ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಕೋಳಾಲ ಶ್ರೀ ಕಾಶಿ ಅನ್ನಪೂರ್ಣೇಶ್ವರಿ ಸುಕ್ಷೇತ್ರ ದೇವಾಲಯದ ಅಭಿವೃದ್ಧಿ ಸೇವಾ ಟ್ರಸ್ಟ್ (ರಿ), ಸಮುದಾಯ ಭವನ, ನಿತ್ಯ ಅನ್ನದಾಸೋಹ, ಅನಾಥಾಶ್ರಮ ಹಾಗೂ ಗೋಶಾಲೆ ನಿರ್ಮಾಣಕ್ಕೆ – 25 ಲಕ್ಷ ರೂ.

20. ನೆಲಮಂಗಲ ತಾಲ್ಲೂಕು ಶ್ರೀ ಮಹಾಲಕ್ಷ್ಮಿ ತಿಗಳ ಮಹಾ ಸಂಸ್ಥಾನ ಟ್ರಸ್ಟ್, ಶಿವಗಂಗೆ – 1 ಕೋಟಿ ರೂ.

21. ರಾಜ್ಯ ತಿಗಳ ಸಮಾಜ ಹೂವು ಹಣ್ಣು ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಗೆ – 1 ಕೋಟಿ ರೂ.

22. ಬೆಂಗಳೂರು ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, ಮಹಾಲಕ್ಷ್ಮೀಪುರ, ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ – 50 ಲಕ್ಷ ರೂ.

23. ಬೆಂಗಳೂರು ಸೋಮವಂಶ ಆರ್ಯ ಕ್ಷತ್ರಿಯ ಸೇವಾ ಸಮಾಜಕ್ಕೆ ವಿದ್ಯಾರ್ಥಿನಿಲಯ ಕಟ್ಟಡಕ್ಕೆ – 25 ಲಕ್ಷ ರೂ.

24. ಬೆಂಗಳೂರು ತೋಗಟವೀರ ಕ್ಷತ್ರಿಯ ಸಂಘ, ಸಂಪಂಗಿರಾಮನಗರ, ಸಮಗ್ರ ಅಭಿವೃದ್ಧಿಗೆ – 50 ಲಕ್ಷ ರೂ.

25. ಮಾಗಡಿ ತಾಲ್ಲೂಕು ಕರ್ನಾಟಕ ಪ್ರದೇಶ ಆರ್ಯ ಈಡಿಗ ಮಹಾ ಸಂಸ್ಥಾನ ಸೋಲೂರು ಸಮಗ್ರ ಅಭಿವೃದ್ಧಿಗೆ – 1 ಕೋಟಿ ರೂ.

26. ಬೆಂಗಳೂರು ಕರ್ನಾಟಕ ರಾಜ್ಯ ಮಡಿವಾಳ ಸಂಘ, ದೋಬಿಘಾಟ್ ಸಮಗ್ರ ಅಭಿವೃದ್ಧಿಗೆ – 50 ಲಕ್ಷ ರೂ.

27. ಬೆಂಗಳೂರು ಕರ್ನಾಟಕ ರಾಜ್ಯದ ಸವಿತಾ ಸಮಾಜದ ಸಮಗ್ರ ಅಭಿವೃದ್ಧಿಗಾಗಿ – 1 ಕೋಟಿ ರೂ.

28. ಬೆಂಗಳೂರು ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್‌ಗೆ, ಶೈಕ್ಷಣಿಕ ಸಂಸ್ಥೆಗಳ ಸಮಗ್ರ ಅಭಿವೃದ್ಧಿಗೆ – 50 ಲಕ್ಷ ರೂ.

29. ಮಾಜಿ ಮುಖ್ಯಮಂತ್ರಿಗಳಾದ ಡಿ.ದೇವರಾಜ ಅರಸುರವರ ಹುಟ್ಟೂರಾದ ಕಲ್ಲಹಳ್ಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಅಭಿವೃದ್ಧಿಗೆ ಮತ್ತು ವಿಜಯನಗರದ ಅರಸು ಸಮುದಾಯದ ಮಂಟಪ ಕಾಮಗಾರಿ ಹೊಂಗನೂರಿನಲ್ಲಿ ಪೂರ್ಣಗೊಳಿಸಲು – 1 ಕೋಟಿ ರೂ.

30. ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಜಯಂತೋತ್ಸವದ ಅಂಗವಾಗಿ – 1 ಕೋಟಿ ರೂ.

31. ಜಗದ್ಗುರು ಶ್ರೀ ಶ್ರೀ ಕೃಷ್ಣ ಯಾದವ ಬಣದ ಮಹಾ ಸಂಸ್ಥಾನ, ಹೊಳಲ್ಕೆರೆ, ಚಿತ್ರದುರ್ಗ – 1 ಕೋಟಿ ರೂ.

32. ಬೆಂಗಳೂರು ಗವೀಪುರಂ ಶ್ರೀ ಗೋಸಾಯಿ ಮಹಾ ಸಂಸ್ಥಾನದ ಸಮಗ್ರ ಅಭಿವೃದ್ಧಿಗೆ –1 ಕೋಟಿ ರೂ.

33. ಬಸವ ಭಾವೈಕ್ಯತೆ ಕೇಂದ್ರ ಮೈಸೂರು, ಶ್ರೀ ಕೋಡಿಹಳ್ಳಿ ಹಿರಿಯೂರು ತಾಲ್ಲೂಕು (ಪರಿಶಿಷ್ಟ ಜಾತಿ) 25 ಲಕ್ಷ ರೂ.

34. ಹೊಸದುರ್ಗ, ಜಗದ್ಗುರು ಅಖಿಲ ಕುಂಚಟಿಗ ಮಹಾ ಸಂಸ್ಥಾನದ ಸಮಗ್ರ ಅಭಿವೃದ್ಧಿಗೆ – 50 ಲಕ್ಷ ರೂ.

35. ಶ್ರೀ ಬಸವ ಬ್ಯಂಗೇಶ್ವರ ಮಹಾ ಮಠ, ಹೆಳವ ಸಮಾಜ ಗುರುಪೀಠ, ಬಿ.ಕೋಡಿಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ – 1 ಕೋಟಿ ರೂ.

36. ಚಿತ್ರದುರ್ಗ ಶ್ರೀ ಮಾಚೀದೇವ ಮಹಾ ಸಂಸ್ಥಾನ, ಶ್ರೀ ಮಡಿವಾಳ ಮಾಚೀದೇವ ಸ್ಮಾರಕ ಭವನದ ನಿರ್ಮಾಣಕ್ಕೆ – 1 ಕೋಟಿ ರೂ.

37. ಶ್ರೀ ಜಗದ್ಗುರು ಶ್ರೀ ಶ್ರೀ ದಯಾನಂದಪುರಿ ಸ್ವಾಮೀಜಿ, ಹಂಪಿ, ದೇವಾಂಗ ಸಮಾಜ, ಗಾಯಿತ್ರಿ ಪೀಠದ ಸಮಗ್ರ ಅಭಿವೃದ್ಧಿಗೆ – 1 ಕೋಟಿ ರೂ.

38. ಬೆಂಗಳೂರು ಶ್ರೀ ಭಗವತ್ ರಾಮಾನುಜ ಟ್ರಸ್ಟ್, ಮೈಸೂರು ಮುಖ್ಯ ರಸ್ತೆ, ಕೆಂಗೇರಿ, ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ಮತ್ತು ಅಭಿವೃದ್ಧಿಗೆ – 1 ಕೋಟಿ ರೂ.

39. ಉಡುಪಿ ಜಿಲ್ಲೆ ಕುಡುಬಿ ಸಮಾಜದ ಸಮುದಾಯ ಭವನಕ್ಕೆ – 1 ಕೋಟಿ ರೂ

40. ಕೊಂಕಣ ಖಾರ್ವಿ ಸಮಾಜ ಸಮುದಾಯ ಭವನಕ್ಕೆ – 1 ಕೋಟಿ ರೂ.

41. ತುಮಕೂರಿನಲ್ಲಿ ಕುಂಚಟಿಗರ ಸಮುದಾಯ ಭವನ ನಿರ್ಮಾಣಕ್ಕೆ – 1 ಕೋಟಿ ರೂ.

ಅನುಬಂಧ –3(ಎ)

ಖಾಸಗಿ ಬುಕ್‌ಮೇಕರ್‌ಗಳು ಸಂದಾಯ ಮಾಡಬೇಕಾದ ತೆರಿಗೆಯಲ್ಲಿ ಪ್ರಸ್ತಾವಿತ ಏರಿಕೆ (ಉಲ್ಲೇಖ : ಕಂಡಿಕೆ 271)

(1) ಪ್ರಥಮ ಎನ್‌ಕ್ಲೋಶರ್:

ಕುದುರೆ ರೇಸ್‌ಗಳ ಬಗೆ	ಪ್ರಸ್ತುತ ತೆರಿಗೆ ದರ	ಪ್ರಸ್ತಾವಿತ ದರ
ಬೆಂಗಳೂರು ವಿಂಟರ್ ಮೀಟಿಂಗ್ (ಆನ್‌ಕೋರ್ಸ್)	ಪ್ರತಿದಿನಕ್ಕೆ ರೂ.25000 ಅಥವಾ ಶೇ.20, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.35000 ಅಥವಾ ಶೇ.20, ಯಾವುದು ಹೆಚ್ಚೋ ಅದು.
ಬೆಂಗಳೂರು ಸಮ್ಮರ್ ಮೀಟಿಂಗ್ (ಆನ್‌ಕೋರ್ಸ್)	ಪ್ರತಿದಿನಕ್ಕೆ ರೂ.20000 ಅಥವಾ ಶೇ.20, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.35000 ಅಥವಾ ಶೇ.20, ಯಾವುದು ಹೆಚ್ಚೋ ಅದು.
ಮುಂಬೈ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.25000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.30000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಪುಣೆ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.10000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.30000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಮೈಸೂರು ರೆಗ್ಯೂಲರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.8000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.30000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಮೈಸೂರು ವಿಂಟರ್ ಮತ್ತು ಸಮ್ಮರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.30000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಹೈದರಾಬಾದ್ ರೆಗ್ಯೂಲರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.8000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.20000 ಅಥವಾ ಶೇ.15, ಯಾವುದು ಹೆಚ್ಚೋ ಅದು.

ಕುದುರೆ ರೇಸ್‌ಗಳ ಬಗೆ	ಪ್ರಸ್ತುತ ತೆರಿಗೆ ದರ	ಪ್ರಸ್ತಾವಿತ ದರ
ಕೊಲ್ಕತ್ತಾ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.8000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಚೆನ್ನೈ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.2000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಊಟಿ ಮತ್ತು ಇತರೆ ಆಫ್‌ಕೋರ್ಸ್ ಮೀಟಿಂಗ್	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.7000 ಅಥವಾ ಶೇ.15, ಯಾವುದು ಹೆಚ್ಚೋ ಅದು.

(2) ದ್ವಿತೀಯ ಎನ್‌ಕ್ಲೋಶರ್:

ಕುದುರೆ ರೇಸ್‌ಗಳ ಬಗೆ	ಪ್ರಸ್ತುತ ತೆರಿಗೆ ದರ	ಪ್ರಸ್ತಾವಿತ ದರ
ಬೆಂಗಳೂರು ವಿಂಟರ್ ಮೀಟಿಂಗ್ (ಆನ್‌ಕೋರ್ಸ್)	ಪ್ರತಿದಿನಕ್ಕೆ ರೂ.7000 ಅಥವಾ ಶೇ.20, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.20, ಯಾವುದು ಹೆಚ್ಚೋ ಅದು.
ಬೆಂಗಳೂರು ಸಮ್ಮರ್ ಮೀಟಿಂಗ್ (ಆನ್‌ಕೋರ್ಸ್)	ಪ್ರತಿದಿನಕ್ಕೆ ರೂ.7000 ಅಥವಾ ಶೇ.20, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.20, ಯಾವುದು ಹೆಚ್ಚೋ ಅದು.
ಮುಂಬೈ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.7000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಪುಣೆ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಮೈಸೂರು ರೆಗ್ಯೂಲರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.15, ಯಾವುದು ಹೆಚ್ಚೋ ಅದು.

ಕುದುರೆ ರೇಸ್‌ಗಳ ಬಗೆ	ಪ್ರಸ್ತುತ ತೆರಿಗೆ ದರ	ಪ್ರಸ್ತಾವಿತ ದರ
ಮೈಸೂರು ವಿಂಟರ್ ಮತ್ತು ಸಮ್ಮರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.3000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.15000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಹೈದರಾಬಾದ್ ರೆಗ್ಯೂಲರ್ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.10000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಕೊಲ್ಕತ್ತಾ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.10000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಚೆನ್ನೈ ಮೀಟಿಂಗ್ (ಆಫ್‌ಕೋರ್ಸ್)	ಪ್ರತಿದಿನಕ್ಕೆ ರೂ.1000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.
ಊಟಿ ಮತ್ತು ಇತರೆ ಆಫ್‌ಕೋರ್ಸ್ ಮೀಟಿಂಗ್	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.7000 ಅಥವಾ ಶೇ.15, ಯಾವುದು ಹೆಚ್ಚೋ ಅದು.

(3) ಮೈಸೂರು.

ಕುದುರೆ ರೇಸ್‌ಗಳ ಬಗೆ	ಪ್ರಸ್ತುತ ತೆರಿಗೆ ದರ	ಪ್ರಸ್ತಾವಿತ ದರ
ಆನ್‌ಕೋರ್ಸ್ ರೇಸ್ ಮೀಟಿಂಗ್	ಪ್ರತಿದಿನಕ್ಕೆ ರೂ.10000 ಅಥವಾ ಶೇ.20, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.20000 ಅಥವಾ ಶೇ.20, ಯಾವುದು ಹೆಚ್ಚೋ ಅದು.
ಆಫ್‌ಕೋರ್ಸ್ ರೇಸ್ ಮೀಟಿಂಗ್	ಪ್ರತಿದಿನಕ್ಕೆ ರೂ.5000 ಅಥವಾ ಶೇ.15, ಯಾವುದು ಹೆಚ್ಚೋ ಅದು.	ಪ್ರತಿದಿನಕ್ಕೆ ರೂ.10000 ಅಥವಾ ಶೇ.15, ಯಾವುದು ಹೆಚ್ಚೋ ಅದು.

ಅನುಬಂಧ -3(ದಿ)

ವಾಣಿಜ್ಯ ತೆರಿಗೆಗಳಡಿಯಲ್ಲಿ ಪ್ರಸ್ತಾವಿಸಲಾದ ಸುಧಾರಣಾ ಮತ್ತು ಸರಳೀಕರಣ ಕ್ರಮಗಳು (ಉಲ್ಲೇಖ : ಕಂಡಿಕೆ 272)

ಕ್ರಮ ಸಂಖ್ಯೆ	ವಿವರಗಳು
1	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಕ್ರಮಬದ್ಧ ಲೆಕ್ಕಪುಸ್ತಕಗಳನ್ನು ಇಡದ ತಪ್ಪಿಗಾಗಿರುವ ದಂಡಗಳನ್ನು ರೂ.2000 ರಿಂದ ರೂ.5000ಕ್ಕೆ ಮತ್ತು ರೂ.5000 ರಿಂದ ರೂ.10000ಕ್ಕೆ ಏರಿಸುವುದು.
2	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಲೆಕ್ಕಪುಸ್ತಕಗಳನ್ನು ಹಾಜರು ಪಡಿಸದ ಮತ್ತು ಮಾಹಿತಿಯನ್ನು ಒದಗಿಸದ ತಪ್ಪಿಗಾಗಿರುವ ದಂಡವನ್ನು ರೂ.5000 ರಿಂದ ರೂ.10000ಕ್ಕೆ ಏರಿಸುವುದು.
3	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಪರಿಷ್ಕೃತ ರಿಟರ್ನ್‌ಗಳ ಸಲ್ಲಿಕೆ ಮೇಲೆ ನಿಬಂಧನೆಗಳನ್ನು ಹಾಕುವುದು.
4	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ 3 ತಿಂಗಳು ಅಥವಾ 2 ತ್ರೈಮಾಸಿಕಗಳಿಗೆ ನಿರಂತರವಾಗಿ ರಿಟರ್ನ್ ಸಲ್ಲಿಸದ ವ್ಯಾಪಾರಿಗಳ ಮೇಲೆ ಮೊಕದ್ದಮೆ ಹೂಡಲು ಉಪಬಂಧ.
5	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಕೆಲವು ಸರಕುಗಳ ಬಗ್ಗೆ ಮೂಲದಲ್ಲಿಯೇ ತೆರಿಗೆ ಕಡಿತ ಮಾಡಬೇಕೆನ್ನುವ ಜಾರಿ ಮಾಡಲಾಗದ ಉಪಬಂಧವನ್ನು ಕೈಬಿಡುವುದು.
6	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ತಪ್ಪನ್ನು ತಿದ್ದಿದಂತೆ ಭಾವಿಸಬೇಕೆಂದಿರುವ ಉಪಬಂಧವನ್ನು ಕೈಬಿಡುವುದು.
7	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಜಮ ಮತ್ತು ಖರ್ಚು ಚೀಟಿಗಳ ಸಂಬಂಧಿತ ಉಪಬಂಧವನ್ನು ಕೈಬಿಡುವುದು.
8	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಕರನಿರ್ಧರಣೆ ಮತ್ತು ಮರು ಕರನಿರ್ಧರಣೆಗೆ ಕಾಲಮಿತಿಯನ್ನು 5 ವರ್ಷಗಳೆಂದು ನಿಗದಿ ಮಾಡಲು ಸಂಬಂಧಿತ ಉಪಬಂಧವನ್ನು ತಿದ್ದುಪಡಿ ಮಾಡುವುದು.

ಕ್ರಮ ಸಂಖ್ಯೆ	ವಿವರಗಳು
9	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ವಿವಾದಿತ ದಂಡ ಮತ್ತು ಇತರೆ ಮೊತ್ತಗಳ ವಸೂಲಿಯನ್ನು ತಡೆ ಮಾಡಲು ಮೇಲ್ಮನವಿ ಅಧಿಕಾರಿಗಳಿಗಿರುವ ಅಧಿಕಾರವನ್ನು ಸ್ಪಷ್ಟೀಕರಿಸುವುದು.
10	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಗುತ್ತಿಗೆ ಕಾಮಗಾರಿಯಲ್ಲಿ ಬಳಸಲಾದ ಕನ್ಸೂಮೆಬಲ್‌ಗಳ ಮೇಲೆ ದುಪ್ಪಟ್ಟು ಕಡಿತ ಕ್ಲೇಮನ್ನು ತಡೆಯುವುದು.
11	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಸಾಗಣೆ ಪಾಸ್ ನೀಡಬೇಕಾದ ಸರಕುಗಳನ್ನು ಅಧಿಸೂಚಿಸಲು ಸರ್ಕಾರ ಮತ್ತು ಆಯುಕ್ತರಿಗೆ ಅಧಿಕಾರ ನೀಡುವುದು ಹಾಗೂ ಸಾಗಣೆ ಪಾಸ್‌ಗೆ ವಿದ್ಯುನ್ಮಾನ ವಿಧಾನದಲ್ಲಿ ಅರ್ಜಿ ಸಲ್ಲಿಸಲು ಮತ್ತು ಸಾಗಣೆ ಪಾಸ್ ನೀಡಿಕೆಗೆ ಅವಕಾಶ ಮಾಡುವುದು.
12	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಪರಿಷ್ಕೃತ ರಿಟರ್ನ್ ಸಲ್ಲಿಸಲು ಮಾಡಿರುವ ಸಲಹೆಗಳನ್ನು ಕೈಬಿಡಲು ಲೆಕ್ಕಪರಿಶೋಧನಾ ವರದಿಗೆ ತಿದ್ದುಪಡಿ ತರುವುದು.
13	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ 240 ದಿನಗಳ ನಂತರ ತಡೆಯಾಜ್ಞೆ ತಂತಾನೆ ತೆರವಾಗುವಂತಿರುವ ಉಪಬಂಧವನ್ನು ಕೈಬಿಡುವುದು.
14	ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿ ಹೊರ ರಾಜ್ಯದಿಂದ ಬಂದ ಸರಕುಗಳ ವಿವರಗಳನ್ನು ನಮೂದಿಸಲು ಜಾಲತಾಣವೊಂದನ್ನು ಅಧಿಸೂಚಿಸಲು ಆಯುಕ್ತರಿಗೆ ಅಧಿಕಾರ ನೀಡುವುದು.
15	ಮನರಂಜನಾ ತೆರಿಗೆ ಮತ್ತು ವಿಲಾಸ ತೆರಿಗೆಗಳಡಿಯಲ್ಲಿ ಸ್ವಯಂ ಕರನಿರ್ಧರಣೆಗೆ ಮತ್ತು ಆಯ್ದ ಪ್ರಕರಣಗಳಲ್ಲಿ ಮಾತ್ರ ಲೆಕ್ಕಪುಸ್ತಕಗಳ ಪರಿಶೀಲನೆ ಕೈಗೊಳ್ಳಲು ಉಪಬಂಧ ತರುವುದು.
16	ಮನರಂಜನಾ ತೆರಿಗೆ ಅಡಿಯಲ್ಲಿ ಚಲನಚಿತ್ರ ಮಂದಿರಗಳ ಮಾಲೀಕರಿಗೆ ಸ್ವಯಂ ಚಾಲಿತ ನೋಂದಣಿ ನೀಡಿಕೆ.
17	ವೃತ್ತಿ ತೆರಿಗೆ ಅಡಿಯಲ್ಲಿ ಉದ್ಯೋಗದಾತರು ತ್ರೈಮಾಸಿಕ ವಿವರ ಪಟ್ಟಿಯನ್ನು ಸಲ್ಲಿಸುವ ಯೋಜನೆಯನ್ನು ಹಿಂತೆಗೆದುಕೊಳ್ಳುವುದು.
18	ವೃತ್ತಿ ತೆರಿಗೆ, ಪ್ರವೇಶ ತೆರಿಗೆ ಮತ್ತು ಕೃಷಿ ವರಮಾನ ತೆರಿಗೆಗಳಡಿಯಲ್ಲಿ ಪುನರವಲೋಕನ ಅರ್ಜಿಯನ್ನು ಸಲ್ಲಿಸಲು ಇರುವ ಕಾಲಮಿತಿಯನ್ನು 180 ದಿನಗಳಿಗೆ ಏರಿಕೆ.

ಅನುಬಂಧ 3 (ಸಿ)

ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ದರಗಳು (ಭಾರತೀಯ ತಯಾರಿಕಾ ಮದ್ಯ) (ಉಲ್ಲೇಖ : ಕಂಡಿಕೆ 273)

ಕ್ರಮ ಸಂಖ್ಯೆ	ಪ್ರಸ್ತುತ		ಪ್ರಸ್ತಾವಿತ	
	ಘೋಷಿತ ಬೆಲೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ)	ಘೋಷಿತ ಬೆಲೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ)
1	0–349	79	0–374	97
2	350–399	102	375–424	124
3	400–449	129	425–474	155
4	450–499	168	475–524	200
5	500–599	193	525–624	235
6	600–699	217	625–724	264
7	700–799	230	725–824	281
8	800–899	248	825–924	303
9	900–999	261	925–1024	318
10	1000–1099	292	1025–1124	355
11	1100–1199	305	1125–1224	372

12	1200–1299	324	1225–1324	395
13	1300–1699	349	1325–1724	427
14	1700–2099	389	1725–2124	477
15	2100–4824	427	2125–4849	545
16	4825–7550	486	4850–7575	637
17	7551 ಮತ್ತು ಅದಕ್ಕಿಂತ ಹೆಚ್ಚು	ಘೋಷಿತ ಬೆಲೆಯ ಮೇಲೆ ಪ್ರತಿ ಬಲ್ಕ್ ಲೀಟರ್‌ಗೆ ರೂ 566 /– ಅಥವಾ ಶೇ.7.5 ಯಾವುದು ಹೆಚ್ಚೋ ಅದು	7576 ಮತ್ತು ಅದಕ್ಕಿಂತ ಹೆಚ್ಚೋ ಅದು	ಘೋಷಿತ ಬೆಲೆಯ ಮೇಲೆ ಪ್ರತಿ ಬಲ್ಕ್ ಲೀಟರ್‌ಗೆ ರೂ 682 /– ಅಥವಾ ಶೇ.9 ಯಾವುದು ಹೆಚ್ಚೋ ಅದು

2. **ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ದರಗಳು (ಬಾಟಲ್ಡ್ ಬೀರ್)**

ಕ್ರಮ ಸಂಖ್ಯೆ	ಘೋಷಿತ ಬೆಲೆ	ಪ್ರಸ್ತುತ	ಪ್ರಸ್ತಾವಿತ
		ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ
		ನಾಗರೀಕ (Civil)	ನಾಗರೀಕ (Civil)
1	ಘೋಷಿತ ಬೆಲೆ ರೂ. 125 ಮತ್ತು ಹೆಚ್ಚು (330 ಎಂಎಲ್‌ಗೆ ಮಾತ್ರ)	ಘೋಷಿತ ಬೆಲೆಯ ಶೇ.100	ಘೋಷಿತ ಬೆಲೆಯ ಶೇ.122
2	ಘೋಷಿತ ಬೆಲೆ ರೂ. 140 ಮತ್ತು ಹೆಚ್ಚು	ಘೋಷಿತ ಬೆಲೆಯ ಶೇ.100	ಘೋಷಿತ ಬೆಲೆಯ ಶೇ.122

3. ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ದರಗಳು (ಡ್ರಾಟ್ ಬೀರ್/ಬಲ್ಕ್ ಬೀರ್)

ಕ್ರಮ ಸಂಖ್ಯೆ	ಘೋಷಿತ ಬೆಲೆ	ಪ್ರಸ್ತುತ	ಪ್ರಸ್ತಾವಿತ
		ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ
		ನಾಗರೀಕ (Civil)	ನಾಗರೀಕ (Civil)
1	ಘೋಷಿತ ಬೆಲೆ ರೂ.00 ರಿಂದ ರೂ.15ರವರೆಗೆ	ಘೋಷಿತ ಬೆಲೆಯ ಶೇ.90	ಘೋಷಿತ ಬೆಲೆಯ ಶೇ.115
2	ಘೋಷಿತ ಬೆಲೆ ರೂ.16 ರಿಂದ ರೂ.20ರವರೆಗೆ	ಘೋಷಿತ ಬೆಲೆಯ ಶೇ.90	ಘೋಷಿತ ಬೆಲೆಯ ಶೇ.115
3	ಘೋಷಿತ ಬೆಲೆ ರೂ.21 ರಿಂದ ರೂ.25ರವರೆಗೆ	ಘೋಷಿತ ಬೆಲೆಯ ಶೇ.90	ಘೋಷಿತ ಬೆಲೆಯ ಶೇ.115

4. ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಹೆಚ್ಚುವರಿ ಅಬಕಾರಿ ಸುಂಕ (ಎಇಡಿ)ದರಗಳು (ಫೋರ್ಟಿಫೈಟ್ ವೈನ್)

ಕ್ರಮ ಸಂಖ್ಯೆ	ಘೋಷಿತ ಬೆಲೆ	ಪ್ರಸ್ತುತ	ಪ್ರಸ್ತಾವಿತ
		ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ
		ನಾಗರೀಕ (Civil)	ನಾಗರೀಕ (Civil)
1	ಘೋಷಿತ ಬೆಲೆ ರೂ.400 ರಿಂದ ರೂ.750 ರವರೆಗೆ	Rs 10/-	Rs 17/-

2	ಘೋಷಿತ ಬೆಲೆ ರೂ.751 ರಿಂದ ರೂ.1200 ರವರೆಗೆ	Rs 18/-	Rs 29/-
3	ಘೋಷಿತ ಬೆಲೆ ರೂ.1201ರಿಂದ ರೂ.2500 ರವರೆಗೆ	Rs 48/-	Rs 71/-
4	ಘೋಷಿತ ಬೆಲೆ ರೂ.2501 ರಿಂದ ರೂ.3000 ರವರೆಗೆ	Rs 65/-	Rs 93/-
5	ಘೋಷಿತ ಬೆಲೆ ರೂ.3001 ಮತ್ತು ಹೆಚ್ಚು	Rs 70/-	Rs 98/-

5. <u>ಪ್ರಸ್ತುತ ಮತ್ತು ಪ್ರಸ್ತಾವಿತ ಘೋಷಿತ ಬೆಲೆ ಹಾಗೂ ಎಇಡಿ ದರಗಳು (ಲೋ ಆಲ್ಕೋಹಾಲಿಕ ಬಿವರೇಜ್)</u>

ಕ್ರಮ ಸಂಖ್ಯೆ	ಘೋಷಿತ ಬೆಲೆ	ಪ್ರಸ್ತುತ	ಪ್ರಸ್ತಾವಿತ
		ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ	ಹೆಚ್ಚುವರಿ ಅಬಕಾರಿ ಸುಂಕ (ಎಇಡಿ) ಪ್ರತಿ ಲೀಟರ್‌ಗೆ
		ನಾಗರೀಕ (Civil)	ನಾಗರೀಕ (Civil)
1	ಘೋಷಿತ ಬೆಲೆ ರೂ.00 ರಿಂದ ರೂ.450ರವರೆಗೆ	ಘೋಷಿತ ಬೆಲೆಯ ಶೇ.100	ಘೋಷಿತ ಬೆಲೆಯ ಶೇ.122
2	ಘೋಷಿತ ಬೆಲೆ ರೂ.451 ಮತ್ತು ಹೆಚ್ಚು	ಘೋಷಿತ ಬೆಲೆಯ ಶೇ.100	ಘೋಷಿತ ಬೆಲೆಯ ಶೇ.122

ಅನುಬಂಧ-3(ಡಿ)

ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಅನುಸೂಚಿಯ ಉದ್ದೇಶಿತ ಬದಲಾವಣೆ (ತಿದ್ದುಪಡಿ) ಗಳು (ಉಲ್ಲೇಖ : ಕಂಡಿಕೆ 279)

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
1	ಜಂಟಿ ಅಭಿವೃದ್ಧಿ ಕರಾರು	5 (f)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಬಹುಘಟಕಗಳನ್ನು ಒಳಗೊಂಡಿರುವ ಮನೆ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟ್‌ನ ಘಟಕ ಅಥವಾ ಫ್ಲ್ಯಾಟ್ ಅಥವಾ ಬಹುಮಹಡಿ ಕಟ್ಟಡಗಳ ಭಾಗಗಳೂ ಸೇರಿದಂತೆ, ಸ್ಥಿರಾಸ್ತಿಯ ನಿರ್ಮಾಣ ಅಥವಾ ಅಭಿವೃದ್ಧಿಗೆ ಸಂಬಂಧಿಸಿದಂತೆ, ಅಭಿವೃದ್ಧಿದಾರ, ನಿರ್ಮಾಣಕಾರ, ಪ್ರಮೋಟರ್ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಡುವ ವ್ಯಕ್ತಿಯಿಂದ ಸದರಿ ನಿರ್ಮಿತ ಕಟ್ಟಡ ಅಥವಾ ಅಭಿವೃದ್ಧಿಪಡಿಸಿದ ಸ್ವತ್ತನ್ನು ಅಭಿವೃದ್ಧಿದಾರರು ಮತ್ತು ಸ್ವತಿನ ಮಾಲೀಕರು/ಗೇಣಿದಾರರು ಜಂಟಿಯಾಗಿ ಹೊಂದಿರಬೇಕೆಂಬ ಅಥವಾ ಜಂಟಿಯಾಗಿ ಮಾರಾಟ ಮಾಡಬೇಕೆಂಬ ಅಥವಾ ಭಾಗಶಃ	ಜಂಟಿ ಅಭಿವೃದ್ಧಿ ಕರಾರಿಗೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಪ್ರತಿಫಲ ಇವುಗಳಲ್ಲಿ ಯಾವುದೂ ಅಧಿಕ ಮೊತ್ತವೋ ಅದರ ಮೇಲೆ ಶೇ 1 ರಂತೆ, ಗರಿಷ್ಟ ರೂ 15ಲಕ್ಷಗಳು ಮೀರದಂತೆ

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
					ಜಂಟಿಯಾಗಿ ಹೊಂದಿದ್ದು, ಉಳಿದ ಭಾಗವನ್ನು ಜಂಟಿಯಾಗಿ ಮಾರಾಟ ಮಾಡಬೇಕೆಂಬ ನಿಬಂಧನೆಗಳೊಂದಿಗೆ ಸ್ವತ್ತನ್ನು ನಿರ್ಮಿಸಲು ಅಥವಾ ಅಭಿವೃದ್ಧಿಪಡಿಸಲು ಮಾಡಿಕೊಂಡ ಕರಾರು.	
2	ವ್ಯಾಪಾರಾಭಿವೃದ್ಧಿ ಉದ್ದೇಶದಿಂದ ಜಾಹೀರಾತು ನೀಡುವ/ಕಾರ್ಯಕ್ರಮಗಳ ಪ್ರಸಾರದ ಏಕಸ್ವಾಮ್ಯ ಹಕ್ಕಿನ ಕರಾರುಗಳು	5 (i-b)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ವ್ಯಾಪಾರಾಭಿವೃದ್ಧಿ ಉದ್ದೇಶದಿಂದ ನೀಡುವ ಜಾಹೀರಾತು/ಕಾರ್ಯಕ್ರಮಗಳ ಪ್ರಸಾರದ ಏಕಸ್ವಾಮ್ಯ ಹಕ್ಕಿನ ಕರಾರುಗಳು	ಕರಾರಿನ ಮೊತ್ತ ಅಥವಾ ಪ್ರತಿಫಲದ ಮೇಲೆ ಪ್ರತಿ ಒಂದು ಸಾವಿರ ಅಥವಾ ಭಾಗಾಂಶಕ್ಕೆ ರೂ ಒಂದರಂತೆ, ಕನಿಷ್ಠ ರೂ. 200/-

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
	ಬೌದ್ಧಿಕ ಆಸ್ತಿ ಹಕ್ಕುಗಳ ವರ್ಗಾವಣೆ ಬಗ್ಗೆ ಕರಾರು	5 (i-c)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಬೌದ್ಧಿಕ ಆಸ್ತಿ ಹಕ್ಕುಗಳ ವರ್ಗಾವಣೆ ಬಗ್ಗೆ ಕರಾರು	ಕರಾರಿನ ಮೊತ್ತ ಅಥವಾ ಪ್ರತಿಫಲದ ಮೇಲೆ, ಪ್ರತಿ ಒಂದು ಸಾವಿರ ಅಥವಾ ಭಾಗಾಂಶಕ್ಕೆ ರೂ ಒಂದರಂತೆ, ಕನಿಷ್ಠ ರೂ. 200/-.
3	ಗಿರವಿ/ಒತ್ತೆಗಳಿಗೆ ಸಂಬಂಧಿಸಿದ ಕರಾರು	6(2)	ಪ್ರಸ್ತುತ ಇರುವ ಸಾಲ ಅಥವಾ ಮುಂದೆ ಸಾಲದ ರೂಪದಲ್ಲಿ ಕೊಡಲಾಗುವ ಹಣವನ್ನು ಹಿಂತಿರುಗಿಸುವ ಬಗ್ಗೆ ಖಾತರಿಗಾಗಿ ಚರಾಸ್ತಿಯನ್ನು ಗಿರವಿ, ಒತ್ತೆಗೆ ಸಂಬಂಧಪಟ್ಟ ಒಪ್ಪಂದ		ಪ್ರಸ್ತುತ ಇರುವ ಸಾಲ ಅಥವಾ ಮುಂದೆ ಸಾಲದ ರೂಪದಲ್ಲಿ ಕೊಡಲಾಗುವ ಹಣವನ್ನು ಹಿಂತಿರುಗಿಸುವ ಬಗ್ಗೆ ಖಾತರಿಗಾಗಿ ಚರಾಸ್ತಿಯನ್ನು ಗಿರವಿ, ಒತ್ತೆ ಅಥವಾ ಅಡವು ಇಡುವುದಕ್ಕೆ ಸಂಬಂಧಪಟ್ಟ ಒಪ್ಪಂದ . ಒತ್ತೆ/ಗಿರವಿ ಸಾಲವನ್ನು ಹಕ್ಕೊತ್ತಾಯದ ಮೇರೆಗೆ ಸಾಲವು ಮರುಪಾವತಿಯಾಗುವಂತಿದ್ದಲ್ಲಿ .	ಸಾಲದ ಮೊತ್ತದ ಮೇಲೆ ಪ್ರತಿ ಒಂದು ಸಾವಿರ ಅಥವಾ ಭಾಗಾಂಶಕ್ಕೆ ರೂ ಒಂದರಂತೆ ಗರಿಷ್ಠ

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
			(a) ಕರಾರನ್ನು ಸಾಕ್ಷೀಕರಿಸುವ ಪತ್ರದ ದಿನಾಂಕದಿಂದ 3 ತಿಂಗಳ ಒಳಗಾಗಿ ಸಾಲವು ಮರುಪಾವತಿ ಯಾಗುವಂತಿದ್ದಲ್ಲಿ (b) ಕರಾರನ್ನು ಸಾಕ್ಷೀಕರಿಸುವ ಪತ್ರದ ದಿನಾಂಕದಿಂದ 3 ತಿಂಗಳ ನಂತರದ ಅವಧಿಯಲ್ಲಿ ಸಾಲ ಅಥವಾ ಹಣವು ಮರುಪಾವತಿ ಯಾಗುವಂತಿದ್ದಲ್ಲಿ ವಿನಾಯಿತಿ: 1. ಒಡವೆಗಳ ಗಿರವಿ/ಒತ್ತೆ ದಸ್ತಾವೇಜುಗಳಲ್ಲಿ ಒಳಗೊಂಡಿರುವ ಸಾಲ ಅಥವಾ ಋಣದ ಮೊತ್ತ ರೂ. ಹತ್ತು ಸಾವಿರದ ಒಳಗೆ ಇದ್ದಲ್ಲಿ 2.ಸಾಕ್ಷಿಗಳ ದೃಢೀಕರಣ ಇಲ್ಲದ ದಸ್ತಾವೇಜುಗಳು	ಪ್ರತಿ ರೂ. 100/- ಅಥವಾ ಅದರ ಭಾಗಾಂಶಕ್ಕೆ 25 ಪೈಸೆ ಪ್ರತಿ ರೂ. 100/- ಅಥವಾ ಅದರ ಭಾಗಾಂಶಕ್ಕೆ 50 ಪೈಸೆ ಗರಿಷ್ಠ 2 ಲಕ್ಷ	ವಿನಾಯಿತಿ 1. ಒಡವೆಗಳ ಗಿರವಿ/ಒತ್ತೆ ದಸ್ತಾವೇಜುಗಳಲ್ಲಿ ಒಳಗೊಂಡಿರುವ ಸಾಲ ಅಥವಾ ಋಣದ ಮೊತ್ತ ರೂ. ಒಂದು ಲಕ್ಷದ ಮೀರದಿದ್ದಲ್ಲಿ. 2. ಕೈಬಿಡಲಾಗಿದೆ	ರೂ. 50,000/-

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
4	ಬಾಂಡ್	12	ಬಾಂಡ್ ಕಲಂ 2(1)(a) ರಲ್ಲಿ ವ್ಯಾಖ್ಯಾನಿಸಿರುವಂತೆ ಮತ್ತು ಕರ್ನಾಟಕ ಮುದ್ರಾಂಕ ಕಾಯ್ದೆಯಲ್ಲಾಗಲಿ ಅಥವಾ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವೆಗಳ ಮೌಲ್ಯ ಮಾಪನ ಕಾಯ್ದೆ 1958ರಲ್ಲಾಗಲಿ ಇಲ್ಲದಿರುವಂತೆ.		ಬಾಂಡ್ ಕಲಂ 2(1)(a) ರಲ್ಲಿ ವ್ಯಾಖ್ಯಾನಿಸಿರುವಂತೆ ಮತ್ತು ಕರ್ನಾಟಕ ಮುದ್ರಾಂಕ ಕಾಯ್ದೆಯಲ್ಲಾಗಲಿ ಅಥವಾ ಕರ್ನಾಟಕ ನ್ಯಾಯಾಲಯ ಶುಲ್ಕ ಮತ್ತು ದಾವೆಗಳ ಮೌಲ್ಯ ಮಾಪನ ಕಾಯ್ದೆ 1958ರಲ್ಲಾಗಲಿ ಇಲ್ಲದಿರುವಂತೆ.	
			a) ಖಾತರಿಗೊಳಪಟ್ಟ ಮೊತ್ತ ಅಥವಾ ಮೌಲ್ಯವು ರೂ. 1000/-ಗಳನ್ನು ಮೀರದಿದ್ದಲ್ಲಿ	ಪ್ರತಿ ರೂ. 100/- ಅಥವಾ ಅದರ ಬಾಗಾಂಶಕ್ಕೆ ರೂ. 5/- ರಂತೆ	a) ಖಾತರಿಗೊಳಪಟ್ಟ ಮೊತ್ತ ಅಥವಾ ಮೌಲ್ಯವು ರೂ. 1000/-ಗಳನ್ನು ಮೀರದಿದ್ದಲ್ಲಿ	ಪ್ರತಿ ಒಂದು ನೂರು ಅಥವಾ ಅದರ ಬಾಗಾಂಶಕ್ಕೆ ಐವತ್ತು ಪೈಸೆ

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
			b) ಖಾತರಿಗೊಳಪಟ್ಟ ಮೊತ್ತ ಅಥವಾ ಮೌಲ್ಯವು ರೂ. 1000/-ಗಳನ್ನು ಮೀರಿದ್ದಲ್ಲಿ	ಮೊದಲ 1000/- ರೂಗಳಿಗೆ ಮೇಲಿನ ಉಪ ವಾಕ್ಯದಂತೆ ಮತ್ತು 1000/- ರೂಗಳ ಮೇಲ್ಪಟ್ಟ ಮೊತ್ತದ ಪ್ರತಿ ರೂ. 500/- ಅಥವಾ ಬಾಗಾಂಶಕ್ಕೆ , ರೂ. 25/- ರಂತೆ.	b) ಖಾತರಿಗೊಳಪಟ್ಟ ಮೊತ್ತ ಅಥವಾ ಮೌಲ್ಯವು ರೂ. 1000/-ಗಳನ್ನು ಮೀರಿದ್ದಲ್ಲಿ	ಮೊದಲ ಒಂದು ಸಾವಿರ ರೂ ಗಳಿಗೆ ಮೇಲಿನ ಉಪ ವಾಕ್ಯದಂತೆ ಮತ್ತು 1000/- ರೂಗಳ ಮೇಲ್ಪಟ್ಟ ಮೊತ್ತದ ಪ್ರತಿ ರೂ. 500/- ಅಥವಾ ಬಾಗಾಂಶಕ್ಕೆ ಎರಡು ರೂಪಾಯಿ ಐವತ್ತು ಪೈಸೆಯಂತೆ
5	ಹಸ್ತಾಂತರ ಪತ್ರಗಳು	20(1)	ಕಲಂ (2)ಡಿ ರಲ್ಲಿ ವ್ಯಾಖ್ಯಾನಿಸಿರುವಂತೆ, ಅನುಚ್ಛೇದ 52ರಡಿ ಅಕರಿಸಲಾದ ಅಥವಾ ವಿನಾಯ್ತಿ ನೀಡಿಲ್ಲದ ಹಸ್ತಾಂತರ ಪತ್ರದಲ್ಲಿ ಒಳಗೊಂಡ ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಮೇಲೆ.	ಶೇ. 6	ಕಲಂ (2)ಡಿ ರಲ್ಲಿ ವ್ಯಾಖ್ಯಾನಿಸಿರುವಂತೆ, ಅನುಚ್ಛೇದ 52ರಡಿ ಅಕರಿಸಲಾದ ಅಥವಾ ವಿನಾಯ್ತಿ ನೀಡಿಲ್ಲದ ಹಸ್ತಾಂತರ ಪತ್ರದಲ್ಲಿ ಒಳಗೊಂಡ ಸ್ವತ್ತುಗಳ ಮಾರುಕಟ್ಟೆ ಮೌಲ್ಯದ ಮೇಲೆ.	ಶೇ 5

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
6	ಕಸ್ಟಮ್ಸ್ ಬಾಂಡ್	23	ಕಸ್ಟಮ್ಸ್ ಬಾಂಡ್ a) ಮೊತ್ತವು ರೂ. 1000/-ಗಳನ್ನು ಮೀರದಿದ್ದಲ್ಲಿ b) ಇನ್ನಿತರೆ ಪ್ರಕರಣಗಳಲ್ಲಿ	ಸದರಿ ಮೊತ್ತಕ್ಕೆ ಬಾಂಡ್‌ಗೆ ಅನ್ವಯವಾಗುವ ಮುದ್ರಾಂಕ ಶುಲ್ಕ ರೂ. 100/-	ಕಸ್ಟಮ್ಸ್ ಅಥವಾ ಎಕ್ಸೈಸ್ ಬಾಂಡ್ a) ಮೊತ್ತವು ರೂ. 1000/-ಗಳನ್ನು ಮೀರದಿದ್ದಲ್ಲಿ b) ಇನ್ನಿತರೆ ಪ್ರಕರಣಗಳಲ್ಲಿ	ಸದರಿ ಮೊತ್ತಕ್ಕೆ ಬಾಂಡ್‌ಗೆ ಅನ್ವಯವಾಗುವ ಮುದ್ರಾಂಕ ಶುಲ್ಕ ರೂ. 100/-
7	ಬ್ರೋಕರ್ಸ್ ನೋಟ್	37(a)	ಟಿಪ್ಪಣಿ ಅಥವಾ ಜ್ಞಾಪಕ ಪತ್ರ ಅಥವಾ ವ್ಯವಹಾರದ ದಾಖಲೆ (ಎಲೆಕ್ಟ್ರಾನಿಕ್ ಅಥವಾ ಇತರೆ ಮಾಧ್ಯಮದಲ್ಲಿ) ಕರ್ನಾಟಕ ರಾಜ್ಯ ಅಥವಾ ಇತರೆ ಪ್ರದೇಶದಲ್ಲಿ ವಾಸಿಸುವ ಪಕ್ಷಕಾರರ ಪರವಾಗಿ, ಸ್ಟಾಕ್ ಎಕ್ಸ್‌ಚೇಂಜ್ ಅಥವಾ ಅಸೋಸಿಯೇಷನ್ ಅಥವಾ ಇನ್ನಿತರೆ ಮೂಲಗಳಿಂದ ಮಾಲೀಕರ ಪರವಾಗಿ ದಲ್ಲಾಳಿಯು ಅಥವಾ		ಟಿಪ್ಪಣಿ ಅಥವಾ ಜ್ಞಾಪಕ ಪತ್ರ ಅಥವಾ ವ್ಯವಹಾರದ ದಾಖಲೆ (ಎಲೆಕ್ಟ್ರಾನಿಕ್ ಅಥವಾ ಇತರೆ ಮಾಧ್ಯಮದಲ್ಲಿ) ಕರ್ನಾಟಕ ರಾಜ್ಯ ಅಥವಾ ಇತರೆ ಪ್ರದೇಶದಲ್ಲಿ ವಾಸಿಸುವ ಪಕ್ಷಕಾರರ ಪರವಾಗಿ, ಸ್ಟಾಕ್ ಎಕ್ಸ್‌ಚೇಂಜ್ ಅಥವಾ ಅಸೋಸಿಯೇಷನ್ ಅಥವಾ ಇನ್ನಿತರೆ ಮೂಲಗಳಿಂದ ಮಾಲೀಕರ ಪರವಾಗಿ ದಲ್ಲಾಳಿಯು ಅಥವಾ ವ್ಯಾಪಾರದ ಪ್ರತಿನಿಧಿಯು ಖರೀದಿಸಿದ ಅಥವಾ ಮಾರಾಟ ಮಾಡಿದ ಬಗ್ಗೆ ಮಾಲೀಕರಿಗೆ ಎಲೆಕ್ಟ್ರಾನಿಕ್ ಅಥವಾ	

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
			ವ್ಯಾಪಾರದ ಪ್ರತಿನಿಧಿಯು ಖರೀದಿಸಿದ ಅಥವಾ ಮಾರಾಟ ಮಾಡಿದ ಬಗ್ಗೆ ಮಾಲೀಕರಿಗೆ ಎಲೆಕ್ಟ್ರಾನಿಕ್ ಅಥವಾ ಇನ್ನಿತರೆ ಮಾಧ್ಯಮದಲ್ಲಿ ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪಕ ಪತ್ರ ಅಥವಾ ವ್ಯವಹಾರದ ದಾಖಲೆ a) ಸಾಮಾನು ಅಥವಾ ಸರಕುಗಳಿಗೆ ಸಂಬಂಧಿಸಿದಂತೆ	ಸಾಮಾನು ಅಥವಾ ಸರಕುಗಳ ಮೌಲ್ಯದ ಪ್ರತಿ ರೂ. 10,000/- ಅಥವಾ ಭಾಗಾಂಶದ ಮೇಲೆ ಒಂದು ರೂಪಾಯಿ	ಇನ್ನಿತರೆ ಮಾಧ್ಯಮದಲ್ಲಿ ಕಳುಹಿಸಿದ ಟಿಪ್ಪಣಿ ಅಥವಾ ಜ್ಞಾಪಕ ಪತ್ರ ಅಥವಾ ವ್ಯವಹಾರದ ದಾಖಲೆ a) ಸಾಮಾನು ಅಥವಾ ಸರಕು ಅಥವಾ ಕರೆನ್ಸಿ ನೋಟುಗಳಿಗೆ ಸಂಬಂಧಿಸಿದಂತೆ	ಸಾಮಾನು ಅಥವಾ ಸರಕುಗಳ ಅಥವಾ ಕರೆನ್ಸಿ ನೋಟುಗಳ ಮೌಲ್ಯದ ಪ್ರತಿ ರೂ. 10,000/- ಅಥವಾ ಭಾಗಾಂಶದ ಮೇಲೆ, ಒಂದು ರೂಪಾಯಿ, ಗರಿಷ್ಠ ರೂ. 50/-
8	ಪಾಲುದಾರಿಕೆ ಪತ್ರ	40	ಪಾಲುದಾರಿಕೆ A. ದಸ್ತಾವೇಜು a) ಪಾಲುದಾರಿಕೆ ಬಂಡವಾಳವು ರೂ. 5000/- ಗಳನ್ನು ಮೀರದಿದ್ದಾಗ	ರೂ. 100/-	ಪಾಲುದಾರಿಕೆ A. ದಸ್ತಾವೇಜು a) ಪಾಲುದಾರಿಕೆ ಬಂಡವಾಳವು ರೂ. 50000/- ಗಳನ್ನು ಮೀರದಿದ್ದಾಗ	ರೂ. 500/-

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
			b) ಇನ್ನಿತರೆ ಪ್ರಕರಣಗಳಲ್ಲಿ	ರೂ. 1000/-	b) ಇನ್ನಿತರೆ ಪ್ರಕರಣಗಳಲ್ಲಿ	ರೂ. 2000/-
			B. ಪುನರ್ರಚನೆ b) ಇನ್ನಿತರೆ ಪ್ರಕರಣಗಳಲ್ಲಿ	ರೂ. 500/-	B. ಪುನರ್ರಚನೆ b) ಇನ್ನಿತರೆ ಪ್ರಕರಣಗಳಲ್ಲಿ	ರೂ. 1000/-
			C. ವಿಸರ್ಜನೆ b) ಇನ್ನಿತರೆ ಪ್ರಕರಣಗಳಲ್ಲಿ	ರೂ. 500/-	C. ವಿಸರ್ಜನೆ b) ಇನ್ನಿತರೆ ಪ್ರಕರಣಗಳಲ್ಲಿ	ರೂ. 1000/-
9	ಅಭಿವೃದ್ಧಿದಾರರು/ ಪ್ರವರ್ತಕರಿಗೆ ನೀಡುವ ಸಾಮಾನ್ಯ ಅಧಿಕಾರ ಪತ್ರ	41(ea)	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಬಹುಘಟಕಗಳನ್ನು ಒಳಗೊಂಡಿರುವ ಮನೆ ಅಥವಾ ಕಟ್ಟಡ ಅಥವಾ ಅಪಾರ್ಟ್‌ಮೆಂಟ್‌ನ ಘಟಕ ಅಥವಾ ಫ್ಲ್ಯಾಟ್ ಅಥವಾ ಬಹುಮಹಡಿ ಕಟ್ಟಡಗಳ ಭಾಗಗಳೂ ಸೇರಿದಂತೆ, ಸ್ಥಿರಾಸ್ತಿಯ ನಿರ್ಮಾಣ ಅಥವಾ ಅಭಿವೃದ್ಧಿಗೆ ಸಂಬಂಧಿಸಿದಂತೆ, ಅಭಿವೃದ್ಧಿದಾರ, ನಿರ್ಮಾಣಗಾರ,	ಸಾಮಾನ್ಯ ಅಧಿಕಾರ ಪತ್ರಕ್ಕೆ ಒಳಪಟ್ಟ ಸ್ವತ್ತಿನ ಮಾರುಕಟ್ಟೆ ಮೌಲ್ಯ ಅಥವಾ ಪ್ರತಿಫಲ ಇವುಗಳಲ್ಲಿ ಯಾವುದೂ ಅಧಿಕ ಮೊತ್ತವೋ ಅದರ ಮೇಲೆ ಶೇ 1 ರಂತೆ, ಗರಿಷ್ಠ ರೂ 15ಲಕ್ಷಗಳು

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
					ಪ್ರಮೋಟರ್ ಅಥವಾ ಇನ್ನಾವುದೇ ಹೆಸರಿನಿಂದ ಕರೆಯಲ್ಪಡುವ ವ್ಯಕ್ತಿಯಿಂದ ಸದರಿ ನಿರ್ಮಾಣ ಅಥವಾ ಅಭಿವೃದ್ಧಿಗಾಗಿ ನಿರ್ಮಿಸಿದ ಅಥವಾ ಅಭಿವೃದ್ಧಿಪಡಿಸಿದ ಸ್ವತ್ತನ್ನು ಅಭಿವೃದ್ಧಿದಾರರು ಮತ್ತು ಸ್ವತಿನ ಮಾಲೀಕರು/ಗೇಣಿದಾರರು ಜಂಟಿಯಾಗಿ ಹೊಂದಿರಬೇಕೆಂಬ ಅಥವಾ ಜಂಟಿಯಾಗಿ ಮಾರಾಟ ಮಾಡಬೇಕೆಂಬ ಅಥವಾ ಭಾಗಶಃ ಜಂಟಿಯಾಗಿ ಹೊಂದಿದ್ದು, ಉಳಿದ ಭಾಗವನ್ನು ಜಂಟಿಯಾಗಿ ಮಾರಾಟ ಮಾಡಬೇಕೆಂಬ ನಿಬಂಧನೆಯೊಂದಿಗೆ ಸ್ವತ್ತನ್ನು ನಿರ್ಮಿಸಲು ಅಥವಾ ಅಭಿವೃದ್ಧಿಪಡಿಸಲು ನೀಡಿದ ಸಾಮಾನ್ಯ ಅಧಿಕಾರ ಪತ್ರ..	ಮೀರದಂತೆ
10	ಕಾಮಗಾರಿ ಕರಾರು	56	ಹೊಸ ಸೇರ್ಪಡೆ	ಹೊಸ ಸೇರ್ಪಡೆ	ಕಾಮಗಾರಿ/ಕಾರ್ಮಿಕ/ಸೇವೆಗಳಿಗೆ ಸಂಬಂಧಿಸಿದ ಕರಾರು ಪತ್ರಗಳು	

ಕ್ರ ಸಂ	ಕಂಡಿಕೆ	ಅನುಚ್ಛೇದ	ಪ್ರಸ್ತುತ		ಉದ್ದೇಶಿತ	
			ವಿವರಣೆ	ಮುದ್ರಾಂಕ ಶುಲ್ಕದ ದರ	ವಿವರಣೆ	ಮುದ್ರಾಂಕ ಶುಲ್ಕದ ದರ
					a) ಕರಾರಿನಲ್ಲಿ ಒಳಗೊಂಡ ಮೊತ್ತ ಅಥವಾ ಪ್ರತಿಫಲವು ರೂ. ಹತ್ತು ಲಕ್ಷಗಳನ್ನು ಮೀರದೆ ಇದ್ದಾಗ	ರೂ. ಒಂದು ನೂರು
					b) ಕರಾರಿನಲ್ಲಿ ಒಳಗೊಂಡ ಮೊತ್ತ ಅಥವಾ ಪ್ರತಿಫಲವು ರೂ. ಹತ್ತು ಲಕ್ಷಗಳನ್ನು ಮೀರಿದ್ದಾಗ	ರೂ. ಒಂದು ನೂರು + ರೂ. ಹತ್ತು ಲಕ್ಷಕ್ಕೆ ಮೇಲ್ಪಟ್ಟ ಪ್ರತಿ ರೂ. ಹತ್ತು ಲಕ್ಷ ಅಥವಾ ಅದರ ಭಾಗಾಂಶಕ್ಕೆ ರೂ. ಒಂದು ನೂರು ಗರಿಷ್ಠ ರೂ. ಐದು ಲಕ್ಷ

ಅನುಬಂಧ-3 (ಇ)

1. 10 ಲಕ್ಷ ರೂ.ಗಳಿಗಿಂತಲೂ ಮೌಲ್ಯ ಹೆಚ್ಚಾಗಿರುವ ಮೋಟಾರ್ ಕ್ಯಾಬ್ ವಾಹನಗಳಿಗೆ ಜೀವಾವಧಿ ತೆರಿಗೆ (ಉಲ್ಲೇಖ : ಕಂಡಿಕೆ 280)

ಹಾಲಿ ಇರುವ ತೆರಿಗೆ			ಪ್ರಸ್ತಾವಿತ ತೆರಿಗೆ		
ಐಟಂ ಸಂಖ್ಯೆ	ವಾಹನದ ವರ್ಗ	ತ್ರೈಮಾಸಿಕ ತೆರಿಗೆ ರೂ	ಐಟಂ ಸಂಖ್ಯೆ	ವಾಹನದ ವರ್ಗ	ಜೀವಾವಧಿ ತೆರಿಗೆ ರೂ
4 (1)(ಬಿ)	5+1 ವರೆಗೆ ಆಸನ ಸಾಮಾರ್ಥ್ಯ ಇರುವ ಮೋಟಾರು ಕ್ಯಾಬ್ ವಾಹನಗಳು	ಪ್ರತಿ ಆಸನಕ್ಕೆ 100/-	4 (1)(ಬಿ)	5+1 ವರೆಗೆ ಆಸನ ಸಾಮಾರ್ಥ್ಯ ಇರುವ ಮೋಟಾರು ಕ್ಯಾಬ್ ವಾಹನಗಳು	ವಾಹನ ಮೌಲ್ಯದ ಮೇಲೆ ಶೇಕಡ 15 ರಷ್ಟು
4 (4) (ಎ)	6+1 ಆಸನ ಸಾಮರ್ಥ್ಯ ಮತ್ತು 6 ಚ.ಮೀ ನೆಲ ವಿಸ್ತೀರ್ಣ ಮೀರದ ಮೋಟಾರು ಕ್ಯಾಬ್ ವಾಹನಗಳು	ಪ್ರತಿ ಚ.ಮೀಗೆ 750/-	4 (4) (ಎ)	6+1 ಆಸನ ಸಾಮರ್ಥ್ಯ ಮತ್ತು 6 ಚ.ಮೀ ನೆಲ ವಿಸ್ತೀರ್ಣ ಮೀರದ ಮೋಟಾರು ಕ್ಯಾಬ್ ವಾಹನಗಳು	ವಾಹನ ಮೌಲ್ಯದ ಮೇಲೆ ಶೇಕಡ 15 ರಷ್ಟು

2. 10 ಲಕ್ಷ ರೂ. ಗಳಿಗಿಂತಲೂ ಮೌಲ್ಯ ಹೆಚ್ಚಾಗಿರುವ ಮೋಟಾರ್ ಕ್ಯಾಬ್ ವಾಹನಗಳಿಗೆ ಜೀವಾವಧಿ ತೆರಿಗೆ

ಕ್ರಮ ಸಂಖ್ಯೆ	ವಾಹನದ ವರ್ಗ	ಶೇಕಡವಾರು ತೆರಿಗೆ ವಿವರ
ಎ	ಹೊಸ ವಾಹನದ ನೋಂದಣಿ ಸಮಯದಲ್ಲಿ	ವಾಹನ ಮೌಲ್ಯದ ಮೇಲೆ ಶೇಕಡ 15 ರಷ್ಟು ತೆರಿಗೆ
ಬಿ	ವಾಹನವು ಈಗಾಗಲೇ ನೋಂದಣಿಯಾಗಿದ್ದಲ್ಲಿ ಹಾಗೂ ಅದರ ವಯಸ್ಸು ವಾಹನ ನೋಂದಣಿಯಾದ ತಿಂಗಳಿನಿಂದ	ಉಪ ವಾಕ್ಯ ಎ ನಲ್ಲಿ ವಿಧಿಸಲಾಗಿರುವ ಜೀವಾವಧಿ ತೆರಿಗೆಯಲ್ಲಿ ಶೇಕಡಾವಾರು
1	ನೋಂದಣಿಯಾದ ತಿಂಗಳಿನಿಂದ 2 ವರ್ಷಗಳಿಗೆ ಮೀರದ	93%
2	2 ವರ್ಷಗಳಿಗೆ ಮೀರಿದ ಆದರೆ 3 ವರ್ಷಗಳಿಗೆ ಮೀರದ	87%
3	3 ವರ್ಷಗಳಿಗೆ ಮೀರಿದ ಆದರೆ 4 ವರ್ಷಗಳಿಗೆ ಮೀರದ	81%
4	4 ವರ್ಷಗಳಿಗೆ ಮೀರಿದ ಆದರೆ 5 ವರ್ಷಗಳಿಗೆ ಮೀರದ	75%
5	5 ವರ್ಷಗಳಿಗೆ ಮೀರಿದ ಆದರೆ 6 ವರ್ಷಗಳಿಗೆ ಮೀರದ	69%
6	6 ವರ್ಷಗಳಿಗೆ ಮೀರಿದ ಆದರೆ 7 ವರ್ಷಗಳಿಗೆ ಮೀರದ	64%
7	7 ವರ್ಷಗಳಿಗೆ ಮೀರಿದ ಆದರೆ 8 ವರ್ಷಗಳಿಗೆ ಮೀರದ	59%
8	8 ವರ್ಷಗಳಿಗೆ ಮೀರಿದ ಆದರೆ 9 ವರ್ಷಗಳಿಗೆ ಮೀರದ	54%

ಕ್ರಮ ಸಂಖ್ಯೆ	ವಾಹನದ ವರ್ಗ	ಶೇಕಡವಾರು ತೆರಿಗೆ ವಿವರ
9	9 ವರ್ಷಗಳಿಗೆ ಮೀರಿದ ಆದರೆ 10 ವರ್ಷಗಳಿಗೆ ಮೀರದ	49%
10	10 ವರ್ಷಗಳಿಗೆ ಮೀರಿದ ಆದರೆ 11 ವರ್ಷಗಳಿಗೆ ಮೀರದ	45%
11	11 ವರ್ಷಗಳಿಗೆ ಮೀರಿದ ಆದರೆ 12 ವರ್ಷಗಳಿಗೆ ಮೀರದ	41%
12	12 ವರ್ಷಗಳಿಗೆ ಮೀರಿದ ಆದರೆ 13 ವರ್ಷಗಳಿಗೆ ಮೀರದ	37%
13	13 ವರ್ಷಗಳಿಗೆ ಮೀರಿದ ಆದರೆ 14 ವರ್ಷಗಳಿಗೆ ಮೀರದ	33%
14	14 ವರ್ಷಗಳಿಗೆ ಮೀರಿದ ಆದರೆ 15 ವರ್ಷಗಳಿಗೆ ಮೀರದ	29%
15	15 ವರ್ಷಗಳಿಗೆ ಮೀರಿದ	25%

ಜಮೆ - ರೂಪಾಯಿ ಎಷ್ಟು ಭಾಗ ಯಾವುದರಿಂದ



ವೆಚ್ಚ (ಯೋಜನೆ ಮತ್ತು ಯೋಜನೇತರ),
ರೂಪಾಯಿ ಯಾವ ಭಾಗ ಎಷ್ಟೆಷ್ಟು?




ರಾಜ್ಯದ ಸ್ವಂತ ತೆರಿಗೆಗಳ ವಿವರಗಳು 2012-13
(ಆಯವ್ಯಯ ಅಂದಾಜುಗಳು)
(ಉಪಕರ ಹೊರತುಪಡಿಸಿ) (ಕೋಟಿ ರೂ.ಗಳಲ್ಲಿ ಮತ್ತು ಶೇಕಡಾವಾರು)
ಮೋಟಾರು ವಾಹನಗಳು, 3350, 6%
ಇತರೆ, 1396, 3%
ಸ್ಟ್ಯಾಂಪುಗಳು ಮತ್ತು ನೋಂದಣಿ ಶುಲ್ಕ, 5200, 10%
ರಾಜ್ಯ ಅಬಕಾರಿ, 10775, 21%
ವಾಣಿಜ್ಯ ತೆರಿಗೆಗಳು, 31100, 60%

ರಾಜ್ಯ ಯೋಜನಾ ವೆಚ್ಚ 2012-13
(ಕೋಟಿ ರೂ.ಗಳಲ್ಲಿ)